# || ಶ್ರೀ ಲಲಿತಾ ಸಹಸ್ರನಾಮ ಮಹಿಮೆ ||

## ಕನ್ನಡ ಸಾರಾಂಶ

# || ಶ್ರೀ ಲಲಿತಾ ಸಹಸ್ರನಾಮ ಮಹಿಮೆ ||
# ಕನ್ನಡ ಸಾರಾಂಶ




| | |
|---|---|
| ತಮಿಳು ಮೂಲ ಲೇಖಕರು | "ಕೈಕಾಟಿ" ಗಣಪತಿ ಅರುಣಾಚಲಂ |
| ಕನ್ನಡಕ್ಕೆ ಅನುವಾದ | L ಶ್ರೀನಿವಾಸ |
| ಅನುವಾದ ಸಹಾಯ | J ರಾಮಚಂದ್ರನ್ |

**Sri Lalitha Sahasranama Mahime (Kannada)**
**Originally Compiled in Tamil – Sri Kaikaatti Ganapathy Arunachalam**
**Kannada Translation – Sri L Srinivasa**


| | | |
|---|---|---|
| **First Edition** | **:** | **March 2020 (500 Copies)** |
| **Price** | **:** | **Rs 70.00** |
| **Printers** | **:** | **Sri Manjunatha Graphics, Bengaluru.** |


**Copies Available at:**


**"Kaikaatti"**
**Ganapathy Arunachalam**
**Flat no 103, Vars Valencia,**
**First Cross, Kaggadasapura,**
**C V Raman Nagar, Bengaluru – 560 093**
**Ph: 9886393418**
**E-Mail: achalam.ganapathy@gmail.com**


**Source of Photographs – Internet**

**SAAADU** ಮನೆಯವರು ಈ ಶ್ರೀ ಲಲಿತಾ ಸಹಸ್ರನಾಮ ಮಹಿಮೆಯ ಪುಸ್ತಕವನ್ನು ಗೋಕರ್ಣದ ಶ್ರೀ ರಾಮಚಂದ್ರಾಪುರದ ಜಗದ್ಗುರುಗಳಾದ ಶ್ರೀ ರಾಘವೇಶ್ವರ ಭಾರತಿಯವರ ಚರಣ ಕಮಲದಲ್ಲಿ ಅತ್ಯಂತ ಶ್ರದ್ಧಾ ಭಕ್ತಿಗಳೊಂದಿಗೆ ಸಮರ್ಪಿಸಿಕೊಂಡು, ಪ್ರಭು ಶ್ರೀ ಶಂಕರರ ಮತ್ತು ಶ್ರೀ ಆದಿ ಶಂಕರಾಚಾರ್ಯರ ಕೃಪಾಕಟಾಕ್ಷವು ಈ ಪುಸ್ತಕದ ಪ್ರಕಾಶನಕ್ಕೆ ಸಹಕರಿಸಿದ ಎಲ್ಲಾ ಭಕ್ತಜನರಿಗೂ ಅನುಗ್ರಹವಾಗಿ ಅವರ ಕುಲ ಸಂಪನ್ನದಲ್ಲಿ ಶಾಂತಿ, ಸಹಬಾಳ್ವೆ ಮೆತ್ತು ಸಂತೋಷವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇವೆ. ಹಾಗೂ ತಾಯಿ ಶ್ರೀ ಲಲಿತೆಯು ಅವರನ್ನು ಸದಾ ಕಾಲವೂ ಎಲ್ಲಾ ತೊಂದರೆಗಳಿಂದ ಕಾಪಾಡಲೆಂದು ಆಶಿಸುತ್ತೇವೆ.

# ಮುನ್ನುಡಿ




ಆಸ್ತಿಕ ಸ್ನೇಹಿತರಿಗೆಲ್ಲ ನಮಸ್ಕಾರಗಳು.

ತಮ್ಮ ಕೈಯಲ್ಲಿರುವ ಶ್ರೀ ಲಲಿತಾಸಹಸ್ರನಾಮ ಮಹಿಮೆಯೆಂಬ ಪುಸ್ತಕವು ಮತ್ತು ಅದರ ಮೂಲ ಲೇಖಕರೂ ಆದ ನಮ್ಮೆಲ್ಲರ ಅಚ್ಚುಮೆಚ್ಚಿನ "ವಿಚಾರಗಳ ಜೇನು" ಶ್ರೀ ಕೈಕಾಟಿ ಅರುಣಾಚಲಂ ರವರ ಬಗ್ಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುವುದರಲ್ಲಿ ಬಹಳ ಸಂತೋಷವಾಗುತ್ತಿದೆ.

ಪ್ರಪಂಚದಲ್ಲಿರುವ ಎಲ್ಲಾ ಗ್ರಂಥಗಳಲ್ಲಿ ಉತ್ತಮವಾದದ್ದೆಂದು ಹೆಸರುಗಳಿಸಿರುವುದು ಶ್ರೀಲಲಿತಾಸಹಸ್ರನಾಮವು. ಅದು ಅಂಬಿಕೆಯ ಸ್ತೋತ್ರ, ಪರಾಕ್ರಮ ಮತ್ತು ಅವಳ ಕರುಣೆಯನ್ನು ಎತ್ತಿ ತೋರಿಸುತ್ತದೆ. ಮೂಲ ಲೇಖಕರು ಇದನ್ನು ಎಲ್ಲರೂ ಅರ್ಥೈಸಿಕೊಂಡು ಪಾರಯಣ ಮಾಡಿ ಸಕಲ ಒಳಿತನ್ನು ಪಡೆಯಬೇಕೆಂಬ ಉದ್ದೇಶದಿಂದ, ಜೇನು ಹುಳು ಹೇಗೆ ವಿವಿಧ ಹೂಗಳಿಂದ ಮಧುವನ್ನು ಸಂಗ್ರಹಿಸುತ್ತದೆಯೋ ಹಾಗೆ ಶ್ರೀ ಅರುಣಾಚಲಂ ರವರು ಹಲವು ಗ್ರಂಥಗಳ ಅಧ್ಯಯನದಿಂದ ಶ್ರೀ ಲಲಿತಾಸಹಸ್ರನಾಮದಲ್ಲಿರುವ ನಾಮಗಳ ಅರ್ಥಗಳನ್ನು ಮತ್ತು ವಿವಿದ ಗ್ರಂಥಗಳಲ್ಲಿ ಮತ್ತು ಕಥೆಗಳಲ್ಲಿ ಅದರ ಉಲ್ಲೇಖ ಹಾಗೂ ಸಂದರ್ಭಗಳ ಬಗ್ಗೆ ಈ ಪುಸ್ತಕದಲ್ಲಿ ವಿವರಿಸಿದ್ದಾರೆ.

ಒಂದು ಕೃತಿಯ ಮೂಲ ಉದ್ದೇಶವು ಸರಿಯಾಗಿ ಓದುಗರ ಮನಸ್ಸನ್ನು ಮುಟ್ಟುವ ಹಾಗೆ ವಿಚಾರಗಳನ್ನು ಉಲ್ಲೇಖಿಸಿರುವ ಇದರ ಲೇಖಕರಾದ ಶ್ರೀ ಅರುಣಾಚಲಂ ರವರ ಕಠಿಣ ಶ್ರಮವು ಮತ್ತು ಅಧ್ಯಯನವು ಬಹಳ ಪ್ರಶಂಸಹನೀಯ. ಎಲ್ಲರೂ ಈ ಪುಸ್ತಕವನ್ನು ಖರೀದಿಸಿ, ಇದರಲ್ಲಿ ಹೇಳಿರುವಂತೆ ತಾಯಿಯ ನಾಮಗಳನ್ನು ಪಾರಾಯಣ ಮಾಡಿ ತಾಯಿ ಭುವನೇಶ್ವರಿಯ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿಸಿಕೋಳ್ಳುತ್ತೇನೆ.

**Manikanta Bhajan Mandali**
**Kaggadasapura.**
**Bengaluru 560093**

ಇಂತಿ,
**C. K. LAKSHMANAN**

DR K. V MANI

412, JAL VAYU VIHAR,
KAMMANAHALLI,
BENGALURU – 43
9901767801

## ಬನ್ನಿ ಓದೋಣ ಮಹಿಮೆಯನ್ನು
## (AN EXPERIENCE BEYOND WORDS)

ಕಳೆದ ಕೆಲವು ಸಮಯಗಳಿಂದ ಕೈಕಾಟೆ ಶ್ರೀ ಅರುಣಾಚಲಂ ರವರ ಪರಿಚಯವಾದದ್ದು ಬಹಳ ಹೆಮ್ಮೆಯ ವಿಷಯವಾಗಿದೆ ಎಂಬುದನ್ನು ತಿಳಿಯ ಬಯಸುತ್ತೇನೆ. ಶ್ರೀ ಲಲಿತಾಸಹಸ್ರನಾಮ ಪುಸ್ತಕವು ಜ್ಞಾನಮಾರ್ಗಕ್ಕೆ ಒಂದು ಊರುಗೋಲಾಗಿರುವಂತೆ, ಚಿಕ್ಕ ಮಕ್ಕಳೂ ಓದಿ ಅರ್ಥಮಾಡಿಕೋಳ್ಳುವುದಕ್ಕೆ ಬಹಳ ಸುಲಭವಾಗಿ ಬರೆದು, ಪ್ರಕಾಶಿಸಿರುವ ಶ್ರೀ ಕೈಕಾಟೆ ಅರುಣಾಚಲಂ ರವರ ಜ್ಞಾನ ಭಂಡಾರವನ್ನು ತಿಳಿಸುತ್ತದೆ. ಶ್ರೀ ಅರುಣಾಚಲಂ ರವರು ಎಲ್ಲರಿಗೂ "ಕೈಕಾಟೆ ಮಾಮ" ಎಂದೆ ಪ್ರಚಲಿತರಾಗಿದ್ದಾರೆ. ಶ್ರೀವಿಧ್ಯಾ ಉಪಾಸನೆಯು ಜ್ಞಾನಮಾರ್ಗದಲ್ಲಿ ಒಂದು ಸುಲಭ ದಾರಿಯೆಂಬುದಕ್ಕೆ ಯಾವುದೇ ಸಂಶಯವಿಲ್ಲ. ದೇವರಿಂದಲೇ ಸೃಷ್ಟಿಸಲಾದ ಈ ಗ್ರಂಥವು ಮನುಷ್ಯರಿಗೆ ದಾರಿದೀಪವಾಗಿದೆ ಎಂಬುದು ನನ್ನ ನಂಬಿಕೆ. ಎಲ್ಲರ ಮನೆಯಲ್ಲಿಯೂ ಸಂಗ್ರಹಕ್ಕೆ ಯೋಗ್ಯವಾದ ಪುಸ್ತಕವಾಗಿದೆ. ಅಂಬಿಕೆಯ ಪೂರ್ಣಾನುಗ್ರಹವಿರುವ ಶ್ರೀ ಅರುಣಾಚಲಂ ರವರು ಇದೆ ರೀತಿಯಾಗಿ ಹತ್ತು ಹಲವು ಪುಸ್ತಕಗಳನ್ನು ಸಾಮಾನ್ಯರ ಅಭಿವೃದ್ಧಿಗಾಗಿ ಹೊರತರುವ ಶಕ್ತಿಯನ್ನು ದಯಪಾಲಿಸೆಂದು ತಾಯಿ ಲಲಿತೆಯ ಬಳಿ ಪ್ರಾರ್ಥಿಸುತ್ತೇನೆ.

I WISH ARUNAACHALAM MAMA ALL SUCCESS IN HIS ONE MAN NOBLE GLOBAL MISSION OF TAKING SRI LALITHA SAHASRANAAMAM FOR THE BENEFIT OF WORLD POPULATION.

ಪ್ರೀತಿಗಳೊಂದಿಗೆ,
K V MANI.
20-09-2019

# ಲೇಖಕರ ನುಡಿ:

ಶ್ರೀ ಪಾದ ಚರಣಗಳಲ್ಲಿ ಒಂದು ಚಿಕ್ಕ ಕಾಣಿಕೆ:

"ಉನ್ನೈ ವಿಟ್ಟಾಲ್ ಯಾರ್ ಎನಕ್ಕು ತುಣೈ ವರುವಾರ್" ಎಂಬುದೇ ಕಗ್ಗದಾಸಪುರ ಭಕ್ತರ ಸ್ಮರಣೆಯು. ಶ್ರೀ ಲಲಿತಾ ಸಹಸ್ರನಾಮವೆಂದರೆ ಎಲ್ಲರ ಜ್ಞಾಪಕಕ್ಕೂ ಬರುವವರು ಶ್ರೀ ಚಿತ್ರಾಜಿ. ಶ್ರೀ ಲಲಿತಾಸಹಸ್ರನಾಮವನ್ನು ರಾಜರಾಜೇಶ್ವರಿಯಿಂದ ಶ್ರೀ ತಿರುಮಿಯಚ್ಚೂರ್ ವರೆಗೆ ಹರಡಲು ಕಾರಣವಾದವರಲ್ಲಿ ಒಬ್ಬರಾಗಿದ್ದಾರೆ. ಸುಮಾರು ಹದಿನೈದು ವರ್ಷಗಳಿಂದ ದಿನವೂ ಬೆಳಗ್ಗೆ ಕೇಳುತ್ತಿದ್ದೇನೆ. ಒಮ್ಮೆ ಮನೆಯಲ್ಲಿ ನವರಾತ್ರಿಯಲ್ಲಿನ ಪಾರಾಯಣದ ಸಮಯದಲ್ಲಿ ಒಂದು ದಿವ್ಯವಾಣಿಯಾಗಿ ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರು ಹೇಳಿದ್ದ ಎಲ್ಲಾ ಮಹಿಳೆಯರೂ ಹೇಳಲು ಸಾಧ್ಯವಾದ ಈ ಪಾರಾಯಣದ ಮಹತ್ವದ ಬಗ್ಗೆ ನೆನಪಾಯಿತು. ಈ ಸಣ್ಣ ಪ್ರಯತ್ನವು ಹೀಗೆ ಜನ್ಮತಳೆದು, ಅದರ ಬಿಂಬವಾಗಿ ಜೀವಿಗಳ ತತ್ವವಾದ ಶ್ರೀ ಲಲಿತಾಸಹಸ್ರನಾಮ ಮಹಿಮೆಯೆಂಬ ಪುಸ್ತಕವು ತಮ್ಮ ಕೈಯಲ್ಲಿದೆ. ನನ್ನ ಕೃತಿಗಳಾದ " ಕೈಕಾಟಿ" ಮತ್ತು sweet tweet ಪುಸ್ತಕಗಳು ಹೊರಬಂದ ನಂತರ ಭಗವದ್ಗೀತೆ ಸಾರಾಂಶ, ರಾಮಚರಿತಂ ಮತ್ತು ನಾನ್ ಎಂಬ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಲಿಲ್ಲ. ದೇವರು ಎಲ್ಲವನ್ನು ಸೃಷ್ಟಿಸಿದವನು ಮತ್ತು ಎಲ್ಲರಿಗೂ ಬಲಿಷ್ಟನು. ಅವನು ನಾವು ಮಾಡುವ ಕರ್ಮಗಳಿಗೆ ಸರಿಯಾದ ಫಲಗಳನ್ನು ಕೊಡುತ್ತಾನೆಂಬ ನಂಬಿಕೆಯು ಬೇಕು, ಇಷ್ಟಪಟ್ಟ ವಸ್ತುವು ಸರಿಯಾದ ಸಮಯಕ್ಕೆ ಅಥವಾ ಯಾವಗಲಾದರು ಸಿಕ್ಕಾಗ ದೇವರಿಗೆ ನಾವು ಧನ್ಯವಾದಗಳನ್ನು ತಿಳಿಸುವುದು ಸತ್ಪುರುಷರ ಲಕ್ಷಣವಾಗುತ್ತದೆ. ಸಮರ್ಪಣ ಮಾಡುವಾಗ ಸಾತ್ವೀಕ ಭಾವದಿಂದ ಮತ್ತು ಗರ್ವವಿಲ್ಲದೆ ಇರಬೇಕು. ಭಕ್ತಿಯಿಲ್ಲದವನಿಂದ ಸಮರ್ಪಿಸಿದವುಗಳು ಅತಿ ಉತ್ತಮವಾದುದಾದರೂ ಸಂತೋಷವನ್ನು ಉಂಟುಮಾಡುವುದಿಲ್ಲ. ಎಲೆ, ಪುಷ್ಪ, ಹಣ್ಣು ಅಥವಾ ನೀರು ಯಾವುದಾದರೊಂದನ್ನು ಭಕ್ತಿಯಿಂದ ಯಾರು ನನಗೆ ಕೊಡುತ್ತಾರೋ ಅದನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ ಎಂದು ಹೇಳುತ್ತಾರೆ ಶ್ರೀ ಕೃಷ್ಣಭಗವಾನ್ ಗೀತೆಯಲ್ಲಿ, ಇದಕ್ಕೆ ಬೇಡರ ಕಣ್ಣಪ್ಪನು ಮತ್ತು ಗುಹನು ಉದಾಹರಣೆಯಾಗಿದ್ದಾರೆ. ಶ್ರೀ ಆದಿಶಂಕರರು ತೋರಿಸಿಕೊಟ್ಟಿರುವ ತಂತ್ರ ಶಾಸ್ತ್ರವು ಈ ಪ್ರಪಂಚದಲ್ಲಿನ ಎಲ್ಲಾಸುಖ ಮತ್ತು ಆಧ್ಯಾತ್ಮದ ಮಹದಾನಂದ ಪಡೆಯಬೇಕಾದರೆ ಶ್ರೀ ಅಂಬಿಕೆಯ ಉಪಾಸನೆಯಿಂದ ಮಾತ್ರ ಸಾಧ್ಯವೆಂದು ತಿಳಿಸಿಕೊಡುತ್ತದೆ. "ಯೆತ್ರಾಷ್ಟಿ ಭೋಗೊ ನಹಿ ತತ್ರ ಮೋಕ್ಷಃ | ಯತ್ರಾಷ್ಟಿ ಮೋಕ್ಷೌ ನಹಿ ತತ್ರ ಭೋಗಃ || ಶಿವಾ ಪದಾಂಭೋಜ ಯುಗಾಶ್ಲಕಾಣಾಂ ಭೋಗಃ ಚ ಮೋಕ್ಷಃ ಚ ಕರಸ್ತ ಏವಃ||

ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರ ಕಾರಣಗಳಿಗೆ ಕೆಲವು ಉದಾಹರಣೆಗಳನ್ನು ನೋಡೋಣ, ಶಿವಾನಂದ ಲಹರಿಯು ಚರಿತ್ರದ (ಪ್ರಕೃತಿಯ) ಸೌಂದರ್ಯವೆಂದರೆ ಸೌಂದರ್ಯ ಲಹರಿಯು ಶರೀರ ಸೌಂದರ್ಯವಾಗಿದೆ. ಎರಡೂ ಗ್ರಂಥಗಳಲ್ಲಿ ತೋರುವ ೪೭ ಶ್ಲೋಕಗಳು ನಾಮಾವಳಿಗಳಿಂದ ತೊಡಗಿಕೊಳ್ಳುತ್ತದೆ. ಕಠ, ತೈತ್ತಿರಿಯ, ಮಾಂಡುಕ್ಯ, ಈಶ, ಕೇನ, ಚಾಂಧೂಕ್ಯ, ಮುಂಡಕ, ಬೃಹದಾರಣ್ಯ ಮುಂತಾದ ೧೭ ಉಪನಿಷತ್ತುಗಳಲ್ಲೂ, ಭಗವದ್ಗೀತೆಯ ೧೭೧ ಶ್ಲೋಕಗಳಲ್ಲಿಯೂ ನಾಮಾವಳಿಗಳನ್ನು ಅಳವಡಿಸಿದ್ದಾರೆ. ಪಟ್ಟಣ್ಣಕ್ಕೆ ಬರುವವನು ತಾನು ತಂಗುಲು ಬೇಕಾದ ಸ್ಥಳವನ್ನು ಮೊದಲೆ ಕಾಯ್ದಿಸಿರಬೇಕು ಹಾಗಾದಲ್ಲಿ ತನ್ನ ಕೆಲಸಗಳನ್ನು

ಯಾವುದೆ ತೊಂದರೆಯಿಲ್ಲದೆ ಮಗ್ನನಾಗಬಹುದು. ಇಲ್ಲದಿದ್ದಲ್ಲಿ ತಂಗಲು ಯಾವುದೆ ಸ್ಥಳವಿಲ್ಲದೆ ಒದ್ದಾಡಬೇಕಾಗುತ್ತದೆ. ಹಾಗೆಯೆ ಈ ಪ್ರಪಂಚಕ್ಕೆ ಹೊಸದಾಗಿ ಬರುವವರು ತಾಯಿಯ ಲಲಿತಾಸಹಸ್ರನಾಮವನ್ನು ಒಮ್ಮೆಯಾದರು ಪಾರಾಯಣ ಅಥವಾ ಶ್ರವಣವನ್ನು ಮಾಡಿ, ತಾಯಿಯ ಚರಣಕಮಲವೆಂಬ ವಾಸಸ್ಥಾನದಲ್ಲಿದ್ದರೆ ದೈವಿಕದ, ಆಧ್ಯಾತ್ಮಿಕತೆಯ, ಶಾಂತಿಯ ಅಥವಾ ಮುಕ್ತಿಯ ಯೋಗ ಮಾರ್ಗಗಳಿಗೆ ಸುಗಮವಾಗುವುದೆಂಬುದನ್ನು ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರ ಮಾತುಗಳ ಒಳ ಅರ್ಥವಾಗಿ ಶ್ರೀ ಲಲಿತಾಸಹಸ್ರನಾಮವು ವೇದಗಳಿಗೆ ಸಮವೆಂಬುದನ್ನು ತಿಳಿಸಿಕೊಟ್ಟಿದ್ದಾರೆ.

ಗುರುಜಿ C Kಲಕ್ಷ್ಮಣನ್ ರವರ ಪ್ರಚೋದನೆಯೊಂದಿಗೆ ಮತ್ತು ಶ್ರೀ J ರಾಮಚಂದ್ರನ್ ಮತ್ತು ವಿಮಲ ರಾಮಚಂದ್ರನ್ ರವರ ಸಹಾಯದೊಂದಿಗೂ, ಪೂಜ್ಯ ಶ್ರೀ ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರ ಭಾವನಾ ಪಾದ ಕಮಲಗಳಲ್ಲಿ ಶ್ರೀ ಲಲಿತಾಸಹಸ್ರನಾಮ ಮಹಿಮೆಯನ್ನು ಕಾಣಿಕೆಯಾಗಿ ಸಮರ್ಪಿಸುತ್ತೇನೆ. ಸಂಚರಿಸುವಾಗ ಬೆಳಕಿನ ದೀಪವು ಜೊತೆಗಿದ್ದರೂ ಕೈಗೆ ಒಂದು ಊರುಗೋಲು ಅವಶ್ಯವೆಂಬಂತೆ ಚಿತ್ರಾಜಿ, ಉಮಾಜಿ, ದೀಪಾ ಮತ್ತು ಅಶೋಕ್ ಎಂಬ ನಾಲ್ಕು ಜನರೂ ನನಗೆ ಈ ಪಯಣದಲ್ಲಿ ಊರುಗೋಲಾಗಿದ್ದವರು.

ಶ್ರೀ ಲಲಿತಾಸಹಸ್ರನಾಮ ಮಹಿಮೆಯನ್ನು ಸಮರ್ಪಣೆ ಮಾಡಲು ನನ್ನ ಮನಸ್ಸಿಗೆ ಬೇಕಾದ ಅನುಗ್ರಹವನ್ನು ದಯಪಾಲಿಸಿ ನನ್ನನ್ನು ಸಾಧನವಾಗಿ ಉಪಯೋಗಿಸಿದ ಸಾದುಗಳು ಮತ್ತು ಆಚಾರ್ಯರಿಗೆ ಕಣ್ಣೀರಂಜಲಿ ಸಹಿತ ತಲೆಬಾಗುತ್ತೇನೆ.

**ಗಣಪತಿ ಅರುಣಾಚಲಂ**
ಬೆಂಗಳೂರು
೧೫-೦೮-೨೦೧೯.

"Kaikaatti"
Ganapathy Arunachalam
Flat no 103, Vars Valencia,
First Cross, Kaggadasapura,
C V Raman Nagar, Bengaluru – 560 093
Ph: 9886393418
E-Mail: achalam.ganapathy@gmail.com

## ಕನ್ನಡಾನುವಾದ ನಂತರದ ಮೂಲ ಲೇಖಕರ ನುಡಿ:

ಒಂದು ಗಾಳಿಪಟವು ಹಾರಾಡಲು ಮುಖ್ಯವಾಗಿ ಹಿತ ಮಿತವಾದ ಗಾಳಿಯು ಅತ್ಯವಶ್ಯವಾಗುತ್ತದೆ. ಅದೇ ರೀತಿಯಾಗಿ ಶ್ರೀ ರಾಮಚಂದ್ರನ್ ಮತ್ತು ವಿಮಲ ರಾಮಚಂದ್ರನ್ ರವರು ಗಾಳಿಯಾಗಿ ನಾನು ಬರೆದಿರುವ ಶ್ರೀ ಲಲಿತಾಸಹಸ್ರನಾಮ ಮಹಿಮೆಯನ್ನು ಎತ್ತೆತ್ತರಕ್ಕೆ ಕೊಂಡೊಯ್ದವರಾಗಿದ್ದಾರೆ. ಹಾಗೆ ಗಾಳಿಪಟವು ಸರಿಯಾದ ಕ್ರಮದಲ್ಲಿರಬೇಕಾದರೆ ಪಟಕ್ಕೆ ದಾರವು ಅಷ್ಟೆ ಮುಖ್ಯವಾಗುತ್ತದೆ. ಹಾಗೆ ತಮಿಳಿನಿಂದ ಕನ್ನಡ ಭಾಷೆಗೆ ಉತ್ತಮವಾದ ಶ್ರದ್ಧೆಯೊಂದಿಗೆ ಶ್ರೀ ಶ್ರೀನಿವಾಸ ರವರು ಗಾಳಿಪಟವು ಆಕಾಶದಲ್ಲಿ ಹಾರಾಡಲು ದಾರದ ಹಾಗಿದ್ದು ಶ್ರೀ ಲಲಿತಾಸಹಸ್ರನಾಮ ಮಹಿಮೆಯನ್ನು ಕನ್ನಡದಲ್ಲಿ ಅನುವಾದಿಸಿದ್ದಾರೆ. ಆಕಾಶದಲ್ಲಿ ಹಾರಾಡುವ ಫಾಳಿಪಟವು ಎಲ್ಲರಿಗೂ ಕಾಣಲು ಬೆಳಕಿನ ಅವಶ್ಯಕತೆಯ ಹಾಗೆ ಶ್ರೀ ನಾಗೇಶ್ ಪ್ರಭು ಮತ್ತು ಜ್ಯೋತಿ ಪ್ರಭು ರವರು ಶ್ರೀ ಲಲಿತಾಸಹಸ್ರನಾಮದ ಕನ್ನಡ ಅನುವಾದದ ವ್ಯಾಕರಣ ತಿದ್ದುಪಡಿಸಿ ಸಹಾಯಿಸಿದ್ದಾರೆ. ಇವರೆಲ್ಲರಿಗೂ ನಾನು ನನ್ನ ಹುತ್ಪೂರ್ವಕ ಅಭಿನಂದನೆಗಳೊಂದಿಗೆ ಅವರ ಶ್ರೆಯೋಬಿವೃದ್ಧಿಗೆ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸಾಧು ಮನೆಯವರಿಂದ ಈ ಶ್ರೀ ಲಲಿತಾ ಸಹಸ್ರನಾಮ ಮಹಿಮೆಯ ಪುಸ್ತಕದ ಪ್ರಕಾಶನಕ್ಕೆ ಮನಃಪೂರ್ತಿಯಾಗಿ ಅನುದಾನ ಒದಗಿದಂತಹ ಶ್ರೀ ಪವನ್ ಕುಮಾರ ಅಗರ್ವಾಲ್ ಬೆಂಗಳೂರು ಕುಟುಂಬ ಹಾಗು ಮುದ್ರಣಕ್ಕೆ ಸಹಕರಿಸಿದ ಶ್ರೀ ಲಿಂಗರಾಜು, ಶೀ ಮಂಜುನಾಥ ಗ್ರಾಫಿಕ್ಸ್, ಬೆಂಗಳೂರು ರವರಿಗೆ ತಾಯಿ ಶ್ರೀ ಲಲಿತಾಂಭಿಕೆಯು ಹಾರೈಸಲೆಂದು ಪ್ರಾರ್ಥಿಸುತ್ತೇವೆ.

ಗಣಪತಿ ಅರುಣಾಚಲಂ
ಬೆಂಗಳೂರು
೦೨-೦೩-೨೦೨೦.

# ಅಧ್ಯಾಯ ೧ --- ಲಲಿತಾ ಸಹಸ್ರನಾಮದ ಇತಿಹಾಸ




ತ್ರಿಲೋಕ ಸಂಚಾರಿಗಳೂ, ತಮಿಳನ್ನು ಶೋಧಿಸಿದವರೂ ಮತ್ತು ಸಿದ್ಧರೂ ಆದ ಅಗಸ್ತ್ಯ ಮಹಾಮುನಿಗಳು ಒಮ್ಮೆ ಹಿಮಾಲಯದಲ್ಲಿ ಪಯಣಿಸುತ್ತಿದ್ದಾಗ, ಅಲ್ಲಿ ಕೆಲವು ಋಷಿ ಮುನಿಗಳು ಮರದ

ಕೊಂಬೆಗಳಲ್ಲಿ ತಲೆಕೆಳಗಾಗಿ ತಪಸ್ಸು ಮಾಡುವಂತೆ ಇದ್ದರು. ಆಗ ಅಗಸ್ತ್ಯರು ಚಕಿತರಾಗಿ ಅದರ ಬಗ್ಗೆ ವಿಚಾರಿಸಿದಾಗ, ಅವರು ಉತ್ತರಿಸುತ್ತಾ " ಭೂಲೋಕದಲ್ಲಿ ತಮ್ಮ ಸಂತತಿಯಾದ ಅಗಸ್ತ್ಯನೆಂಬುವನಿದ್ದಾನೆ, ಅವನು ಬ್ರಹ್ಮಚಾರಿಯಾಗಿಯೇ ಉಳಿದಿದ್ದು, ಪ್ರಾರಬ್ಧದಂತೆ ವಿವಾಹ - ಪುತ್ರ ಸಂತತಿಯನ್ನು ಹೊಂದಿಲ್ಲ. ಆದುದರಿಂದ ನಮಗೆ ಪುಣ್ಯಲೋಕ ಸಿಗದೆ, ಈ ರೀತಿಯಾಗಿ ಕಷ್ಟವನ್ನು ಪಡುತ್ತಾ ತಲೆಕಗೆಳಗಾಗಿದ್ದೇವೆ" ಎಂದು ಹೇಳಿದರು. ಇದನ್ನು ಕೇಳಿದ ಅಗಸ್ತ್ಯರಿಗೆ ಪಶ್ಚಾತ್ತಾಪವಾಯಿತು ನಂತರ ಅವರು ಪಿತೃಗಳನ್ನು ಉದ್ದೇಶಿಸಿ "ತಾವುಗಳು ಹೇಳಿದ ನಿಮ್ಮ ಸಂತತಿಯಾದ ಅಗಸ್ತ್ಯನು ನಾನೆ, ನನಗೆ ಈ ವಿಚಾರವು ತಿಳಿಯದಿದ್ದರಿಂದ ಮದುವೆ ಮಾಡಿಕ್ಕೊಳ್ಳದೆ ತಮ್ಮನ್ನು ಈ ಕಷ್ಟಕ್ಕೆ ಗುರಿಪಡಿಸಿದ್ದೇನೆ ದಯವಿಟ್ಟು ಕ್ಷಮಿಸಿ, ನಾನು ಈಗಲೇ ಹೋಗಿ ಮದುವೆಯಾಗಿ ಮಗುವಿನ ಸಂತತಿಪಡೆದು ತಮ್ಮನ್ನು ಈ ಕಷ್ಟಗಳಿಂದ ವಿಮುಕ್ತಗೊಳಿಸುತ್ತೇನೆ" ಎಂದು ವಿನಂತಿಸಿಕೊಂಡರು. ಇದನ್ನು ಕೇಳಿದ ತತ್ ಕ್ಷಣವೇ ತಲೆಗೆಳಗಾದ ಅವರ ಪಿತೃಗಳು ವಿಮುಕ್ತಗೊಂಡು, ಅಗಸ್ತ್ಯರನ್ನು ಆಶೀರ್ವದಿಸಿ ಪಿತೃಲೋಕಕ್ಕೆ ತೆರಳಿದರು. ಅಗಸ್ತ್ಯರು ಆಗಿನಿಂದಲೇ ತಮ್ಮ ಬ್ರಹ್ಮಚರ್ಯ ವ್ರತಕ್ಕೆ ಅಡ್ಡಿಪಡಿಸದೇ ಮತ್ತು ಮಡದಿಯೂ ಆಗುವಂತಹ ಕನ್ಯೆಯನ್ನು ಹುಡುಕುತ್ತಾ ತ್ರಿಲೋಕ ಸಂಚಾರದಲ್ಲಿ ತೊಡಗಿದ್ದರು. ಹೀಗಿರುವಾಗ ತಮ್ಮ ಪಯಣದಲ್ಲಿ ಬ್ರಹ್ಮಲೋಕಕ್ಕೆ ತೆರಳಿರುವಾಗ, ಅಲ್ಲಿ ವಿಷ್ಣುಮಾಯೆಯಿಂದ ಸೃಷ್ಟಿಸಲಾದ ಕನ್ಯೆಯನ್ನು ನೋಡಿದರು ಮತ್ತು ತಮ್ಮ ಮಡದಿಯಾಗಲು ಇವಳೆ ಸೂಕ್ತವೆಂದು ಭಾವಿಸಿಕೊಂಡರು. ಆದರೂ ಅವರು ಅದರ ಬಗ್ಗೆ ಏನೂ ಮಾತನಾಡದೆ ಶ್ರೀ ಬ್ರಹ್ಮದೇವರನ್ನು ನಮಸ್ಕರಿಸಿ, ಭೂಲೋಕಕ್ಕೆ ಹಿಂತಿರುಗಿದರು.

ಆಗತ್ಸ್ಯರ ವಿಚಾರವು ಹೀಗಿರುವಾಗ ವಿಧರ್ಭ ದೇಶದ ರಾಜನಾದ ಕವೇರನು, ಸಂತತಿಗ್ಲೋಸ್ಕರ ಬಹಳ ವರ್ಷಗಳು ಹಂಬಲಿಸಿ ಕೊನೆಗೆ ದಂಪತಿಸಮೇತನಾಗಿ ಶಿವನನ್ನು ಕುರಿತು ಉಗ್ರವಾದ ಕಠಿಣ ತಪಸ್ಸನ್ನು ಆಚರಿಸಿಸುತ್ತಿದ್ದನು. ಅವನ ಭಕ್ತಿಗೆ ಮೆಚ್ಚಿದಂತಹ ಶಿವನು ಪ್ರತ್ಯಕ್ಷಗೊಂಡು, ಈ ಜನ್ಮದಲ್ಲಿ ನಿಮಗೆ ಪುತ್ರಭಾಗ್ಯವಿಲ್ಲ. ಆದುದರಿಂದ ಈ ಕಠಿಣ ತಪಸ್ಸನ್ನು ತ್ಯಜಿಸುವಂತೆ ಹೇಳಿದನು. ಇದನ್ನು ಕೇಳಿದ ರಾಜ ದಂಪತಿಗಳು ಮನಸ್ಸನ್ನು ಸ್ತಿಮಿತಗೊಳಿಸಿ

ರಾಜ್ಯಭಾರವನ್ನು ಮಾಡುತಿದ್ದರು. ಕನ್ಯಾನ್ವೇಷಣೆಯಲ್ಲಿದ್ದ ಅಗಸ್ತ್ಯರು ವಿಧರ್ಭದೇಶಕ್ಕೆ ಬಂದಾಗ ಅವರನ್ನು ರಾಜ ಕವೇರ ದಂಪತಿಗಳು ಸತ್ಕರಿಸಿ ನಮಸ್ಕರಿಸಿದರು. ರಾಜ ದಂಪತಿಗಳನ್ನು ಆಶೀರ್ವದಿಸುವಾಗ ಅಗಸ್ತ್ಯರು ಅವರಿಗೆ ಸಂತತಿಯಾಗಲೆಂದು ಹರಿಸಿದರು. ಅದನ್ನು ಕೇಳಿದ ರಾಜ ಕವೇರ ದಂಪತಿಗಳು ಆಶ್ಚರ್ಯಚಕಿತರಾಗಿ, ತಮಗೆ ಶಿವನು ಹೇಳಿದ ಮಾತುಗಳನ್ನು ತಿಳಿಸಿ, ತಮಗಾಗಲೇ ವಯಸಾದ್ದರಿಂದ ತಮ್ಮ ಆಶೀರ್ವಾದವು ಹೇಗೆ ಫಲಿಸಬಹುದೆಂದು ಹೇಳಲು ವಿನಂತಿಸಿಕೊಂಡರು. ಅದಕ್ಕೆ ಅಗಸ್ತ್ಯರು ತಾನು ತನ್ನ ತಪಃಶಕ್ತಿಯಿಂದ ತಮಗೆ ಪುತ್ರಿ ಸಂತಾನವನ್ನು ಕರುಣಿಸುತ್ತೇನೆ ಆದರೆ ನೀವುಗಳು ಅವಳು ಪ್ರಾಪ್ತ ವಯಸ್ಸಿಗೆ ಬಂದ ಕೂಡಲೇ ತನಗೆ ಮದುವೆ ಮಾಡಿಕೊಡಬೇಕೆಂದು ಹೇಳಿದರು. ಈಗಾಗಲೇ ತಮಗೆ ಸಂತತಿಯೇ ಆಗುವುದಿಲ್ಲವೆಂದುಕೊಂಡಿದ್ದ ರಾಜ ದಂಪತಿಗಳಿಗೆ ಈ ಮಾತನ್ನು ಕೇಳಿ ಸಂತೋಷವಾಯಿತು ಆದುದರಿಂದ ಸಂತೋಷವಾಗಿ ಒಪ್ಪಿಕೊಂಡರು. ಆಗ ಅಗಸ್ತ್ಯರು ತಮ್ಮ ತಪೋಶಕ್ತಿಯಿಂದ ಬ್ರಹ್ಮಲೋಕದ ವಿಷ್ಣುಮಾಯಾ ಕನ್ಯೆಯನ್ನು ಅವರಿಗೆ ಪುತ್ರಿಯಾಗಿ ಕರುಣಿಸಿದರು.

ಕಾಲಕ್ರಮೇಣ ರಾಜ ದಂಪತಿಗಳಿಗೆ ಪುತ್ರಿಯ ಜನನವಾಗಲು, ಅವಳನ್ನು ನೋಡಲು ಬಂದಿದ್ದ ದೇವತೆಗಳು ಈ ರೀತಿಯಾದ ಅರವತ್ತನಾಲ್ಕು ಲಕ್ಷಣಗಳನ್ನೂ ಹೊಂದಿರುವ ಶಿಶುವಿಗೆ "ಲೋಪಾಮುದ್ರ" ಎಂದು ನಾಮಕರಣ ಮಾಡಿದರು. ಲೋಪಾಮುದ್ರ ಎಂದರೆ, ಯಾವುದೆ ಲೋಪವಿಲ್ಲದ ಮಾದರಿಯೆಂದು ಅರ್ಥೈಸಿಕೊಳ್ಳಬಹುದು. ಹಾಗೂ ಕವೇರನ ಪುತ್ರಿಯಾದ್ದರಿಂದ ಲೋಪಾಮುದ್ರೆಗೆ "ಕಾವೇರಿ" ಎಂದೂ ಕರೆಯಲ್ಪಡುತ್ತದೆ. ಕ್ರಮೇಣ ವಿಷ್ಣುವಿನ ಮಾಯೆಯಾದ ಲೋಪಾಮುದ್ರೆಯು ಶೀಘ್ರವಾಗಿ ಬೆಳೆದು ತನ್ನ ಬಾಲ್ಯಾವಸ್ಥೆಯಿಂದ ಹೊರಬಂದು ಬಹಳ ಸ್ಪಷ್ಟವಾಗಿ ಮಾತನಾಡಲು ತೊಡಗಿದಳು. ಕಾವೇರಿಗೆ ಏಳು ವಯಸ್ಸಾಗಿರುವಾಗ, ಶ್ರೀವಿದ್ಯಾ ಉಪಾಸಕರೂ ಕೋಪಿಷ್ಟರೂ ಆದ ಶ್ರೀ ಸರ್ಯಾನಂದ ನಾಥರು ರಾಜ ಕವೇರನಲ್ಲಿ ಬಂದು ತಮ್ಮ ಚಾತುರ್ಮಾಸ್ಯದ ವ್ರತವನ್ನು ವಿಧರ್ಭದಲ್ಲಿ ತೊಡಗುವುದಾಗಿ ಹೇಳಿದರು. ಅದಕ್ಕಾಗಿ ರಾಜ ಕವೇರನು ನಂದವನದಲ್ಲಿ ಕುಟೀರವನ್ನು ನಿರ್ಮಿಸಿ, ಅವರ ಸ್ವಭಾವವನ್ನರಿತು, ಅನುಸರಿಸುವ ಸಹಾಯಕರಿಗಾಗಿ ಹುಡುಕುತ್ತಾ ಚಿಂತೆಯಲ್ಲಿದ್ದನು. ಚಿಂತಾಸಕ್ತನಾಗಿರುವ ತಂದೆಯನ್ನು ನೋಡಿದ

ಲೋಪಾಮುದ್ರೆಯು ಕಾರಣವನ್ನು ವಿಚಾರಿಸಿದಾಗ. ಕವೇರನು ಶ್ರೀ ಸರ್ಯಾನಂದ ನಾಥರ ಕೋಪಿಷ್ಟ ಸ್ವಭಾವದ ಬಗ್ಗೆ ತಿಳಿಸುತ್ತಾ, ಸರಿಯಾದ ಸಹಾಯಕರಿಲ್ಲದ್ದಿದ್ದನ್ನು ವಿವರಿಸಿದನು. ಅದಕ್ಕೆ ಲೋಪಾಮುದ್ರೆಯು ತಂದೆಗೆ ಸಾಂತ್ವನವನ್ನೇಳಿ, ಈ ಕಾರ್ಯಕ್ಕೆ ತಾನೇ ಗುರುನಾಥರ ಸೇವೆಗೆ ತಯಾರಿರುವುದಾಗಿ ತಿಳಿಸಿದಳು. ಅದನ್ನು ಕೇಳಿದ ರಾಜನು ಅವಳಿಗೆ ನೀನು ದೈವ ಸಂತತಿಯಾಗಿರುವೆ ಮತ್ತು ನಮ್ಮ ಸಂತೋಷಕ್ಕೆ ಕಾರಣ ಕರ್ತಳಾಗಿರುವೆ. ಹೀಗಿರುವಾಗ ಗುರುನಾಥರ ಕೋಪದಿಂದ ಅವರ ಶಾಪಕ್ಕೆ ಗುರಿಯಾಗಬಹುದೆಂಬ ಭಯಗೊಂಡಿರುವೆನೆಂದನು. ಆದರೂ ಲೋಪಾಮುದ್ರೆಯು ತಂದೆಯನ್ನು ಸಂತೈಸಿ, ಯಾವುದೇ ತೊಂದರೆಯಾಗದಂತೆ ತಾನೇ ಗುರುನಾಥರ ಸೇವೆ ಮಾಡಿ ಅವರನ್ನು ಸುಪ್ರಸನ್ನರಾಗಿಸುವೆನೆಂದು ಹೇಳಿ, ರಾಜನ ಒಪ್ಪಿಗೆ ಪಡೆದು ಇಬ್ಬರು ಸಹಾಯಕಿಯರೊಂದಿಗೆ ಅತ್ಯಂತ ಜಾಗ್ರತೆಯಾಗಿ ಶ್ರೀ ಸರ್ಯಾನಂದ ನಾಥರ ಸೇವೆಯಲ್ಲಿ ತೊಡಗಿಸಿಕೊಂಡಳು.

ಚಾತುರ್ಮಾಸ್ಯದ ಪೂಜಾನಂತರ, ಇಚ್ಛಾನುಸಾರವಾಗಿ ಪೂಜೆಗೆ ಅನುವು ಮಾಡಿಕ್ಕಕೊಟ್ಟಿದ್ದರಿಂದ ಅತ್ಯಂತ ಸುಪ್ರೀತರಾದ ಶ್ರೀ ಸರ್ಯಾನಂದನಾಥರು ಲೋಪಾಮುದ್ರೆಗೆ "ಶ್ರೀವಿದ್ಯಾ ಉಪಾಸನೆ"ಯನ್ನು ಉಪದೇಶಮಾಡಿ, ಈ ಉಪಾಸನೆಯನ್ನು ಶ್ರದ್ಧೆಯಾಗಿ ಮಾಡುವುದರಿಂದ ಶ್ರೇಯಸುಳ್ಳ ಜ್ಞಾನ ಸಹಿತ ಎಲ್ಲಾ ಸಿದ್ಧಿಗಳು ಮತ್ತು ನೆನೆದ ಆಕಾರವನ್ನು ಪಡೆದು ಇಚ್ಛಾಸ್ಥಳಕ್ಕೆ ಪಯಣಿಸುವ ಶಕ್ತಿ ದೊರಕುವ ಸತ್ಯವನ್ನು ತಿಳಿಸಿದರು. ನಂತರ ಅವಳನ್ನು ಮತ್ತು ರಾಜ ಕವೇರ ದಂಪತಿಗಳನ್ನು ಆಶೀರ್ವದಿಸಿ ಹೊರಟರು. ಲೋಪಾಮುದ್ರೆಯು ಶ್ರೀವಿದ್ಯಾ ಉಪಾಸನೆಯನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಅನುಷ್ಠಾನಗೊಳಿಸಿ, ಶ್ರೇಯಸುಳ್ಳ ಜ್ಞಾನ ಸಹಿತ ಎಲ್ಲಾ ಸಿದ್ಧಿಗಳು ಮತ್ತು ನೆನೆದ ಆಕಾರವನ್ನು ಪಡೆದು ಇಚ್ಛಾಸ್ಥಳಕ್ಕೆ ಪಯಣಿಸುವ ಶಕ್ತಿಯನ್ನು ಸಂಪಾದಿಸಿದಳು.

ಹೀಗಿರುವಾಗ ಲೋಪಾಮುದ್ರೆಯೆಂಬ ಕಾವೇರಿಗೆ ಹದಿನಾರು ವಯಸ್ಸಾದ ಸಮಯದಲ್ಲಿ, ಅಗಸ್ತ್ಯರು ವಿಧರ್ಭಕ್ಕೆ ಆಗಮಿಸಿ, ರಾಜ ಕವೇರನನ್ನು ಕನ್ಯಾದಾನ ಮಾಡಿಕೊಡುವಂತೆ ವಿನಂತಿಸಿದರು. ಆಗ ರಾಜ ದಂಪತಿಗಳು ಪುತ್ರಿವ್ಯಾಮೋಹದಿಂದ ತಾವುಗಳು ಹೇಗೆ ರಾಜ ಸುಖದಿಂದಿರುವ ಲೋಪಾಮುದ್ರೆಯನ್ನು ಕಾಡು ಮೇಡುಗಳಲ್ಲಿ,

ವನಗಳಲ್ಲಿ ವಾಸಿಸುವ ಅಗಸ್ತ್ಯರಿಗೆ ಕನ್ಯಾದಾನ ಮಾಡುವುದೆಂದು ಚಿಂತಿತರಾದರು. ಈ ವಿಷಯವನ್ನರಿತ ಲೋಪಾಮುದ್ರೆಯೆಂಬ ಕಾವೇರಿಯು, ಅವರಿಗೆ ತನ್ನ ಜೀವನದ ರಹಸ್ಯವಾದ ಅಗಸ್ತ್ಯರ ವರವನ್ನು ಜ್ಞಾಪಿಸಿ, ತಾನು ಯಾವುದೇ ರೀತಿಯಾದ ಕಷ್ಟಗಳನ್ನೂ ಸರಿತೂಗಿಸಿಕ್ಕೊಳ್ಳುವುದಾಗಿ ಹೇಳಿ ಸಂತೈಸಿ ಅವರ ಆಜ್ಞೆಯನ್ನು ಪಡೆಯಲು, ಈ ರೀತಿಯಾಗಿ ಅಗಸ್ತ್ಯ ಮತ್ತು ಲೋಪಾಮುದ್ರೆಯರ ವಿವಾಹವು ಸಂಪನ್ನವಾಯಿತು. ಲೋಪಾಮುದ್ರೆಯು ತನ್ನೆಲ್ಲಾ ಸುಖ ಭೊಗಗಳನ್ನು ತ್ಯಜಿಸಿ, ಅಗಸ್ತ್ಯರೊಂದಿಗೆ ಮದುವೆಯಾಗಿ ಪೂರ್ತಿ ಭಾರತವನ್ನು ಸಂಚರಿಸುತ್ತಾ ಕೊನೆಗೆ ಕಾಂಚೀಪುರಕ್ಕೆ ಆಗಮಿಸಿದಳು.

ಕಾಂಚೀಪುರದಲ್ಲಿ ಶ್ರೀ ಕಾಮೇಶ್ವರ ಮತು ಶ್ರೀ ಕಾಮೇಶ್ವರಿಯರಿಂದ ಶ್ರೀವಿಧ್ಯಾ ಉಪಸನೆಯನ್ನು ಪಡೆದಿದ್ದ ಶ್ರೀ ಹಯಗ್ರೀವ ದೇವರು ನಿತ್ಯವೂ ಕಾಂಚೀಪುರದ ಶ್ರೀ ಕಾಮಾಕ್ಷಿದೇವಿಯನ್ನು ಶ್ರೀವಿಧ್ಯಾ ಉಪಾಸನೆಯ ಪ್ರಕಾರ, ನವಾವರ್ಣ ಪೂಜಾಸಹಿತ ಶ್ರೀ ಲಲಿತಾ ತ್ರಿಶತಿ ನಾಮಾರ್ಚನೆಗಳನ್ನೊಳಗೊಂಡ ಪೂಜೆಯ ನಂತರ ಸುಹಾಸಿನಿ ಪೂಜೆಯೊಂದಿಗೆ ಸಂಪೂರ್ಣಗೊಳಿಸುತ್ತಿದ್ದನು. ಇದರಲ್ಲಿ ಸುಹಾಸಿನಿಯ ಮಣೆಯಲ್ಲಿ ಸಾಕ್ಷಾತ್ ಲೋಪಾಮುದ್ರೆಯೇ ಸುಹಾಸಿನಿಯಾಗಿರುತ್ತಿದ್ದಳು. ಈ ಪೂಜೆಯ ದರ್ಶನಕ್ಕಾಗಿ ಎಲ್ಲಾ ಮುವತ್ಮೂರು ಕೋಟಿ ದೇವಾನುದೇವತೆಗಳೂ ನಿತ್ಯ ಆಗಮಿಸುತ್ತಿದ್ದರು. ಕಾಂಚೀಪುರದಲ್ಲಿ ಅಗಸ್ತ್ಯರು ಶ್ರೀ ಕಾಮಾಕ್ಷಿ ಅಮ್ಮನನ್ನು ದರ್ಶಿಸುವುದಕ್ಕೊಸ್ಕರ ಆಗಮಿಸುತ್ತಿರುವಾಗ, ಅವರನ್ನು ಕಂಡ ದೇವತೆಗಳು ಅವರಿಗೆ ನಮಸ್ಕರಿಸುತ್ತಾ, ಸಾಕ್ಷಾತ್ ಶ್ರೀ ವಿಷ್ಣುಸ್ವರೂಪಿಯೇ ಆಗಿರುವ ಶ್ರೀ ಹಯಗ್ರೀವ ದೇವರ ಶ್ರೀವಿಧ್ಯಾ ಉಪಾಸನೆಯ, ನವಾವರ್ಣ ಪೂಜಾಸಹಿತ ಶ್ರೀ ಲಲಿತಾ ತ್ರಿಶತಿ ನಾಮಾರ್ಚನೆಗಳನ್ನೊಳಗೊಂಡ ಶ್ರೀ ಕಾಮಾಕ್ಷಿ ದೇವಿಯ ಪೂಜೆಯಲ್ಲಿನ ಸುಹಾಸಿನಿ ಪೂಜೆಯಲ್ಲಿ ನಿತ್ಯವೂ ಆಗಮಿಸುತ್ತಿರುವ ಲೋಪಾಮುದ್ರೆಯನ್ನು ಸಹಧರ್ಮಿಣಿಯಾಗಿ ಪಡೆದಿರುವ ತಾವೇ ಧನ್ಯರು ಎಂದರು. ಇದನ್ನು ಕೇಳಿದ ಅಗಸ್ತ್ಯರು ಆಶ್ಚರ್ಯಚಕಿತರಾಗಿ ಅವರಿಗೆ ತಮ್ಮ ಸಹಧರ್ಮಣಿಯು ತನ್ನ ವಿವಾಹನಂತರ ಕ್ಷಣಮಾತ್ರವೂ ತನ್ನಿಂದ ಬೇರೆಯಾಗದೆ, ತನಗೆ ಎಲ್ಲಾ ಕಾರ್ಯಗಳಲ್ಲಿಯೂ ಸಹಕರಿಸುತ್ತಿರುವುದರಿಂದ ಅವರುಗಳು ಹೇಳುವುದು ತಪ್ಪೆಂದು ತಿಳಿಸಿದರು. ಅದನ್ನು ಕೇಳಿದ ದೇವತೆಗಳು ಅವರನ್ನು ಶ್ರೀ ಹಯಗ್ರೀವ ದೇವರು ಮಾಡುವ ಪೂಜಾಸ್ಥಳಕ್ಕೆ

ಕರೆದೊಯ್ದರು. ಅಗಸ್ತ್ಯರು ಆ ಸುಹಾಸಿನಿ ಪೂಜಾಸಮಯದಲ್ಲಿ ಸ್ವತಃ ಲೋಪಾಮುದ್ರೆಯೇ ಸುಹಾಸಿನಿಯಾಗಿ ಬಂದು ಶ್ರೀ ಹಯಗ್ರೀವ ದೇವರು ನಿವೇದಿಸಿದ ಪಾನಕವನ್ನು ಸ್ವಲ್ಪ ಸೇವಿಸಿ, ಉಳಿದದ್ದನ್ನು ಶ್ರೀ ಹಯಗ್ರೀವದೇವರಿಗೆ ತಿರುಗಿಸಿಕೊಟ್ಟಳು. ಉಳಿದ ಪಾನಕವನ್ನು ಅಲ್ಲಿ ಸೇರಿರುವ ಎಲ್ಲರಿಗೂ ಪ್ರಸಾದವಾಗಿ ವಿನಿಯೋಗಿಸಿದರು. ಇದನ್ನು ಕಂಡ ಅಗಸ್ತ್ಯರು ಆಶ್ಚರ್ಯಚಕಿತರಾಗಿ, ಯಾವಾಗಲೂ ತಮ್ಮ ಬಳಿಯಿರುವ ಲೋಪಾಮುದ್ರೆಯು ಹೇಗೆ ಇಲ್ಲಿಗೆ ಆಗಮಿಸಿದಳೆಂದು ಕುತೂಹಲಗೊಂಡರು.

ನಂತರ ಕುಟೀರಕ್ಕೆ ಹಿಂತಿರುಗಿದ ಅಗಸ್ತ್ಯರು, ಈ ವಿಚಾರವನ್ನು ಲೋಪಮುದ್ರೆಯ ಬಳಿ ವಿವರಿಸಿ ತನ್ನ ಸಂದೇಹವನ್ನು ಕೇಳಿದರು. ಲೋಪಾಮುದ್ರೆಯು ತನ್ನ ಏಳನೇ ವಯಸ್ಸಿನಲ್ಲಿ ನಡೆದ ಶ್ರೀ ಸರ್ಯಾನಂದನಾಥರ ಸೇವೆಯನ್ನೂ ಮತ್ತು ಅವರು ಉಪದೇಶಿಸಿದ ಶ್ರೀವಿದ್ಯಾ ಉಪಾಸನೆಯ ಘಟನೆಯನ್ನು ವಿವರಿಸಿ, ತಾನು ಎಡೆಬಿಡದೆ

ಆಚರಿಸುತ್ತಾ ಬಂದಿರುವುದರಿಂದ ತನಗೆ ಬೇಕಾದ ಹಾಗೆ ಆಕಾರವನ್ನು ಪಡೆಯುವ ಮತ್ತು ಇಚ್ಛಾಸ್ಥಳಕ್ಕೆ ಪಯಣಿಸುವ ಶಕ್ತಿಯನ್ನು ಹೊಂದಿರುವುದಾಗಿ ವಿವರಿಸಲು, ಅಗಸ್ತ್ಯರು ತನಗೂ ಈ ಶ್ರೀವಿದ್ಯಾ ಉಪಾಸನೆಯನ್ನು ಉಪದೇಶಿಸುವಂತೆ ಕೋರಿದರು. ಲೋಪಾಮುದ್ರೆಯು ಮಡದಿಯಾದ ತಾನು ಪತಿಯಾದ ತಮಗೆ ಉಪದೇಶಿಸುವುದು ಪ್ರಾಶಸ್ತ್ಯವಲ್ಲ, ತಮಗೆ ಇದನ್ನು ಉಪದೇಶಿಸಲೆಂದೇ ಶ್ರೀ ಹಯಗ್ರೀವ ದೇವರು ಕಾಯುತ್ತಿದ್ದಾರೆ ಮತ್ತು ತಮಗೆ ಉಪದೇಶಿಸಿದ ನಂತರವೇ ಅವರಿಗೆ ಭೂಲೋಕದಿಂದ ವಿಮುಕ್ತಿ ಪಡೆಯಲು ಸಾಧ್ಯವೆಂಬುದನ್ನು ತಿಳಿಸಿದಳು.

ಇದಾಗಿ ಸ್ವಲ್ಪ ಸಮಯಾನಂತರ, ಒಮ್ಮೆ ಲೋಪಾಮುದ್ರೆಯು ಅಗಸ್ತ್ಯರಲ್ಲಿ ಶ್ರೀವಿದ್ಯಾ ಉಪದೇಶದ ಬಗ್ಗೆ ವಿಚಾರಿಸುತ್ತಾ, ಶ್ರೀ ಹಯಗ್ರೀವ ದೇವರು ಎಷ್ಟರವರೆಗೆ ಕರುಣಿಸಿದ್ದಾರೆಂದು ಕೇಳಿದಳು, ಅಗಸ್ತ್ಯರು ತಾನು ಬಹಳ ಕುಳ್ಳನಾಗಿರುವುದರಿಂದ, ಅಲ್ಲಿ ನೆರೆದಿರುವ ಜನಸಾಗರದಲ್ಲಿ ಮುಂದೆ ಹೋಗಿ ಶ್ರೀ ಹಯಗ್ರೀವ ದೇವರ ದೃಷ್ಟಿಗೆ ಬೀಳಲು ಸಾಧ್ಯವಾಗಿಲ್ಲವೆಂದರು. ಆಗ ಅವರಿಗೆ ಲೋಪಮುದ್ರೆಯು ನಾಳೆ ಎಲ್ಲರೂ ಕುಳಿತುಕ್ಕೊಳ್ಳುವಾಗ ನೀವು ಮಾತ್ರ ನಿಂತಿರಿ, ಆಗ ತಮ್ಮನ್ನು ಶ್ರೀ ಹಯಗ್ರೀವ ದೇವರು ಗಮನಿಸಿ ವಿಚಾರಿಸಿಲು, ತಮ್ಮನ್ನು ಲೋಪಾಮುದ್ರೆಯು ಕಳಿಸಿದಳು ಎಂಬುದಾಗಿ ಹೇಳಲು ತಿಳಿಸಿದಳು. ಇದನ್ನು ಕೇಳಿದ ನಂತರ ಮಾರನೆ ದಿನವು ದೇವತೆಗಳೆಲ್ಲಾ ಕುಳಿತುಕೊಂಡರೂ ಅಗಸ್ತ್ಯರು ನಿಂತೇ ಇದ್ದರು. ಅವರು ನಿಂತಿರುವುದನ್ನು ಗಮನಿಸಿದ ಶ್ರೀ ಹಯಗ್ರೀವ ದೇವರು ಅವರನ್ನು ವಿಚಾರಿಸಿದಾಗ, ಆಗತ್ಸ್ಯರು ತಮ್ಮನ್ನು ಲೋಪಮುದ್ರೆ ಕಳುಹಿಸಿದಳೆಂದು ಹೇಳಿದರು. ಅದನ್ನರಿತ ಶ್ರೀ ಹಯಗ್ರೀವ ದೇವರು ಇದಕ್ಕಾಗಿಯೇ ತಾನು ಇಷ್ಟುದಿನಗಳವರೆಗೆ ಕಾಯುತ್ತಿರುವುದಾಗಿ ಹೇಳಿ, ಅಗಸ್ತ್ಯರಿಗೆ ಶ್ರೀವಿದ್ಯಾ ಉಪಸನೆಯನ್ನು ಉಪದೇಶಿಸಿ ವೈಕುಂಠಕ್ಕೆ ಹಿಂತಿರುಗಿದರು.

ಶ್ರೀ ಹಯಗ್ರೀವದೇವರು ತನಗೆ ಶ್ರೀವಿದ್ಯಾ ಉಪಾಸನೆಯಲ್ಲಿ ಏನು ತಿಳಿಸಿದ್ದಾರೆಂಬುದನ್ನು ಅಗಸ್ತ್ಯರು ಶ್ರೀಲಲಿತಾ ಸಹಸ್ರನಾಮದಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದಾರೆ.

# ಅಧ್ಯಾಯ ೨ --- ಲಲಿತಾ ಸಹಸ್ರ ನಾಮವನ್ನು ಏಕೆ ಓದಬೇಕು?

ಶ್ರೀ ಲಲಿತಾ ಮಹಾ ತ್ರಿಪುರ ಸುಂದರಿಯೂ ಮತ್ತು ಶಿವನೂ ಒಂದೇ ಸ್ವರೂಪವಾಗಿದ್ದಾರೆ. ಆದಾಗ್ಯೂ ಶಿವಶಕ್ತಿಗಳು ಒಂದೇ ಎಂದು ಅರ್ಥೈಸಲಾಗಿದೆ. ಅರ್ಧನಾರೀಶ್ವರರಿಗಿಂತಾ ಮೇಲೆ ಬೇರೆ ಯಾವುದೇ

ದೈವಗಳಿಲ್ಲ ಅಥವಾ ಶಕ್ತಿಗಳಿಲ್ಲ. ಶ್ರೀ ಅಭಿರಾಮಿ ಭಟ್ಟರ ಕಾವ್ಯಗಳಲ್ಲಿ ಹೇಳಿರುವಂತೆ " ತುವಳೇನ್ ಇನಿ ಒರು ದೈವಂ ಉಂಡಾಗ ಮೈಹ್ತೊಂಡು ಸೈದೆ" ಅಂದರೆ ಅರ್ಧನಾರೀಶ್ವರರಿಗಿಂತಾ ಬೇರಾವ ದೈವವೂ ಮಿಗಿಲಿಲ್ಲ ಎಂದರ್ಥ. ಶ್ರೀ ಲಲಿತಾ ಸಹಸ್ರನಾಮವೆಂದರೆ ಅಮ್ಮನವರ ಸಾವಿರ ನಾಮ ಅಥವಾ ಹೆಸರುಗಳು. ಶ್ರೀ ಲಲಿತಾ ಸಹಸ್ರನಾಮವನ್ನು ಪಾರಾಯಣ ಮಾಡುವಾಗ, ಬರೀ ಲಲಿತಾಂಬಿಕೆಯ ಹಿರಿಮೆಗಳನ್ನು ಮಾತ್ರವಲ್ಲದೆ ದೈವಿಕತತ್ವದ ಬಗ್ಗೆಯೂ, ಮಂತ್ರಗಳೂ, ತಂತ್ರಗಳೂ ಮತ್ತು ಪ್ರಪಂಚಗಳ ಉದ್ಭವಗಳ ಬಗ್ಗೆಯೂ ಪರಿಜ್ಞಾನವು ಉಂಟಾಗುತ್ತದೆ.

ಸರಸ್ವತಿಯ ಗುರುಗಳಾದ ಶ್ರೀ ಹಯಗ್ರಿವ ದೇವರು ಅಗಸ್ತ್ಯ ಮಹರ್ಷಿಗಳಿಗೆ ಶ್ರೀ ಲಲಿತಾ ಸಹಸ್ರನಾಮದ ಹಿರಿಮೆಗಳ ಬಗ್ಗೆ ಈ ರೀತಿಯಾಗಿ ವಿವರಿಸಿದ್ದಾರೆ " ದೇವಿಯ ಸಹಸ್ರ ನಾಮಗಳನ್ನು ತಮಗೆ ಉಪದೇಶಿಸಿದ್ದೇನೆ. ಇವುಗಳು ಅತ್ಯಂತ ರಹಸ್ಯಗಳಲ್ಲಿ ರಹಸ್ಯವಾಗಿದೆ. ಇದಕ್ಕೆ ಸರಿಸಮನಾದ ಮತ್ಯಾವ ಸ್ತುತಿಗಳೂ ಇಲ್ಲ. ಇದರ ಪಾರಾಯಣದಿಂದ ಸುಖ ಪ್ರಾಪ್ತಿಗಳೂ, ನೋವುಗಳ ಶಮನವೂ, ಅಪಮೃತ್ಯುಗಳನ್ನು ತಡೆಗಟ್ಟಿ ಆಯುಸ್ಸು ವೃದ್ಧಿಯಾಗುವುದಲ್ಲದೆ, ಪುತ್ರಭಾಗ್ಯವುಂಟಾಗುತ್ತದೆ. ಗಂಗೆಯಂತಹ ಪವಿತ್ರ ನದಿಗಳಲ್ಲಿ ಸ್ನಾನಮಾಡುವ ಪುಣ್ಯ, ಕಾಶಿಯಲ್ಲಿ ಕೋಟಿ ಲಿಂಗ ಪ್ರತಿಷ್ಠಾಪಿಸಿದ ಪುಣ್ಯ, ಗಂಗಾತೀರದಲ್ಲಿ ಗ್ರಹಣ ಕಾಲದಲ್ಲಿ ಮಾಡುವ ಅಶ್ವಮೇಧ ಯಾಗದ ಪುಣ್ಯ, ದೇಶದಲ್ಲಿ ಕ್ಷಾಮ ಕೂಡಿರುವಾಗ ಬಾವಿ ತೋಡಿಸಿದ ಪುಣ್ಯ ಮತ್ತು ನಿರಂತರ ಅನ್ನದಾನ ಮಾಡುವ ಪುಣ್ಯಕ್ಕಿಂತಾ ಮಿಗಿಲಾದ ಪುಣ್ಯಗಳು ಲಭಿಸುತ್ತವೆ."

ಇದರ ಪಾರಾಯಣದಿಂದ ಪಾಪಗಳ ನಾಶವಾಗುತ್ತದೆ ಮತ್ತು ಪಾಪ ನಾಶಕ್ಕೆ ಇದಕ್ಕಿಂತ ಬೇರೆ ಯಾವುದೇ ಸುಲಭ ಮಾರ್ಗಗಳಿಲ್ಲ. ಇದಕ್ಕಿಂತಾ ಸುಲಭ ಮಾರ್ಗವನ್ನು ಹುಡುಕುವವರು ಮೂರ್ಖರೇ ಹೊರತು ಬುದ್ಧಿವಂತರಲ್ಲ. ಪೌರ್ಣಮಿಯಂದು ಚಂದ್ರನ ಬಿಂಬದಲ್ಲಿ ದೇವಿಯನ್ನು ಆಹ್ವಾನಿಸಿ, ಶ್ರೀ ಲಲಿತಾ ಸಹಸ್ರನಾಮದ ಪಾರಾಯಣ ಮಾಡುವುದರಿಂದ ನೋವುಗಳು ಶಮನವಾಗುತ್ತವೆ ಮತ್ತು ಭೂತ ಪಿಶಾಚಿಗಳ ಉಪದ್ರವವು ನಿವಾರಣೆಗಳಾಗುತ್ತದೆ. ಶ್ರೀ ಲಲಿತಾ ಸಹಸ್ರನಾಮದ ಪಾರಾಯಣ ಮಾಡುವವರ ನಾಲಿಗೆಯಲ್ಲಿ ಸಾಕ್ಷಾತ್ ಸರಸ್ವತಿಯೇ ವಾಸವಾಗಿ, ಎದುರಾಳಿಗಳು ಅವರ

ಮುಂದೆ ಮಾತನಾಡಲಾಗದಂತೆ ಅವರನ್ನು ಮೂಕರನ್ನಾಗಿಸುತ್ತಾಳೆ. ರಾಜನೇ ಆದರೂ ದೇವಿಯ ಭಕ್ತನ ಮುಂದೆ ಸೋತುಹೋಗುತ್ತಾನೆ. ಶ್ರೀ ಲಲಿತಾ ಸಹಸ್ರನಾಮದ ಪಾರಾಯಣ ಮಾಡಿ ಸಿದ್ಧಿಯನ್ನು ಹೊಂದಿದವರ ನೋಟದಿಂದಲೇ ಎಲ್ಲಾ ದೋಷಗಳು ನಿವೃತ್ತಿಯಾಗುತ್ತದೆ. ಶ್ರೀವಿದ್ಯಾ ಮಂತ್ರವೂ, ಲಲಿತಾಂಬಿಕೆಯಂತಹ ದೈವವೂ ಮತ್ತು ಶ್ರೀ ಲಲಿತಾ ಸಹಸ್ರನಾಮಕ್ಕಿಂತಲೂ ಉತ್ತಮವಾದವುಗಳು ಈ ಲೋಕದಲ್ಲಿಲ್ಲ. ಇದರ ಪಾರಾಯಣಕ್ಕೆ ಪೂರ್ವಜನ್ಮದ ಉತ್ತಮ ಫಲದಿಂದ ಮಾತ್ರ ಸಾಧ್ಯ. ಅಲ್ಲದೆ ಮನುಷ್ಯನ ಕೊನೆಯ ಜನ್ಮವಾಗಿದ್ದರೆ ಮಾತ್ರ ಶ್ರೀವಿದ್ಯಾ ಮಂತ್ರವು ಮತ್ತು ಶ್ರೀ ಲಲಿತಾ ಸಹಸ್ರನಾಮವನ್ನು ಪಾರಾಯಣ ಮಾಡಲು ಸಾಧ್ಯವಾಗುತ್ತದೆ ಹಾಗೂ ಶ್ರೀ ಲಲಿತಾಂಬಿಕೆಯ ಕೃಪೆಯಿದ್ದಲ್ಲಿ ಮಾತ್ರ ಇದರ ಉಪದೇಶ ಲಭ್ಯವಾಗಲು ಸಾಧ್ಯವೆಂದು ಶ್ರೀ ಹಯಗ್ರೀವ ದೇವರು ಅಗಸ್ತ್ಯ ಮಹರ್ಷಿಗಳಿಗೆ ಉಪದೇಶಿಸಿದ ಫಲಶ್ರುತಿಯಲ್ಲಿ ಹೇಳಲಾಗಿದೆ. ಶ್ರೀ ಲಲಿತಾ ಸಹಸ್ರನಾಮದ ವಿಶೇಷತೆಯೆಂದರೆ ಇದರ ಪಾರಾಯಣದಿಂದ ಹಿಂದೂಮತದ ಎಲ್ಲಾ ದೇವ ದೇವತೆಯರನ್ನೂ ಪೂಜಿಸಿದಂತಾಗುತ್ತದೆ.

ಶ್ರೀ ಲಲಿತಾ ಸಹಸ್ರನಾಮದ ಹಿರಿಮೆಯನ್ನರಿತು ಪಾರಾಯಣ ಮಾಡುವುದು ಸೂಕ್ತವಾಗುವುದಾದರೂ, ಇದರ ಪಾರಾಯಣದಿಂದ ನಮಗೆ ಲಭಿಸಬೇಕಾದ ಅಥವಾ ಸಿದ್ಧಿಸಬೇಕಾದ ಫಲಗಳು ತಾನಾಗೆ ಲಭಿಸುತ್ತದೆ. ನಾನು ೧೯೪೫ ರಲ್ಲಿ ಚಿತ್ತೂರಿನಲ್ಲಿದ್ದಾಗ ಒಮ್ಮೆ ಕಾಂಚೀಪುರದ ಶಂಕರಮಠದ ಪೂಜ್ಯ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಗಳು ಬಂದಿದ್ದರು, ನನಗೆ ೨ ದಿನಗಳು ಅವರ ಸೇವೆಯನ್ನು ಮಾಡುವ ಸೌಭಾಗ್ಯ ಲಭ್ಯವಾಗಿತ್ತು. ಆ ಸಮಯದಲ್ಲಿ ಪೂಜ್ಯ ಗುರುಗಳು ನನ್ನ ಬಳಿ " ನಮ್ಮಲ್ಲಿ ಹೆಂಗಸರಿಗೆ ಉಪನಿಷತ್ತು ಮತ್ತು ವೇದಗಳನ್ನು ಜಪಿಸಲು ಅವಕಾಶಗಳಿಲ್ಲವೆಂದು ದುಃಖಿಸುತ್ತಾರೆ, ಆದರೆ ಶ್ರದ್ಧಾಭಕ್ತಿಗಳಿಂದ ಶ್ರೀ ಲಲಿತಾ ಸಹಸ್ರನಾಮವನ್ನು ಪಾರಾಯಣ ಮಾಡಿದ ಪಕ್ಷದಲ್ಲಿ, ಅವರಿಗೆ ವೇದ ಮತ್ತು ಉಪನಿಷತ್ತುಗಳಿಗೆ ಸಮನಾದ ಫಲಗಳು ಪ್ರಾಪ್ತಿಯಾಗುತ್ತದೆ" ಎಂದು ತಿಳಿಸಿದ್ದರು. ಆದುದರಿಂದ ಇರಬಹುದು, ಶ್ರೀ ಲಲಿತಾ ಸಹಸ್ರನಾಮವನ್ನು ಹೆಂಗಸರು ನಿತ್ಯವೂ ಪಾರಾಯಣ ಮಾಡಬಹುದಾಗಿದೆ.

# ಅಧ್ಯಾಯ ೩ --- ಲಲಿತಾ ಸಹಸ್ರನಾಮದ ಹಿರಿಮೆಗಳು.

ಶ್ರೀ ಆದಿಶಂಕರ ಭಗವತ್ಪಾದರು ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದಿದ್ದಾರೆ. ಅವರು ಶ್ರಿ ಲಲಿತಾ ಸಹಸ್ರನಾಮದ ಭಾಷ್ಯವನ್ನು ಬರೆಯುವ ಉದ್ದೇಶದಿಂದ ಶಿಷ್ಯನಿಗೆ

ಗ್ರಂಥಾಲಯದಿಂದ ತಾಳೆ ಎಲೆ ಗ್ರಂಥವನ್ನು ತರುವಂತೆ ಹೇಳಿದರು. ಶಿಷ್ಯನು ತಂದ ತಾಳೆ ಎಲೆ ಗ್ರಂಥವು ಶ್ರೀ ವಿಷ್ಣುಸಹಸ್ರನಾಮವಾಗಿತ್ತು. ಅನೇಕ ಬಾರಿಯೂ ಇದೆ ರೀತಿಯಾಗಿ ಆಗಿದ್ದಕ್ಕೆ, ತನ್ನ ಶಿಷ್ಯರನ್ನು ವಿಚಾರಿಸಿದಾಗ ಅವರೆಲ್ಲರೂ ಭಯದಿಂದ "ನಾವುಗಳು ಗ್ರಂಥಾಲಯಕ್ಕೆ ಹೋದಾಗ ಬಾಗಿಲಲ್ಲೇ ಸುರದ್ರೂಪಿಯಾದ ದೇವಿಯೊಬ್ಬಳು ತಮಗೆ ಈ ತಾಳೆ ಎಲೆ ಗ್ರಂಥವನ್ನು ಕೊಟ್ಟು ಮೊದಲು ಈ ಗ್ರಂಥಕ್ಕೆ ಭಾಷ್ಯವನ್ನು ಬರೆಯಲು ಹೇಳೆಂದು ತಿಳಿಸಿದಳು. ಆದ್ದರಿಂದ ನಾವೂ ಈ ಗ್ರಂಥವನ್ನೇ ತರುತ್ತಿದ್ದೇವೆ" ಎಂದರು. ಆಗ ಭಗವತ್ಪಾದರು ತಮ್ಮ ಜ್ಞಾನದೃಷ್ಟಿಯಿಂದ ಅವಲೋಕಿಸಿದಾಗ ಅವರಿಗೆ ಶ್ರೀ ಲಲಿತೆಯು ಪ್ರತ್ಯಕ್ಷವಾಗಿ ತನ್ನ ಸಹೋದರನ ಸಹಸ್ರನಾಮಕ್ಕೆ ಮೊದಲು ಭಾಷ್ಯವನ್ನು ಬರೆಯಲು ತಾನೇ ಪ್ರಚೋದಿಸಿದ್ದಾಗಿ ತಿಳಿಸಿದಳು. ಅವಳೇ ಪದ್ಮನಾಭ ಸಹೋದರಿಯೆಂದು ಶ್ರೀ ಲಲಿತಾ ಸಹಸ್ರನಾಮದಲ್ಲಿರುವ ನಾಮಕ್ಕೆ ನಿದರ್ಶನವಾಗುತ್ತದೆ.

ಅಷ್ಟವಾಗ್ದೇವಿಗಳೂ (ವಸಿನಿ, ಕಾಮೇಶ್ವರಿ, ಮೋದಿನಿ, ವಿಮಲ, ಅರುಣ, ಜಯಿನೀ, ಸರ್ವೇಶ್ವರಿ ಮತ್ತು ಕೌಲಿನಿ) ಶ್ರೀ ಲಲಿತೆಯ ಆಜ್ಞಾನುಸಾರವಾಗಿ ಶ್ರೀ ಲಲಿತಾ ಸಹಸ್ರನಾಮದಲ್ಲಿ ಅಡಗಿದ್ದು ವಾಕ್ಯಗಳನ್ನು ಉದ್ಭವಗೊಳಿಸಿದ್ದಾರೆ. ಶ್ರೀ ಲಲಿತಾ ಸಹಸ್ರನಾಮದಲ್ಲಿ ಒಟ್ಟು ೩೨೦ ಶ್ಲೋಕಗಳಿವೆ. ಪೂರ್ವಬಾವಿಯಾಗಿ ೫೧ ಶ್ಲೋಕಗಳು, ಧ್ಯಾನವಾಗಿ ೧ ಶ್ಲೋಕವು, ಸಹಸ್ರ ನಾಮವಾಗಿ ೧೮೨ ಶ್ಲೋಕಗಳು ಮತ್ತು ಕೊನೆಯ ೮ ಶ್ಲೋಕಗಳು ಫಲಶ್ರುತಿಯಾಗಿದೆ. ಈ ಅಷ್ಟ ವಾಗ್ದೇವಿಗಳು ಉದ್ಭವಗೊಳಿಸಿದ ಶ್ರೀ ಲಲಿತಾ ಸಹಸ್ರನಾಮದ ಪ್ರಥಮ ಶ್ರವಣವನ್ನೂ ಶ್ರೀ ಲಲಿತೆಯೇ ಮಾಡಿರುವುದೂ ವಿಶೇಷವಾಗಿದೆ. ಇದೇ ರೀತಿಯಾಗಿ ಶ್ರೀ ಕೃಷ್ಣ ಪರಮಾತ್ಮನೂ ಶ್ರೀ ವಿಷ್ಣುಸಹಸ್ರನಾಮವನ್ನು ಭೀಷ್ಮರಿಂದ ಶ್ರವಣ ಮಾಡಿದ್ದರಿಂದ ಶ್ರೀ ವಿಷ್ಣುಸಹಸ್ರನಾಮವು ಮತ್ತು ಶ್ರೀ ಲಲಿತಾ ಸಹಸ್ರನಾಮವೂ ಎರಡೂ ಅಪರೂಪಗಳಾಗಿ ತಮ್ಮ ನಾಮ ಪಾರಾಯಣೆಗಳನ್ನು ತಾವೇ ಮೊದಲು ಶ್ರವಣ ಮಾಡಿದ್ದಾಗಿದೆ.

ಶ್ರೀ ಲಲಿತಾ ಸಹಸ್ರನಾಮದ ಹಲವು ವಿಶೇಷತೆಗಳೇನೆಂದರೆ, ಅಗಸ್ತ್ಯರು ಶ್ರೀ ವಿಷ್ಣು ಸ್ವರೂಪಿಯಾದ ಶ್ರೀ ಹಯಗ್ರೀವ ದೇವರಿಂದಲೇ ಶ್ರೀ ವಿದ್ಯಾದೇವಿಯಾದ ಲಲಿತೆಯ ಸಹಸ್ರನಾಮದ ಉಪದೇಶ ಪಡೆದಿದ್ದಾಗಿದೆ. ಇದರ ಮತ್ತೊಂದು ವಿಶೇಷತೆಯೇನೆಂದರೆ ಇದರಲ್ಲಿ

ಪುನಃರುಕ್ತಿಗಳಿಲ್ಲ ಅಂದರೆ ಯಾವುದನ್ನು ಹೇಳಿದ್ದಾರೋ ಅದನ್ನು ಮತ್ತೆ ಹೇಳುವಂತಿಲ್ಲ. ಒಂದು ಬಾರಿ ಉಚ್ಚರಿಸಿದ ನಾಮವು ಎಲ್ಲಿಯೂ ಮತ್ತೊಂದು ಬಾರಿ ಉಚ್ಚಾರವಾಗುವುದಿಲ್ಲ. ಆದ್ದರಿಂದ ಓದುವಾಗ ನಾಮಗಳಲ್ಲಿ ಅತ್ಯಂತ ಜಾಗರೂಕತೆಯ ಅವಶ್ಯಕತೆಯಿರಬೇಕು. ಏಕೆಂದರೆ ಉಚ್ಚರಿಸುವ ನಾಮಗಳಲ್ಲಿ ತಪ್ಪಾದರೆ ಪುನರುಕ್ತಿಯಾಗುವ ಸಾಧ್ಯತೆಗಳಿದ್ದು ಅರ್ಥ ಭಂಗವಾಗುತ್ತದೆ. ಇದನ್ನು ತೈತ್ತರೀಯ ಉಪನಿಷತ್ತಿನ ಶಿಕ್ಷಾವಲ್ಲಿಯ ಕಾಂಡದಲ್ಲಿನ ೧ನೇ ಮತ್ತು ೨ನೇ ಅನುವಾಕಗಳಲ್ಲಿ ವೇದದ ಪಾರಾಯಣದ ಉಚ್ಚಾರದ ಪ್ರಾಮುಖ್ಯತೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಇದೇ ರೀತಿ ಶ್ರೀ ಲಲಿತಾ ಸಹಸ್ರನಾಮಕ್ಕೂ ಅನ್ವಯವಾಗುತ್ತದೆ. ನಾಮಾವಳಿಗಳ ಪಾರಾಯಣದ ಮೊದಲು ಒಬ್ಬ ಶ್ರೀ ವಿದ್ಯಾ ಉಪಾಸಕರ ಬಳಿಯಿಂದ ಕಲಿತುಕೊಳ್ಳಬೇಕಾದ ಅಗತ್ಯವಿದೆ. ಏಕೆಂದರೆ ಇದಕ್ಕೆ ಸಂಸ್ಕೃತ ಭಾಷಾ ಜ್ಞಾನವು ಮತ್ತು ಉಚ್ಚಾರ ಕ್ರಮಗಳು ಅವಶ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಉಚ್ಚಾರಗಳು ಪುನರುಕ್ತಿಯಾಗುವಂತಹ ಅವಕಾಶಗಳಿದ್ದು ಆ ಪದಗಳ ಅರ್ಥವೇ ಬೇರೆಯಾಗುತ್ತದೆ.

ಫಲಶ್ರುತಿಯ ೮೬ ಶ್ಲೋಕಗಳಲ್ಲಿ ಇದನ್ನು ಹೇಗೆ ಓದಬೇಕು, ಆಚರಿಸಬೇಕು ಅಥವಾ ಪೂಜಿಸಬೇಕೆಂದು ತಿಳಿಸಲ್ಪಡುತ್ತದೆ. ಅಲ್ಲದೆ ಶ್ರೀ ಲಲಿತಾ ಸಹಸ್ರನಾಮದಿಂದ ಉಂಟಾಗುವ ಒಳಿತನ್ನು ವಿವರಿಸುತ್ತದೆ. ನೋವಿಲ್ಲದ ಜೀವನದಿಂದ ದೀರ್ಘಾಯುಸ್ಸುಗಳ ಸಹಿತ ದಾರಿದ್ರ್ಯನಾಶವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಶ್ರೀ ಮಹಾಲಕ್ಷ್ಮಿಯು ಚಂಚಲ ಸ್ವಭಾವದವಳಾಗಿದ್ದಾಳೆ ಆದ್ದರಿಂದ ಎಲ್ಲಿಯೂ ಶಾಶ್ವತವಾಗಿ ನೆಲೆಸುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಶ್ರೀ ಲಲಿತಾ ಸಹಸ್ರನಾಮ ಜಪಿಸುವ ಮನೆಯಲ್ಲಿ ಶ್ರೀ ಮಹಾಲಕ್ಷ್ಮಿಯು ಸಾಂಚಲ್ಯದಿಂದಿರುತ್ತಾಳೆ. ಸಾಂಚಲ್ಯವೆಂದರೆ ಚಂಚಲವಿಲ್ಲದಿರುವುದು ಅಥವಾ ಸ್ಥಿರವಾಗಿರುವುದು. ಶ್ರೀ ಲಲಿತಾಸಹಸ್ರನಾಮ ಜಪಿಸುವವರ ನಾಲಗೆಯಲ್ಲಿ ಸರಸ್ವತಿಯು ವಾಸವಾಗಿ, ಅವರ ನಾಲಗೆಯ ತುದಿಯನ್ನು ನಾಟ್ಯರಂಗವಾಗಿಸಿಕ್ಕೊಂಡು, ಅವರಿಂದ ವಾಕ್ಯಗಳನ್ನು ಉಚ್ಚರಿಸುವಾಗ ಅವಶ್ಯವಾದ ಶಕ್ತಿಗಳನ್ನು ಅನುಗ್ರಹಿಸುತ್ತಾಳೆಂಬುದನ್ನು ಈ ಸಂಸ್ಕೃತ ಶ್ಲೋಕದಲ್ಲಿ ವ್ಯಾಖ್ಯಾನಿಸಿದ್ದಾರೆ: "ಭಾರತಿ ತಸ್ಯ ಜಿಗ್ವಾಗ್ರೆ ರಂಗೆ ನೃತ್ಯತಿ"

ಶ್ರೀ ಲಲಿತೆಯ ಒಂದೇ ನಾಮದ ಉಚ್ಚಾರಣೆಯಿಂದ ಹದಿನಾಲ್ಕು ಲೋಕದಲ್ಲೂ ಮಾಡುವ ಪಾಪಗಳಿಗೆ ದೋಷ ನಿವೃತಿಯಾಗುತ್ತೆಂದು ಫಲಶೃತಿಯಲ್ಲಿ ಹೇಳಿದೆ. ಅಂದರೆ ಪೂರ್ತಿ ಸಹಸ್ರನಾಮದ ಪಾರಾಯಣದಿಂದ ಉಂಟಾಗುವ ದೋಷ ನಿವೃತಿಗಳನ್ನು ಸಾಮಾನ್ಯರಾದ ನಾವುಗಳು ಊಹಿಸಲೂ ಅಸಾಧ್ಯ. ಪ್ರತಿದಿನವೂ ಇದನ್ನು ಪಾರಾಯಣ ಮಾಡಲು ಆಗದವರು ಕನಿಷ್ಪಪಕ್ಷ ತನ್ನ ಜನ್ಮನಕ್ಷತ್ರ, ಅನುಜನ್ಮ (೧೦ನೇ ನಕ್ಷತ್ರ) ಅಥವಾ ತ್ರಿಜನ್ಮದ (೧೯ನೇ ನಕ್ಷತ್ರ) ದಿನಗಳಾದರೂ ಪಾರಾಯಣ ಮಾಡಬಹುದೆಂದು ತಿಳಿಸಲಾಗಿದೆ.

ಅಮ್ಮನವರಾದ ಶ್ರೀ ಲಲಿತಾ ದೇವಿಯನ್ನು ಪ್ರಾರ್ಥಿಸೋಣ ಮತ್ತು ಒಳಿತನ್ನು ಪಡೆಯೋಣ.

# ಅಧ್ಯಾಯ ೪ --- ಶ್ರೀ ಲಲಿತಾ ಸಹಸ್ರನಾಮ ಮತ್ತು Tape Recorder



ಅಮ್ಮನವರ ಸ್ತುತಿಗಳಲ್ಲಿ ಪ್ರಪ್ರಥಮವಾದದ್ದು ಶ್ರೀ ಲಲಿತಾ ಸಹಸ್ರನಾಮ. ಇದನ್ನು ಉಪದೇಶ ಮಾಡಿದವರು ಶ್ರೀ ಸಾಕ್ಷಾತ್

ಹಯಗ್ರೀವ ದೇವರು ಮತ್ತು ಉಪದೇಶ ಪಡೆದವರು ಶ್ರೀ ಅಗಸ್ತ್ಯ ಮಹರ್ಷಿಗಳು. ಇವರಿಬ್ಬರೂ ಸಾಧಾರಣದವವಲ್ಲ. ಒಮ್ಮೆ ಬ್ರಹ್ಮದೇವರಿಂದ ವೇದಗ್ರಂಥಗಳನ್ನು ಒಬ್ಬ ಅಸುರನು ಅಪಹರಿಸಿಕೊಂಡು ಹೋದಾಗ, ಆ ಅಸುರನಿಂದ ವೇದಗ್ರಂಥಗಳನ್ನು ಹಿಂಪಡೆಯುವುದಕ್ಕಾಗಿಯೇ ಸಾಕ್ಷಾತ್ ಶ್ರೀ ಮಹಾವಿಷ್ಣುವು ಶ್ರೀ ಹಯಗ್ರೀವರ ಅವತಾರವೆತ್ತುತ್ತಾರೆ. ಜ್ಞಾನಕ್ಕೆ ಗುರುಗಳಾದ ಶ್ರೀ ಹಯಗ್ರೀವ ದೇವರೇ ಸ್ವತಃ ಉಪದೇಶಿಸಿದ್ದಾರೆ. ಅದೇ ರೀತಿಯಲ್ಲಿ ಅಗಸ್ತ್ಯ ಮಹರ್ಷಿಗಳೂ ಅಸಾದಾರಣವಾದವರು. ಒಮ್ಮೆ ಶಿವ ಪಾರ್ವತಿಯವರ ವಿವಾಹ ಸಂಧರ್ಭದಲ್ಲಿ ಬ್ರಹ್ಮ, ವಿಷ್ಣು ಮತ್ತು ಇಂದ್ರರ ಸಮೇತರಾಗಿ ಎಲ್ಲಾ ದೇವಾನು ದೇವತೆಗಳು ಆಗಮಿಸಿದಾಗ, ಭೂಮಂಡಲವು ತನ್ನ ಸಮತೋಲನವನ್ನು ಕಳೆದುಕೊಂಡು ಉತ್ತರ ದಿಕ್ಕಿಗೆ ವಾಲಿತು. ಇದನ್ನು ಕಂಡ ಪರಮೇಶ್ವರನು ಅಗಸ್ತ್ಯರನ್ನು ಭೂಮಂಡಲದ ದಕ್ಷಿಣ ಭಾಗಕ್ಕೆ ಕಳುಹಿಸಿದನು. ಆಗ ಉತ್ತರಕ್ಕೆ ವಾಲಿದ್ದ ಭೂಮಂಡಲವು ಉತ್ತರ ಮತ್ತು ದಕ್ಷಿಣ ಬಾಗಗಳ ಸಮನಾಗಿ, ತನ್ನ ಸಮತೋಲನವನ್ನು ಕಾಯ್ದುಕೊಂಡಿತು. ಇದರಿಂದ ಒಂದೆಡೆ ಆದಿ ಮತ್ತು ಅಂತ್ಯವಿಲ್ಲದ ಪರಮೇಶ್ವರನ ಸಮೇತ ಎಲ್ಲಾ ದೇವಾನುದೇವತೆಗಳು ಇರಲು, ಮತ್ತೊಂದೆಡೆ ಕೇವಲ ಅಗಸ್ತ್ಯ ಮಹರ್ಷಿಗಳು ಮಾತ್ರ ಇದ್ದರು, ಆದ್ದರಿಂದ ಅವರೆಲ್ಲರಿಗೂ ಅಗಸ್ತ್ಯ ಮಹರ್ಷಿಗಳು ಸಮವಾಗಿರುವುದು ಕಾಣಸಿಗುತ್ತದೆ. ಈ ರೀತಿಯಾಗಿ ಸಾಕ್ಷಾತ್ ಶ್ರೀವಿಷ್ಣುವೇ ಆಗಿರುವ ಶ್ರೀ ಹಯಗ್ರೀವ ದೇವರು ಅಗಸ್ತ್ಯರಿಗೆ ಉಪದೇಶಿಸಿದ ಶ್ರೀ ಲಲಿತಾ ಸಹಸ್ರನಾಮವು ಎಷ್ಟರ ಮಟ್ಟಿಗೆ ಉತ್ತಮವಾದ ಮತ್ತು ಅರ್ಥಗರ್ಭಿತವಾದ ಗ್ರಂಥವೆಂಬುದು ನಮ್ಮಂತಹ ಸಾಧಾರಣ ಮನುಷ್ಯರಿಗೆ ಅರ್ಥೈಸಿಕೊಳ್ಳಲು ಸುಲಭ ಸಾಧ್ಯವೇ?

ಹೀಗಿರುವಾಗಲೂ ಶ್ರೀ ಲಲಿತಾಸಹಸ್ರನಾಮದ ಫಲಗಳ ಬಗ್ಗೆ ಒಬ್ಬ ವಿದೇಶಿಯನ ಸಂಶೋಧನೆ ಮತ್ತು ಜಗತ್ತಿಗೆ ಅರ್ಥೈಸುವಲ್ಲಿ ಅತ್ಯಂತ ಮಹನೀಯವಾದದ್ದು. ಅವರು ಧಾರ್ಮಿಕ ಭಾವನೆಗಳಿಂದ ಮತ್ತು ನಮ್ಮ ಸಂಸ್ಕೃತಿಯನ್ನು ಅರಿಯುವ ಉದ್ದೇಶದಿಂದ ಭಾರತಕ್ಕೆ ಬಂದು, ಇಲ್ಲಿ ಶ್ರೀ ಲಲಿತಾಸಹಸ್ರನಾಮದ ಬಗ್ಗೆ ಗುರು ಹಿರಿಯರಲ್ಲಿ ತಿಳಿದುಕೊಂಡರು. ಅವರು ಅರಿತ ವಿಚಾರಗಳಲ್ಲಿ ಸ್ಪಷ್ಟವಾದ ಶ್ರೀ ಲಲಿತಾಸಹಸ್ರನಾಮದ ನಿರ್ದಿಷ್ಟ ಸಂಖ್ಯೆಯ ಪಾರಾಯಣವಾದರೆ ಶ್ರೀ ಲಲಿತಾಂಬಿಕೆಯೇ ಪ್ರತ್ಯಕ್ಷಳಾಗುವುದನ್ನು ಅರಿತು ಕುತೂಹಲದಿಂದ

ಮತ್ತು ಅತ್ಯಂತ ಭಕ್ತಿಯಿಂದ ಒಬ್ಬ ಸಂಸ್ಕೃತದಲ್ಲಿ ಪರಿಣಿತ ಮತ್ತು ಯೋಗ್ಯನಾದ, ಸ್ಪಷ್ಟವಾಗಿ ಉಚ್ಚರಿಸುವ ಗುರುವಿನಿಂದ ಶ್ರೀ ಲಲಿತಾಸಹಸ್ರನಾಮವನ್ನು ತನ್ನ Tape Recorder ನಲ್ಲಿ ಮುದ್ರಿಸಿಕೊಂಡರು. ತನ್ನ ಮಾತೃದೇಶಕ್ಕೆ ಹಿಂತಿರುಗಿದ ವಿದೇಶಿಯರು ತನ್ನ ಬಳಿಯಿದ್ದ Tape Recorderನಿಂದ ಶ್ರೀ ಲಲಿತಾಸಹಸ್ರನಾಮವನ್ನು ನಿರಂತರವಾಗಿ ಯಾವುದೇ ಅಡೆತಡೆಯಿಲ್ಲದಂತೆ ನುಡಿಯುವಂತೆ ಮಾಡಿ, ಅದು ನುಡಿಸಿದ ಸಂಖ್ಯೆಗಳನ್ನು ಎಣಿಸುವಂತಾ ಯಂತ್ರದ ಸಹಿತ ತನ್ನ ಪ್ರಯೋಗಾಲಯದಲ್ಲಿ ಹೊಂದಿಸಿ, ಶ್ರೀ ಲಲಿತಾಸಹಸ್ರನಾಮವನು ನಿರಂತರವಾಗಿ ನುಡಿಸತೊಡಗಿದರು. ಕ್ರಮೇಣ ಗುರು ಹಿರಿಯರು ತಿಳಿಸಿದಂತಾ ಸಂಖ್ಯೆಗೆ ಬಹಳ ಸಮೀಪದಲ್ಲಿರುವಾಗ, ವಿದೇಶಿಯರು ಅತ್ಯಂತ ಅತ್ಯಾವಶ್ಯಕ ಕಾರ್ಯವಾಗಿ ತನ್ನ ಪ್ರಯೋಗಾಲಯದಿಂದ ಹೊರ ಹೋಗಬೇಕಾಯಿತು. ವಿದೇಶಿಯರು ತನ್ನ ಕಾರ್ಯವನ್ನು ಶೀಘ್ರವಾಗಿ ಮುಗಿಸಿ ಹಿಂತಿರುಗಿ ಬಂದು ನೋಡಿದಾಗ, ತನ್ನ Tape Recorder ಉರಿದು ಹೋಗಿ ಅದರ ಭಸ್ಮವು ಒಂದು ರಂಗೋಲಿಯ ರೂಪದಲ್ಲಿ ಹರಡಿತ್ತು ಹಾಗೂ ಅವರು ಸಂಖ್ಯೆಗಳನ್ನು ಎಣಿಸುವಂತಾ ಯಂತ್ರವನ್ನು ಅವಲೋಕಿಸಿದಾಗ, ಅದು ಗುರುಹಿರಿಯರು ಹೇಳಿದ್ದ ನಿರ್ದಿಷ್ಟ ಸಂಖ್ಯೆಯನ್ನು ತೋರಿಸುತ್ತಿತ್ತು. ನಂತರ ಭಸ್ಮಗಳ ರಂಗೋಲಿಯ ಆಕಾರವನ್ನು ಗಮನಿಸಿದಾಗ, ಅದು ಶ್ರೀ ಲಲಿತಾಂಬಿಕೆಯ ಶ್ರೀಚಕ್ರ ಯಂತ್ರಕ್ಕೆ ಹೋಲುತಿತ್ತು. ಇದನ್ನು ನೋಡಿ ವಿದೇಶಿಯರ ಮನಸ್ಸು ಪರವಶ ನಿಲೆಯನ್ನು ತಲುಪಿ, ಹೀಗೆ ಒಂದು ಯಂತ್ರವೇ ಶ್ರೀ ಲಲಿತಾಸಹಸ್ರನಾಮವನ್ನು ಪುನಃರುಚ್ಚರಿಸಿದ್ದರಿಂದ ಈ ಆಕಾರವನ್ನು ಪಡೆಯಬೇಕಾದರೆ, ಮನುಷ್ಯನು ಶ್ರದ್ಧಾಭಕ್ತಿಗಳಿಂದ ಪಠಿಸಿದರೆ ಎಷ್ಟು ಫಲಗಳನ್ನು ಸಿದ್ಧಿಸಿಕ್ಕೊಳ್ಳಬಹುದೆಂದು ಯೋಚಿಸಿ ಮೂಕವಿಸ್ಮಿತರಾದರು. ಇದರಿಂದ ಪ್ರಭಾವಿತರಾದ ವಿದೇಶಿಯರು ತನ್ನನು ಶಾಕ್ತೇಯರನ್ನಾಗಿಸಿಕೊಂಡು, ಧಾರ್ಮಿಕ ಚಿಂತನೆಗಳ ಸಂಶೋಧನೆಯಲ್ಲಿ ತೊಡಗಿಸಿಕೊಂಡು ತನ್ನ ಪ್ರಯೋಗಗಳನ್ನು ಮತ್ತು ಅದರ ಬಗ್ಗೆ ಸ್ನೇಹಿತರೊಂದಿಗೆ ಆಂಗ್ಲಭಾಷೆಯಲ್ಲಿ ಹಂಚಿಕೊಂಡರು. ಈ ಮೂಲಕವಾಗಿ ಶ್ರೀ ಲಲಿತಾ ಮಹಾಶಕ್ತಿಯ ಮತ್ತು ಶ್ರೀ ಲಲಿತಾ ಸಹಸ್ರನಾಮದ ಬಗ್ಗೆ ವಿದೇಶಿಯರಲ್ಲಿ ಅರಿವು ಮೂಡತೊಡಗಿತು. ಶಾಕ್ತೇಯದಲ್ಲಿ "ಶ್ರೀ ಶಾರದಾ ತಿಲಕ ತಂತ್ರ" ವೆಂಬ ಗ್ರಂಥವು ಕುಂಡಲಿನಿ ಶಕ್ತಿಯ ಬಗ್ಗೆ ತಿಳಿಸುತ್ತದೆ.

ಆಂಗ್ಲಪುಸ್ತಕಗಳಾದ The Serpent Power, Yantra & it's Power Kundalini ಮುಂತಾದುವುಗಳು ಶಾಕ್ತ ತತ್ವಗಳನ್ನು ಉತ್ತಮವಾಗಿ ವಿದೇಶಿಯರಲ್ಲಿ ಪ್ರಸಾರಗೊಳಿಸಿದೆ.




ಎಲ್ಲಾ ಮಂಗಳಗಳನ್ನುಂಟು ಮಾಡುವ ಶ್ರೀ ಲಲಿತಾಸಹಸ್ರನಾಮಗಳನ್ನು ಶ್ರೀಚಕ್ರ ಯಂತ್ರದ ಮುಂದೆ ಪಾರಾಯಣ ಮಾಡುವುದು ವಿಶೇಷ. ನವರಾತ್ರಿಗಳಲ್ಲಿಯೂ, ಪೌರ್ಣಮಿಗಳಲ್ಲಿಯೂ ಮತ್ತು ಶುಕ್ರವಾರಗಳಲ್ಲಿಯೂ ಶ್ರೀ ಲಲಿತಾಸಹಸ್ರನಾಮವನ್ನು ಪಾರಾಯಣ ಮಾಡುವುದು. ಅದು ಸಾಧ್ಯವಾಗದಿದ್ದಲ್ಲಿ ಶ್ರವಣವನ್ನು ಮಾಡುವುದು ವಿಶೇಷವೇ. ಆದುದರಿಂದ ಸಕಲ ಸೌಭಾಗ್ಯಗಳು ನಮ್ಮನ್ನರಸಿಕೊಂಡು ಬರುತ್ತವೆ. ಈ ಬ್ರಹ್ಮಾಂಡವನ್ನೇ ಶ್ರೀ ಲಲಿತಾಂಬಿಕೆಯನ್ನಾಗಿಸಿಕೊಂಡು ಪಾರಾಯಣ ಮಾಡುವವರಿಗೆ ವ್ಯಾಕುಲಗಳು ಉಂಟಾಗುವುದಿಲ್ಲ. ಈ ರೀತಿಯಾಗಿ ಪಾರಾಯಣ ಮಾಡುವವರ ನಾಲಿಗೆಯಲ್ಲಿ ಶ್ರೀವಿದ್ಯಾದೇವತೆಯೇ ನೆಲೆಸಿ, ಅವರ ಆಶೀರ್ವಾದಗಳು ನೆರವೇರುವಂತೆ ಮಾಡುತ್ತಾಳೆ ಹಾಗು ಇವರುಗಳು ಸಕಲ ಕಲೆಗಳಲ್ಲಿಯೂ ಪರಿಣಿತರಾಗುವರು. ಯಾವುದೇ ಮಾಟ ಮಂತ್ರಗಳು ಅವರಿಗೆ ನಾಟದಂತೆ ಶ್ರೀ ಲಲಿತಾಸಹಸ್ರನಾಮದ ಪಾರಾಯಣವು ಕವಚವಾಗಿರುತ್ತದೆ. ಪ್ರತ್ಯಂಗಿರಾ ದೇವಿ ಮತ್ತು ಶರಭ ಮೂರ್ತಿಗಳು ಯಾವುದೇ ದುಷ್ಟ ಶಕ್ತಿಗಳು ತಾಗದಂತೆ ಪಾರಾಯಣಿಗಳನ್ನು ರಕ್ಷಿಸುತ್ತಾರೆ. ಶ್ರೀ ಲಲಿತಾಸಹಸ್ರ ನಾಮದಿಂದ ಅಭಿಮಂತ್ರಿತವಾದ ವಿಭೂತಿಯು ಧನಾತ್ಮಕ ಶಕ್ತಿಯನ್ನು ಹೊಂದಿ

ಇದನ್ನು ಧರಿಸುವವರಿಗೆ ಯಾವುದೇ ದುಃಸ್ವಪ್ನಗಳಾಗದಂತೆ ತಡೆಗಟ್ಟುತ್ತದೆ. ಈ ವಿಭೂತಿಯನ್ನು ಪ್ರತಿನಿತ್ಯವೂ ಧರಿಸುವವರಿಗೆ ಶ್ರೀ ಲಲಿತಾಂಬಿಕೆಯು ಜೀವನಾವಶ್ಯಗಳ ಕೊರತೆಯಿಲ್ಲದಂತೆ ಮಾಡುತ್ತಾಳೆ.

ಶಾಕ್ತ ಸಂಪ್ರದಾಯದ ಆಚರಣೆಯಲ್ಲಿರುವ ಮಂತ್ರ, ಯಂತ್ರ ಮತ್ತು ತಂತ್ರಗಳನ್ನು ವಿದೇಶಿಯರು ಉತ್ತಮವಾಗಿ ವಿಮರ್ಶಿಸಿ ಮೇಲ್ಕಂಡ ಆಂಗ್ಲಭಾಷೆಯ ಪುಸ್ತಕಗಳಲ್ಲಿ ಉಲ್ಲೇಖಿಸಿದ್ದಾರೆ. ಈ ರೀತಿಯಾದ ಶ್ರೀ ಲಲಿತಾಸಹಸ್ರನಾಮದ ಪಾರಾಯಣೆಯನ್ನು ನಾವೂ ಉಪದೇಶಿಸಿಕೊಂಡು ಪಾರಾಯಣ ಮಾಡುವ ಸೌಭಾಗ್ಯ ಒದಗಲೆಂದು ಆಶಿಸೋಣ.



# ಅಧ್ಯಾಯ ೫ --- ಶ್ರೀ ಲಲಿತಾ ತ್ರಿಶತಿ.

ಶ್ರೀ ಲಲಿತಾ ತ್ರಿಶತಿಯು ಶ್ರೀ ವಿಷ್ಣುಸ್ವರೂಪಿಯಾದ ಶ್ರೀ ಹಯಗ್ರೀವ ದೇವರಿಂದ ಅಗಸ್ತ್ಯ ಮಹರ್ಷಿಗಳಿಗೆ ಮತ್ತು ಸಹಧರ್ಮಿಣಿಯಾದ ಲೋಪಾಮುದ್ರೆಗೆ ಉಪದೇಶಿಸಿದ ಮಂತ್ರವಾಗಿದೆ. ಈ ಮಂತ್ರವು ಬ್ರಹ್ಮಾಂಡ ಪುರಾಣದ ಉತ್ತರ ಕಾಂಡದಲ್ಲಿನ ಶ್ರೀ ಲಲಿತೋಪಾಖ್ಯಾನದಲ್ಲಿರುವುದು. ಶ್ರೀ ಲಲಿತಾ ಸಹಸ್ರನಾಮವು ಶ್ಲೋಕವಾಗಿಯೂ ಅಥವಾ ಮಂತ್ರವಾಗಿಯೂ ಪಾರಾಯಣ

ಮಾಡಬಹುದಾಗಿದೆ. ಆದರೆ ಶ್ರೀ ಲಲಿತಾ ತ್ರಿಶತಿಯು ಪೂರ್ತಿಯಾಗಿ ಮಂತ್ರಸ್ವರೂಪದಲ್ಲೇ ಪಾರಾಯಣ ಮಾಡಬೇಕಾಗುತ್ತದೆ. ಶ್ರೀ ಲಲಿತಾ ಎಂಬ ನಾಮವು ಶ್ರೀ ಲಲಿತಾ ಸಹಸ್ರನಾಮದಲ್ಲಾಗಲಿ ಅಥವಾ ಶ್ರೀ ಸೌಂದರ್ಯ ಲಹರಿಯಲ್ಲಾಗಲಿ ಸ್ವತಂತ್ರ ಉಚ್ಚರಣೆಯಾಗುವುದಿಲ್ಲ, ಅಂದರೆ ಶ್ರೀ ಲಲಿತಾ ಎಂಬ ನಾಮವು ಮತ್ತೊಂದು ಶಬ್ದದ ಸಹಿತವೇ ಉಚ್ಚರಿಸಲ್ಪಡುತ್ತದೆ. ಇದಕ್ಕೆ ಉದಾಹರಣೆಯಾಗಿ ಶ್ರೀ ಲಲಿತಾ ಸಹಸ್ರನಾಮದ ಕೊನೆಯ ನಾಮವಾದ ಶ್ರೀ ಲಲಿತಾಂಬಿಕಾಯ್ಯೈ ನಮಃ ಎಂದು ಉಚ್ಚರಿಸಲ್ಪಟ್ಟಿದೆ. ಶ್ರೀ ಲಲಿತಾ ತ್ರಿಶತಿಯ ೬೨ನೇ ನಾಮವಾಗಿ ಶ್ರೀ ಲಲಿತಾಯ್ಯೈ ನಮಃ ಎಂದು ಉಚ್ಚರಿಸಲ್ಪಡುತ್ತದೆ. ಶ್ರೀ ಲಲಿತಾ ಎಂಬ ನಾಮಕ್ಕೆ ಸುರದ್ರೂಪಿಯೆಂದು ಅರ್ಥೈಸುವರು. ಅದೇ ಅರ್ಥದಲ್ಲಿ ಶ್ರೀ ಲಲಿತಾ ಸಹಸ್ರನಾಮದಲ್ಲಿ ಶ್ರೀ ಮಹಾ ಲಾವಣ್ಯ ಸೇವಿತಾಯ್ಯೈ ನಮಃ ಎಂದು ಕರೆಯಲ್ಪಡುತ್ತಾಳೆ.

ಶ್ರೀ ಲಲಿತಾ ತ್ರಿಶತಿಯಲ್ಲಿ ಒಟ್ಟು ೩೦೦ ನಾಮಗಳಿವೆ. ಶ್ರೀ ವಿದ್ಯಾ ಪಂಚದಶಿ ಮಂತ್ರಗಳೇ ಇದರ ಆದಾರ. (ಪಂಚದಶಿ ಎಂದರೆ ೧೫ ಮಂತ್ರಗಳ ಸಂಗ್ರಹ) ಇವುಗಳು ಐದು, ಆರು ಮತ್ತು ನಾಲ್ಕು ಅಕ್ಷರಗಳಾಗಿ ವಿಂಗಡನೆಗೊಂಡಿದೆ. ಈ ಹದಿನೈದು ಮಂತ್ರಗಳ ಅಕ್ಷರಗಳು ಶ್ರೀ ಲಲಿತಾ ತ್ರಿಶತಿಯಲ್ಲಿನ ಪ್ರತಿಯೊಂದು ಮಂತ್ರಗಳ ಮೊದಲ ಅಕ್ಷರವಾಗಿ ಮೂಡಲ್ಪಟ್ಟಿದೆ. ಅಂದರೆ ಒಂದೊಂದು ಅಕ್ಷರಗಳು ಶ್ರೀಲಲಿತಾ ತ್ರಿಶತಿಯ ೨೦ ನಾಮಗಳಿಗೆ ಮೊದಲಿನದಾಗಿದೆ. ಮೂರು ಭಾಗಗಳು ಹ್ರೀಂ ಎಂಬ ಅಕ್ಷರದಿಂದ ಮುಗಿಯುವುದರಿಂದ ಹ್ರೀಂ ಎಂದು ತೊಡಗುವ ನಾಮಗಳು ಒಟ್ಟು ೬೦ ಸಂಖ್ಯೆಗಳಾಗಿರುತ್ತದೆ. ಶ್ರೀ ವಿದ್ಯಾ ಪಂಚದಶಿಯಲ್ಲಿರುವ ಮಿಕ್ಕ ೧೨

ಅಕ್ಷರಗಳಿಂದ ಕೂಡಿದ ೨೪೦ ನಾಮಗಳು ತ್ರಿಶತಿಯಲ್ಲಿ ಕೂಡಿವೆ. ಹಾಗಾಗಿ ೩೦೦ ನಾಮಗಳೂ ಶ್ರೀ ವಿಧ್ಯಾ ಪಂಚದಶಿಯಲ್ಲಿನ ಪ್ರತಿಯೊಂದು ಅಕ್ಷರಗಳಿಂದ ಕೂಡಿದೆ. ಕಲಾವತಿ, ಕದಂಬ ಕುಸುಮ ಪ್ರಿಯ, ಕಲ್ಯಾಣಿ, ಸರ್ವಾರುಣ, ಕಾಲಹಂತ್ರಿ, ಸಮಾನಾಧಿಕ ವರ್ಜಿತ, ಕಾಮೇಶ ಪ್ರಾಣನಾಡಿ, ಸರ್ವಾಭರಣ ಭೂಷಿತ ಎಂಬ ನಾಮಗಳೂ ಎರಡೂ ಗ್ರಂಥಗಳಲ್ಲಿ ಕಾಣಬಹುದಾಗಿದೆ.

" ಕಾಕಮಾನದು ಒರು ಕೋಡಿ ಕಲ್ಯೆಂದಾಲೂಮ್, ಒರು ಕಲ್ ಮುನ್ ಎದಿರ್ ನಿಕ್ಕುಮೋ" ಎಂದು ಹಾಡುತ್ತಾರೆ ಶ್ರೀ ಕಾಯುಮಾನವರೆಂಬ ಸ್ವಾಮಿಗಳು. ಇದರರ್ಥವೇನೆಂದರೆ, ಒಂದೇ ಕಲ್ಲನ್ನು ಎಸೆದಾಗ ಹೇಗೆ ಕೋಟಿ ಕಾಗೆಗಳು ಹಾರಿ ಹೋಗುತ್ತವೆಯೋ ಹಾಗೆ ಒಂದೇ ನಾಮದ ಉಚ್ಚಾರದಿಂದ ಸಕಲ ಪಾಪಗಳೂ ನಿವೃತಿಯಾಗುತ್ತದೆ. ಹಾಗಾಗಿ ಈ ಎರಡೂ ಸ್ತುತಿಗಳನ್ನು ಶ್ರೀ ದಕ್ಷಿಣಾಮೂರ್ತಿ ಸ್ವರೂಪರಾದ ಗುರುಗಳಿಂದ ಉಪದೇಶಿಸಲ್ಪಟ್ಟರೆ ಉತ್ತಮ. ತನ್ನ ಬಾಳು ಎಲ್ಲಿ ಕೊನೆಗೊಳ್ಳುವುದೋ ಎಂದು ಭಯಬೀತರಾಗುವುದಕ್ಕಿಂತಾ ತನ್ನ ಬಾಳು ಆರಂಭವೇ ಆಗುವುದಿಲ್ಲವೋ ಎಂದು ಯೋಚಿಸುವುದು ಉತ್ತಮ. ಹೇಗೆ ಹೂವಿಗೆ ವಾಸನೆಯೋ ಹಾಗೆ ಜೀವನಕ್ಕೆ ಲಕ್ಷ್ಯವೂ ಅತಿಮುಖ್ಯವಾಗಿದೆ. ಲಕ್ಷ್ಯವಿಲ್ಲದ ಮನುಷ್ಯನ ಜೀವನವು ಸಮುದ್ರದಲ್ಲಿ ದಿಕ್ಕು ತಿಳಿಯದ ಹಡಗಿನಂತಾಗುತ್ತದೆ.

"ಈವದು ವಿಲಕ್ಕೇನ್ (ಒಬ್ಬರು ಮತ್ತೊಬ್ಬರಿಗೆ ಕೊಡುವುದನ್ನು ತಡೆಯಬೇಡ) ------ ಅವ್ವೈಯಾರ್ ಹೇಳಿದ ವಾಕ್ಯ"

# ಅಧ್ಯಾಯ ೬ --- ಶ್ರೀ ಲಲಿತಾ ತವ ನಾಮಂ.

ಶ್ರೀ ಕುಮಾರ ಸಂಭವ (ಕಾರ್ತಿಕೇಯನ ಜನನ)ಕ್ಕಾಗಿ ಶ್ರೀ ಪರಮೇಶ್ವರ ಪಾರ್ವತಿ ಕಲ್ಯಾಣಕೊಸ್ಕರ ದೇವತೆಗಳು ಶಿವನ ತಪಸ್ಸನ್ನು ಭಂಗಗೊಳಿಸಲು ಕಾಮದೇವನನ್ನು ಪುಷ್ಪಬಾಣ ಪ್ರಯೋಗಕ್ಕೆ ಪ್ರಚೋದಿಸುತ್ತಾರೆ. ಎಲ್ಲಾ ಬಾಣಗಳು ತಾಕಿದಾಗ ಪ್ರಾಣ ತೆಗೆದರೆ, ಪುಷ್ಪಬಾಣವು ತಾಕಿದೊಡನೆಯೆ ತಾಕಿದವರಿಗೆ ಕಾಮನೆಗಳು ಅಂದರೆ ಆಸೆಗಳನ್ನು ಉತ್ಪತ್ತಿಗೊಳಿಸುತ್ತದೆ, ಪ್ರಾಣಹಾನಿಯಾಗುವುದಿಲ್ಲ. ಹೀಗೆ

ಪುಷ್ಪಬಾಣವನ್ನು ಶಿವನ ಮೇಲೆ ಪ್ರಯೋಗಿಸಿದಾಗ, ತಪೋಭಂಗವಾದ ಶಿವನು ತನ್ನ ಮೂರನೆ ಕಣ್ಣನ್ನು ತೆರೆದು ಅದರ ಜ್ವಾಲೆಗಳಿಂದ ಕಾಮದೇವನನ್ನು ದಹಿಸಿದನು. ಹೀಗಾದ ಸ್ಥಳದಲ್ಲಿದ್ದ ಭಸ್ಮದಿಂದ ಶಿವನ ಗಣಗಳಲ್ಲಿ ಒಬ್ಬನಾದ ಚಿತ್ರಸೇನನು (ಚಿತ್ರಕರ್ಮ) ಒಂದು ಬೊಂಬೆಯನ್ನು ತಯಾರುಮಾಡಿದನು. ಆ ಬೊಂಬೆಯ ಮೇಲೆ ಶಾಂತವಾದ ಈಶ್ವರನ ಕರುಣಾದೃಷ್ಟಿಯು ತಾಗಿದಾಗ ಬೊಂಬೆಯು ಜೀವಂತವಾಯಿತು. ಆ ಜೀವಂತ ಬೊಂಬೆಯಾದ ಪುರುಷನಿಗೆ ಚಿತ್ರಸೇನನು (ಚಿತ್ರಕರ್ಮ) "ಶತರುದ್ರೀಯ" ವನ್ನು ಭೋದಿಸಿ, ಅದರ ಪಾರಾಯಣದಿಂದ ಈಶ್ವರನ ಕೃಪಾಕಟಾಕ್ಷಕ್ಕೆ ಪ್ರಾರ್ಥಿಸುವಂತೆ ಹೇಳಿದನು. ಹೀಗೆ ತನಗೆ ಭೋದನೆಯಾದ ಮಂತ್ರವನ್ನು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಜಪಿಸಿಲು ಈಶ್ವರನು ಪ್ರಸನ್ನಗೊಂಡು ಅವನಿಗೆ ೬೦ಸಾವಿರ ವರ್ಷಗಳು ರಾಜ್ಯಭಾರ ಮಾಡುವಂತೆ ಅನುಗ್ರಹಿಸಿದನು ಹಾಗೂ ಅವನಿಗೆ ಅವನ ಎದುರಾಳಿಗಳು ಎದುರಾದಾಗ ಅವರ ಬಲದಲ್ಲಿ ಅರ್ಧವನ್ನು ಅತಿಕ್ರಮಿಸುವ ಶಕ್ತಿಯನ್ನೂ ಅನುಗ್ರಹಿಸಿದನು. ಈ ರೀತಿಯಾದ ಶಕ್ತಿಗಳನ್ನೊಳಗೊಂಡವನು ತನ್ನ ಶಕ್ತಿಗಳನ್ನು ದುರುಪಯೋಗಪಡಿಸಿಕ್ಕೊಳ್ಳುತ್ತಾ ಅಸುರನಾಗಿ ಬೆಳೆದನು. ಅವನಿಗೆ ಕೇಳದೆ ಅನುಗ್ರಹಿಸಿದ ವರವನ್ನು ಅಥವಾ ಶಕ್ತಿಯ ಉಪಯೋಗವನ್ನು ಕಂಡು ಬ್ರಹ್ಮನು "ಭಂಡ್", "ಭಂಡ್" ಎಂದು ಉದ್ಗರಿಸಿದನು. "ಭಂಡ್", ಎಂದರೆ ಅಸಹ್ಯವೆಂದು ಅರ್ಥ. ಹೀಗೆ ಬ್ರಹ್ಮನ ಉದ್ಗಾರದಿಂದ ಆ ಪುರುಷನಿಗೆ ಭಂಡಾಸುರನೆಂಬ ನಾಮಕರಣವಾಯಿತು. ಬಂಡಾಸುರನ ಉಪದ್ರವಗಳನ್ನು ತಾಳಲಾರದೆ ದೇವತೆಗಳು ಸಾಕ್ಷಾತ್ ಶ್ರೀ ಮಹಾವಿಷ್ಣುವಿನ ಬಳಿ ಶರಣಾದರು, ಶ್ರೀ ಮಹಾವಿಷ್ಣುವು ತನ್ನ ವಿಷ್ಣುಮಾಯೆಯಿಂದ ಒಂದು ಸುಂದರಿಯನ್ನು ಸೃಷ್ಟಿಸಿ, ಭಂಡಾಸುರನು ಅವಳಲ್ಲಿ ಅನುರಕ್ತನಾಗುವಂತೆ ಮಾಡಿದನು. ಅವಳಲ್ಲಿ ಕಾಮಾಕರ್ಷಣೆಗೊಂಡ ಭಂಡಾಸುರನು ತನ್ನೆಲ್ಲಾ ಶಿವಕಾರ್ಯಗಳನ್ನು ತ್ಯಜಿಸಿ, ಒಂದೊಂದಾಗಿ ಶಿವನ ಶಕ್ತಿಗಳನ್ನು ಕಳೆದುಕ್ಕೊಳ್ಳತೊಡಗಿದನು. ಅದೇ ಸೂಕ್ತಸಮಯವೆಂದು ಭಾವಿಸಿದ ದೇವತೆಗಳು ಶ್ರೀ ಲಲಿತಾಂಬಿಕೆಯನ್ನು ಉದ್ದೇಶಿಸಿ ಕಠೋರ ಯಾಗದಲ್ಲಿ ತೊಡಗಿಸಿಕೊಂಡರು. ಅದರ ಕಠಿನತೆಯ ಬಗ್ಗೆ ತಿಳಿಸಬೇಕೆಂದರೆ ಅದರ ಅಂಗವಾಗಿ ದೇವತೆಗಳು ತನ್ನ ದೇಹದ ಅಂಗಗಳನ್ನೆ ಜ್ವಾಲೆಗೆ ಅರ್ಪಿಸಿ, ಜಗನ್ಮಾತೆಯು ಪ್ರಸನ್ನಳಾಗದುದರಿಂದ ಕೊನೆಗೆ ತಮ್ಮನ್ನೇ

ಅರ್ಪಿಸಲು ಸಿದ್ಧರಾದರು. ಆಗ ಅವರ ಕಠೊರ ಶ್ರದ್ಧಾ ಭಕ್ತಿಗೆ ಮೆಚ್ಚಿದ ಶ್ರೀ ಲಲಿತಾಂಬಿಕೆಯು ಪ್ರತ್ಯಕ್ಷಳಾದಳು. ಆ ಕುಂಡದಲ್ಲಿ ದೇವತೆಗಳು ತಮ್ಮೆಲ್ಲಾ ಚಿತ್ ಅಂದರೆ ಗರ್ವ ಮತ್ತು ಮಮತೆಗಳು ಅರ್ಪಿಸಿದ ಅಗ್ನಿಯಾದ್ದರಿಂದ ಅದನ್ನು ಚಿದಾಗ್ನಿಯೆಂದು ಅರ್ಥೈಸುತ್ತಾರೆ. ಶ್ರೀ ಲಲಿತಾ ಸಹಸ್ರನಾಮದ ನಾಲ್ಕನೆ ನಾಮವಾದ "ಚಿದಗ್ನಿ ಕುಂಡ ಸಂಭೂತೆ" ಎಂಬ ನಾಮವು ಇದಕ್ಕಾಗಿಯೆ ಉಲ್ಲೇಖಿಸಲಾಗಿದೆ. ಬ್ರಹ್ಮಾಂಡ ಪುರಾಣದ ಲಲಿತೋಪಾಖ್ಯಾನದ ಉಪಕತೆಯ ಸಾರಾಂಶವೇ ಈ ಮೇಲ್ಕಂಡ ಸಂಭವಗಳು. ಇದೇ ಶ್ರೀ ಲಲಿತಾಸಹಸ್ರನಾಮದ ಪೂರ್ವಪೀಠಿಕೆಯಾಗಿದೆ.

ಚಿದಗ್ನಿ ಕುಂಡದಲ್ಲಿ ಪ್ರತ್ಯಕ್ಷವಾದ ಶ್ರೀ ಲಲಿತಾಂಬಿಕೆಯು ಕೋಟಿ ಸೂರ್ಯರ ಪ್ರಕಾಶದೊಂದಿಗೆ ಮತ್ತು ಕೋಟಿ ಚಂದ್ರರಂತೆ ತಂಪಾಗಿದ್ದಳು. "ಕೋಟಿ ಸೂರ್ಯ ಪ್ರಕಾಶಂ ಮತ್ತು ಚಂದ್ರ ಕೋಟಿ ಸುದೀನಂ" ಎಂದು ಶ್ರೀ ಲಲಿತಾ ಉಪಾಖ್ಯಾನವು ಹೇಳಿದೆ. ಪ್ರತ್ಯಕ್ಷವಾದ ಶ್ರೀ ಲಲಿತಾಂಬಿಕೆಯನ್ನು ನೋಡಿದ ದೇವತೆಗಳು ಪರವಶರಾಗಿ ಸ್ತುತಿಸಿದ್ದನ್ನು "ಶ್ರೀ ಲಲಿತಾ ತವ ರಾಜಂ" ಎಂದು ಕರೆಯಲ್ಪಡುತ್ತದೆ. ಸ್ತವ ಎಂದರೆ ಸ್ತುತಿಸಲ್ಪಡುವುದು, ಆದ್ದರಿಂದ "ಸ್ತೋತ್ರಪ್ರಿಯಾ" ಎಂಬ ನಾಮವಾಗಿ ಶ್ರೀ ಲಲಿತಾ ಸಹಸ್ರನಾಮದಲ್ಲಿ ಉಲ್ಲೇಖಿಸಿದ್ದಾರೆ. "ಸ್ತೋತ್ರಂ ಲೌಕಿಕೌ ಗುಣಾನುವಾದಃ ಷಟ್ ವಿದಃ | ನಮಸ್ಕಾರಾನ್ ಸ್ತಥಾಸ್ಯೇಚ ಸಿದ್ಧಂತ್ ದೋಕ್ತಿಃ ಪರಾಕ್ರಮಃ || ವಿಭೂತಿಃ ಪ್ರಾರ್ಥ್ಯನಾ ಇತಿ ಷಟ್ ವಿದಂ ಸ್ತೋತ್ರ ಲಕ್ಷಣಂ"
ಸ್ತೋತ್ರವೆಂದರೆ ಆರುವಿಧವಾದ ಗುಣಗಳನ್ನು ಹೊಂದಿರಬೇಕು. ಪದಗಳಿಂದ ದೈವಕ್ಕೆ ನಮಸ್ಕಾರವು, ದೈವಕೃಪೆಯಿಂದಾಗುವ ಒಳಿತುಗಳನ್ನೂ, ಆ ದೇವರ ತತ್ವಗಳನ್ನೂ, ಆ ದೈವದ ಶಕ್ತಿಗಳನ್ನೂ, ಆ ದೈವದ ಮಹಿಮೆಗಳನ್ನೂ ಮತ್ತು ಆ ದೈವಕ್ಕೆ ಪ್ರಾರ್ಥನೆಯೂ ಅಡಕವಾಗಿರಬೇಕೆಂದರ್ಥ.

ಭೂಮಿಯ ಕೆಳಗೆ ಪಾತಾಲ, ವಿತಲ ಮತ್ತು ಅತಲ ಗಳೆಂಬ ಏಳು ಲೋಕಗಳಿವೆ. ಇದರಲ್ಲಿ ವಿತಲ ಲೋಕದಲ್ಲಿ ದೇವಿಯ ಮಂಡಿಯ ಭಾಗವು. ಪಾದಗಳು ಪಾತಲ ಲೋಕದಲ್ಲಿರುತ್ತವೆ. (ಅತಲ - ಪೃಷ್ಠವು, ವಿತಲ - ತೊಡೆ, ಸುತಲ - ಮೊಣಕಾಲು, ತಲಾತಲ - ಕಾಲು , ರಸಾತಲ - ಕಣಕಾಲು, ಮಹಾತಲ - ಪಾದ, ಪಾತಾಲ - ಹಿಮ್ಮಡಿ) ಈ ಭೂಮಿಯು ದೇವಿಯ ಸೊಂಟಭಾಗವಾಗಿದೆ, ಸೂರ್ಯ ಚಂದ್ರರು

ದೇವಿಯ ಎರಡು ಕಣ್ಣುಗಳಾಗಿ ಎಂಟು ದಿಕ್ಕುಗಳು ದೇವಿಯ ಕೈಗಳಾಗಿವೆ. ಶ್ರೀ ಲಲಿತಾಸಹಸ್ರನಾಮದಲ್ಲಿ ೨೮೨, ೨೮೩, ೨೮೪, ೨೮೫, ೭೫೮
ಮತ್ತು ೫೩೨ ನೇ ನಾಮಗಳು ಪುರುಷಸೂಕ್ತ ಮತ್ತು ಭಗವದ್ಗೀತೆಯ ವಿಶ್ವರೂಪ ದರ್ಶನವನ್ನು ವ್ಯಾಖ್ಯಾನಿಸಿದೆ. ಸಾರಾಂಶವೇನೆಂದರೆ, ಶ್ರೀ ಲಲಿತಾಂಬಿಕೆಯು ಸರ್ವ ಅಂಗಗಳಿಗೂ, ಸರ್ವ ಇಂದ್ರಿಯಗಳಿಗೂ ಮತ್ತು ಬುದ್ಧಿಗಳಿಗೂ ಎಟುಕದವಳಾಗಿದ್ದಾಳೆ. "ಸ್ತವರಾಜಂ ಕ್ರೀಡಾರ್ಥೆ ಲೋಕ ರಚನ" ಎಂದರೆ ಶ್ರೀ ಲಲಿತಾಂಬಿಕೆಯು ಈ ಲೋಕವನ್ನು ತನ್ನ ಆಟಿಕೆಯಾಗಿ ಸೃಷ್ಟಿಮಾಡಿದ್ದಾಳೆಂದು ಶ್ರೀ ಲಲಿತಾ ಸಹಸ್ರನಾಮದ ೬೪೮ನೇ ನಾಮಾವಳಿಯಾದ "ಲೀಲಾಕ್ಲಪ್ತ ಬ್ರಹ್ಮಾಂಡ ಮಂಡಲಾಯೈ ನಮಃ" ಎಂದು ಸ್ತುತಿಸಲಾಗಿದೆ.

೫೫ ಶ್ಲೋಕಗಳುಳ್ಳ "ಶ್ರೀ ಲಲಿತಾ ಸ್ತವ ರಾಜಂ" ಎಂಬ ಸ್ತುತಿಯನ್ನು ಎಷ್ಟು ಬಾರಿ ಪಠಿಸಿದರೂ ವಿರಕ್ತಿಯಾಗುವುದಿಲ್ಲ ಅಥವಾ ಅದರ ಬಗ್ಗೆ

ಬೇಸರವಾಗುವುದಿಲ್ಲ. ಹೇಗೆ ಸಮುದ್ರವನ್ನು ಒಂದು ಸಣ್ಣ

ಪಾತ್ರೆಯಲ್ಲಿ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲವೋ ಹಾಗೆ ದೇವಿಯ ಹಿರಿಮೆಗಳನ್ನು ಯಾರೂ ಒಂದೇ ಸ್ತುತಿಯಲ್ಲಿ

ವರ್ಣಿಸಲಾಗುವುದಿಲ್ಲ. ಶ್ರೀ ಕೃಷ್ಣ ಭಗವಾನನು ಭಗವದ್ಗೀತೆಯ ೧೦ನೇ ಅಧ್ಯಾಯದ ೧೯ನೇ ಶ್ಲೋಕದಲ್ಲಿ ಹೇಳಿರುವಂತೆ "ಹಂತ ತೆ ಕಥಯುಷ್ಯಾಮಿ ದಿವ್ಯ ಆತ್ಮ ವಿಭೂತಯಃ | ಪ್ರದಾಂತ್ಯತಃ ಕುರುಶ್ರೇಷ್ಠ ನಾಸ್ತಿಯಂತೋ ವಿಸ್ತರಸ್ಯಮೇ ||" ಅಂದರೆ ನನ್ನ ಮಹಿಮೆಗಳ ಅತ್ಯುತ್ತಮ ಮಹಿಮೆಗಳನ್ನು ಮಾತ್ರ ಹೇಳುತ್ತೇನೆ ಏಕೆಂದರೆ ನನ್ನ ಮಹಿಮೆಗಳಿಗೆ ಕೊನೆಯಿಲ್ಲ. ಅದೇ ರೀತಿ ಪ್ರಪಂಚದಲ್ಲಿರುವ ಎಲ್ಲಾ ಮಹಿಮೆಗಳೂ ಈಶ್ವರ ಸಂಭೂತವೆ, ಅವುಗಳನ್ನು ಸ್ವತಃ ಈಶ್ವರನೇ ಹೇಳಲು ಸಾಧ್ಯವಿಲ್ಲ. ಕೆಲವೇ ಮುಖ್ಯವಾದವುಗಳನ್ನು ಮಾತ್ರ ಹೇಳಬಹುದು, ಮಿಕ್ಕವುಗಳನ್ನು ತಾನಾಗಿ ಅನುಭವಿಸಿಯೋ ಅಥವಾ ಊಹಿಸಿಯೋ ಅರ್ಥೈಸಿಕೊಳ್ಳಬೇಕಾಗುತ್ತದೆ. ಈ ರೀತಿಯಾದ ಈಶ್ವರನನ್ನು ಕೇವಲ ಗ್ರಂಥಗಳನ್ನೋದಿ ವರ್ಣಿಸುವುದು ಕಾಶಿಯ ವಿಶೇಶತೆಗಳನ್ನು ಸ್ವತಃ ನೋಡಿ ಇನ್ನೊಬ್ಬರಿಗೆ ಅದನ್ನು ವರ್ಣನೆ ಮಾಡುವಂತಾಗುತ್ತದೆ.

ಧರ್ಮವು ಮತ್ತು ಸತ್ಯವು ದೇಹ ಮತ್ತು ಮನಸ್ಸಿದಂತೆ, ಹೇಗೆ ದೇಹವನ್ನು ಮನಸ್ಸಿನಿಂದ ಪ್ರತ್ಯೇಕಿಸಲಾಗುವುದಿಲ್ಲವೋ ಹಾಗೆ ಧರ್ಮದಿಂದ ಸತ್ಯವನ್ನು ಬಿಡಿಸಲಾಗದು. ಧರ್ಮಜೀವನದಲ್ಲಿ ಸಾಗಬೇಕಾದರೆ ಸತ್ಯವನ್ನು ಹೇಳುವವನಾಗಿರಬೇಕು. ಸತ್ಯವಂತನಾಗಬೇಕಾದರೆ ಧಾರ್ಮಿಕ ಜೀವನವನ್ನು ಪಾಲಿಸಬೇಕು. ಕಷ್ಟವಿಲ್ಲದ ಸಂತೋಷ ಜೀವನಕ್ಕೆ ಇದೇ ದಾರಿ.



# ಅಧ್ಯಾಯ ೭ --- ನಿಶ್ಚಿಂತಾ.

ಶ್ರೀ ಲಲಿತಾಸಹಸ್ರನಾಮದ ೧೭೦ನೇ ನಾಮವಾಗಿ "ನಿಶ್ಚಿಂತಾ" ಎಂದರೆ ಚಿಂತೆಯಿಲ್ಲದವಳು ಎಂದರ್ಥ. ಚಿಂತೆಯೆಂದರೆ ಕೇವಲ ವ್ಯಾಕುಲ ಮಾತ್ರವಲ್ಲ, ವೇದನೆಗಳನ್ನು ತರುವ ಯೋಚನೆಗಳೂ ಆಗಿವೆ. ಉದಾಹರಣೆಯಾಗಿ ತನ್ನ ಬಳಿ ಇಲ್ಲದವನ್ನು ಯೋಚಿಸುವುದು ವ್ಯಾಕುಲವಾದರೆ ತನ್ನ ಬಳಿ ಇರುವುದು ಕಳೆದುಕ್ಕೊಳ್ಳಬಹುದೇನೋ

ಎಂಬ ಭಯದ ವೇದನೆಯೂ ಚಿಂತೆಯೆ. ಪರಾಶಕ್ತಿಯು ಈ ಎರೆಡಕ್ಕೂ ಅಧೀನವಾಗದವಳಾಗಿದ್ದಾಳೆ ಮತ್ತು ತನ್ನ ಭಕ್ತರನ್ನೂ ಇವುಗಳಿಂದ ಹೊರ ತರುವಂತವಳು ಆಗಿದ್ದಾಳೆ. ಆದ್ದರಿಂದಲೇ ಅವಳಿಗೆ "ನಿಶ್ಚಿಂತಾ" ಎಂದಿದ್ದಾರೆ.

ಸಂಸ್ಕೃತದ ಸುಭಾಷಿತದಂತೆ "ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವನಂ" ಎಂದರೆ ಚಿತೆಯು ನಿರ್ಜೀವವಾಗಿರುವ ದೇಹವನ್ನು ಸುಡುತ್ತದೆ, ಆದರೆ ಚಿಂತೆಯೆಂಬುದು ಜೀವಂತವಾಗಿರುವಾಗಲೆ ಸುಡುತ್ತದೆ ಎಂದರ್ಥ. ಹಾಗಿರುವ ನಮ್ಮಂತಹ ಅಲ್ಪಮಾನವರು ಈ ರೀತಿಯಾದ ಚಿಂತೆಗಳಿಂದ ದೇಹಕ್ಕೂ ಶ್ರಮವನ್ನುಂಟು ಮಾಡಿಕೊಂಡು, ಕೊನೆಗೆ ಆತ್ಮಹತ್ಯೆಯವರೆಗೂ ಹೋಗುತ್ತೇವೆ. ಈ ಕೆಳಗಿನ ಸಂಸ್ಕೃತದ ಕಾವ್ಯವು ಉತ್ತಮವಾಗಿ ವಿಮರ್ಶಿಸಿದೆ:
ವಿಧ್ಯಾ ಸಮಂ ನಾಸ್ತಿ ಶರೀರ ಭೂಷಣಂ | ನಾಸ್ತಿ ಮಾತಾ ಸಮಂ ಪೋಷಣಂ |
ಭಾರ್ಯಾ ಸಮಂ ನಾಸ್ತಿ ಶರೀರ ತೋಷಣಂ | ನಾಸ್ತಿ ಚಿಂತಾ ಸಮಂ ಶೋಷಣಂ ||
ವಿದ್ಯೆಗೆ ಸಮನಾದ ದೇಹ ಭೂಷಣವು, ತಾಯಿಯ ಸಮನಾದ ದೇಹವನ್ನು ಪೋಷಿಸುವವರಿಲ್ಲ |
ಹೆಂಡತಿಗೆ ಸಮನಾದ ದೇಹಕ್ಕೆ ಸಖ್ಯರಾದವರೂ ಮತ್ತು ಚಿಂತೆಗೆ ಸಮನಾದ ದೇಹದ ಶೋಷಣೆಯಿಲ್ಲ ||

ಕಾಂಚೀಪುರದ ಆಚಾರ್ಯರಾದ ಶ್ರೀ ಚಂದ್ರಶೇಖರ ಸರಸ್ವತಿಗಳವರು ತಮ್ಮ ಹಿತವಚನಗಳಲ್ಲಿ, ಜ್ಞಾನದಿಂದ ನಡೆದರೆ ಮನಃ ಕ್ಲೇಷಗಳು ನಾಶವಾಗಿ ಭಕ್ತಿ ಲಭಿಸುತ್ತದೆ ಹಾಗು ಭಕ್ತಿಯಿಂದ ಮಾತ್ರ ಶರಣಾಗತಿ ಸಾಧ್ಯವೆಂದು ತಿಳಿಸಿರುತ್ತಾರೆ. ಅರ್ಥಾತ್ ಮನಸ್ಸು ಚಿಂತಾರಹಿತ ಜೀವನವಾಗಬೇಕಾದರೆ ಜ್ಞಾನ ಸಂಪಾದನೆಯೂ ಅಗತ್ಯವಂಬುದನ್ನು ಮನವರಿಕೆ ಮಾಡುತ್ತಾರೆ.

ಮಿಗಿಲಾದ ಋಷಿಮುನಿಗಳಿಗೂ ಸುಲಭವಾಗಿ ಸಿಗದು ಮನಃ ಕ್ಲೇಷನಾಶ ಅಥವಾ ಚಿಂತೆಯಿಂದ ಮನಸ್ಸನ್ನು ನಿಗ್ರಹಿಸುವುದು. ತನ್ನ ಮನಸ್ಸನ್ನು ಗೆದ್ದರೆ ಈ ಜಗತ್ತನ್ನೇ ಗೆಲ್ಲಲು ಸಾಧ್ಯವಾಗುತ್ತದೆ. ತಾನು ಎಂದಾಗ, ಮನಸ್ಸು ತನ್ನ ದೇಹದ ಅಧೀನದಲ್ಲಿದೆಯೆಂಬುದು ಸಾಮಾನ್ಯವಾದ ಅರ್ಥ, ಆದರೆ ಮನಸ್ಸೆಂಬುದು ದೇಹವಲ್ಲದೆ ಅದು ಬ್ರಹ್ಮನ್ ಆಗಿದೆ. ಮನಸ್ಸು ನಿರಾಕಾರವಾಗಿದೆ ಮತ್ತು

ಬದಲಾವಣೆಗಳಿಲ್ಲದ್ದಾಗಿದೆ. ಉದಾಹರಣೆಗೆ ಈ ದೇಹ, ಬುದ್ಧಿ ಅಥವಾ ಆಸೆಗಳು ನಿರಂತರವಲ್ಲವೆಂಬುದನ್ನರಿತ ಜ್ಞಾನಿಗಳಿಗೆ ಚಿಂತೆಯಿಲ್ಲ ಮತ್ತು ಚಿಂತೆಗಳು ಅವರನ್ನು ಕಾಡುವುದಿಲ್ಲ. ಆದ್ದರಿಂದ ಅವರ ಭಕ್ತಿಗೆ ಅತಿಮಿಗಿಲಾಗಿರುವ ದೈವ ಸಾನಿಧ್ಯವನ್ನೂ ಗಳಿಸುವ ಶಕ್ತಿ ಲಭಿಸುತ್ತದೆ. ಸಾಮಾನ್ಯ ಮಾನವರಿಗೆ ಚಿಂತೆಯಿಲ್ಲದೆ ಮೌನಿಯಾಗಿರುವುದಕ್ಕೆ ಅಥವಾ ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ. ಅದು ಕೇವಲ ಜ್ಞಾನಿಗಳಿಗೆ ಮಾತ್ರ ಸಾಧ್ಯ. ಸಾಮಾನ್ಯವಾಗಿ ಮನುಷ್ಯರಲ್ಲಿ ಎರಡು ವಿಧ. ಒಬ್ಬರು ಸಕ್ರಿಯರಾಗಿದ್ದರೆ, ಮತ್ತೊಬ್ಬರು ನಿಷ್ಕ್ರಿಯರಾಗಿರುತ್ತಾರೆ. ದೈವ ಭಕ್ತರು ಯಾವಾಗಲೂ ಸಕ್ರಿಯರಾಗಿರುವುದರಿಂದ ಅವರ ಮನಸ್ಸು ದೈವ ಚಿಂತನೆಯಲ್ಲಿದ್ದು ಬೇರೆಡೆ ಗಮನವಿರುವುದಿಲ್ಲ. ನಿಷ್ಕ್ರಿಯರು ಸೋಮಾರಿತನವಾದ ಮನಸ್ಸನ್ನು ಹೊಂದಿ, ಚಿಂತೆಯ ಕಡೆಗಮನವನ್ನು ಕೊಡುತ್ತಾ ತನಗೆ ತಾನೇ ತೊಂದರೆಗಳನ್ನು ಅಹ್ವಾನಿಸಿಕ್ಕೊಳ್ಳುತ್ತಾರೆ. ಒಳ್ಳೆಯ ಆಲೋಚನೆಗಳಲ್ಲಿ ತೊಡಗಿದರೆ ಅದರ ಸುಖಫಲಗಳ ಬಗ್ಗೆ ಶ್ರೀ ಆದಿಶಂಕರರು ಸೌಂದರ್ಯ ಲಹರಿಯ ಲನೇ ಶ್ಲೋಕದಲ್ಲಿ ಅಂಬಿಕೆಯು ಚಿಂತಾಮಣಿಗೃಹದಲ್ಲಿ ಆಸೀನಳಾಗಿರುವುದನ್ನು ಬಣ್ಣಿಸಿದ್ದಾರೆ. ಧಾರ್ಮಿಕ ಗ್ರಂಥಗಳಲ್ಲಿ ಹೇಳಿರುವಂತೆ ಎಲ್ಲವನ್ನು ಕೊಡುವ ಶಕ್ತಿಯಿರುವುದು ಮೂರರಲ್ಲಿ ಮಾತ್ರ ಸಾಧ್ಯ, ಅವುಗಳೆಂದರೆ ಕಾಮಧೇನು, ಕಲ್ಪವೃಕ್ಷ ಮತ್ತು ಚಿಂತಾಮಣಿಯೆಂಬ ಅತ್ಯಮುಲ್ಯ ರತ್ನವಾಗಿದೆ.

ಕಾಂಚೀಪುರದ ಆಚಾರ್ಯರಾದ ಶ್ರೀ ಚಂದ್ರಶೇಖರ ಸರಸ್ವತಿಗಳ ಉಪದೇಶಗಳಲ್ಲಿ ಅತಿ ಉತ್ತಮವೆಂದರೆ, "ಯಾರ ಮನಸ್ಸು ಉತ್ತಮವಾದ ಚಿಂತನೆಗಳಿಂದ ಕೂಡಿರುತ್ತದೆಯೋ ಅಲ್ಲಿ ಮಣಿ ಮಣಿಯಾಗಿರುವ ಚಿಂತನೆಗಳಿಂದ ಉತ್ಪತ್ತಿಯಾಗುವ ಪೀಠವೇ ಚಿಂತಾಮಣಿ ಪೀಠವಾಗಿದೆ ಅದರಲ್ಲಿ ಸಾಕ್ಷಾತ್ ಶ್ರೀ ಲಲಿತೆಯೇ ನಿಶ್ಚಿಂತಳಾಗಿ ಆಸಿನಳಾಗಿದ್ದು, ನಮ್ಮೆಲ್ಲಾ ವ್ಯಾಕುಲಗಳನ್ನು ನಿವೃತ್ತಿಯಾಗಿಸಿ, ನಮಗೆಲ್ಲಾ ನಿತ್ಯಾನಿತ್ಯ ವಿವೇಕಗಳ ಬಗ್ಗೆ ಅರಿವು ಮೂಡಿಸುತ್ತಾಳೆ". ನಿತ್ಯಾ ಅಂದರೆ ನಮ್ಮ ಆತ್ಮಕ್ಕೆ ಶಾಶ್ವತವಾದದ್ದು ಮತ್ತು ಅನಿತ್ಯಾ ಎಂದರೆ ನಮ್ಮ ಆತ್ಮಕ್ಕೆ ಚಂಚಲ ಮತ್ತು ತಾತ್ಕಾಲಿಕ ಅವಶ್ಯಗಳೆಂದು ಅರ್ಥ. ಆದ್ದರಿಂದ ನಾವುಗಳು ನಿತ್ಯ ಚಿಂತನೆಯ ಬಗ್ಗೆ ಯೋಚಿಸಬೇಕು ಹಾಗು ಅನಿತ್ಯ ಚಿಂತೆನೆಗಳನ್ನು ಬಿಡಬೇಕು.

ಆದ್ದರಿಂದಲೇ ಜ್ಞಾನಾಸಕ್ತರಾಗಿರಬೇಕು, ಜ್ಞಾನದಿಂದ ನಮ್ಮ ಮನಸ್ಸುಗಳನ್ನು ಚಿಂತೆಯಿಂದ ವಿಮುಕ್ತಗೊಳಿಸಬಹುದು.
ಮನಸ್ಸನ್ನು ಶ್ರೀ ಆದಿಶಂಕರರು ತಮ್ಮ ಕೃತಿಯಾದ ಶ್ರೀ ಶಿವಾನಂದ ಲಹರಿಯಲ್ಲಿ ಮಂಗಕ್ಕೆ, ಮದಗಜಕ್ಕೆ ಮತ್ತು ಕಾಡಿಗೆ ಹೋಲಿಸುತ್ತಾರೆ. ಹೇಗೆ ಮನುಷ್ಯನು ಮಂಗದ ಹಾಗೆ ಚಂಚಲವಾದ ಲೌಕಿಕ ಇಚ್ಛೆಗಳ ಬಗ್ಗೆಯೇ ಯೋಚಿಸುತ್ತಿರುತ್ತಾನೋ, ಅದೇ ರೀತಿ ಮನಸ್ಸು ಮದಗಜದಂತೆ ಯಾವುದೆ ಹಿಡಿತಕ್ಕೂ ಬಾರದೆ, ಎಲ್ಲಾ ದಿಕ್ಕುಗಳಿಗೂ ಗೊತ್ತು ಗುರಿಯಿಲ್ಲದಂತೆ ಯೋಚಿಸುತ್ತಿರುತ್ತದೆ. ಹಾಗಿರುವಾಗ ಕಾಡಿನಲ್ಲಿ ಸುಗಮ ಸಂಚಾರಕ್ಕೆ ಸಸಿಗಳೂ, ಮರಗಳೂ ಮತ್ತು ಕ್ರೂರಮೃಗಗಳೂ ಅಡ್ಡಿಪಡಿಸುವ ರೀತಿಯಲ್ಲಿ ಮನ್ನಸ್ಸಿನಲ್ಲಿ ಕೆಟ್ಟ ಆಲೋಚನೆಗಳು ಉದ್ಭವಗೊಳ್ಳುತ್ತವೆ. ಆದ್ದರಿಂದ ಈ ಕೃತಿಯಲ್ಲಿ ಶ್ರೀ ಆದಿಶಂಕರರು ಈಶ್ವರನ ಬಳಿ ತನ್ನ ಮಂಗನಂತಾ ಮನಸ್ಸನ್ನು ಭಕ್ತಿಯೆಂಬ ಹಗ್ಗದಿಂದ ಕಟ್ಟಿ ಹಾಕುವಂತೆ ಪ್ರಾರ್ಥಿಸುತ್ತಾರೆ. ಏಕೆಂದರೆ ಮನಸ್ಸು ಕಳ್ಳರಂತೆ, ಹೇಗೆ ಕಳ್ಳರಿಂದ ರಕ್ಷಿಸಲು ಆರಕ್ಷಕರ ಅವಶ್ಯಕತೆಯೋ ಹಾಗೆ ಇವೆಲ್ಲಕ್ಕೂ ಈಶ್ವರನಿಗಿಂತಾ ಬೇರೆ ಯಾವ ಆರಕ್ಷಕನಿದ್ದಾನೆ?

ಇದೆ ರೀತಿ ತಮಿಳಿನ ಕವಿಗಳಾದ ಶ್ರೀ ತಿರುಜ್ಞಾನ ಸಂಬಂದಮ್ ರವರು ತಮ್ಮ ಮೊದಲಿನ "ತೆವಾರಂ"ಗಳೆಂಬ ಕವನದಲ್ಲಿ ಶಿವನು ಮನಸ್ಸೆಂಬ ಗಜವನ್ನು ಭಕ್ತಿಯೆಂಬ ಹಗ್ಗದಿಂದ ಕಟ್ಟಿ, ಧೈರ್ಯವೆಂಬ ಶೂಲದಲ್ಲಿ ತಿವಿದು, ತನ್ನ ಪಾದಗಳಲ್ಲಿ ಹಿಡಿದಿಟ್ಟುಕೊಳ್ಳುತ್ತಾನೆನ್ನುತ್ತಾರೆ. ಏಕೆಂದರೆ ಶಿವನು ಪುರಾತನವಾದ ಬೇಡನಲ್ಲವೆ? ನಮ್ಮ ಮನಸ್ಸೆಂಬ ಕಾಡಿನಲ್ಲಿರುವ ವ್ಯಾಕುಲ, ಚಿಂತೆ, ಕ್ರೋಧ ಮತ್ತು ಅಧರ್ಮವಾದ ಚಿಂತೆಗಳೆಂಬ ಕ್ರೂರಮೃಗವನ್ನು ಬೇಟೆಯಾಡಲು ಸಾಧ್ಯ ಶಿವನೆಂಬ ನಾಮದಿಂದಲ್ಲವೆ?

ಅತೀ ಕಠಿಣ ಶ್ರಮದಿಂದ ಲಭ್ಯವಾದವುಗಳ ಅಥವಾ ಸಿದ್ಧಿಸುವುದುಗಳ ಬಗ್ಗೆ, ತಮಿಳ್ ಕವಿಗಳಾದ ಶ್ರೀ ತಾಯುಮ್ ಮಾನವರ್ ರವರು ಪಟ್ಟಿಯಾಗಿಸಿದ್ದಾರೆ ಅವುಗಳೇನೆಂದರೆ ಕ್ರೂರ ಕಾಡು ಮೃಗಗಳನ್ನು ಸಂಕೋಲೆಗಳಿಂದ ಕಟ್ಟಿಹಾಕಲ್ಪಡುವುದು, ನೀರಿನ ಮೇಲೆ ನಡೆಯುವುದು, ಪರಕಾಯ ಪ್ರವೇಶ, ಭೂತ ಪಿಶಾಚಿಗಳನ್ನು ವಶೀಕರಿಸಿಕೊಂಡು ಮನುಷ್ಯರು ತಮಗೆ ಬೇಕಾದ ಹಾಗೆ

ಪ್ರಯೋಗಿಸುವುದು. ಆದರೆ ಇವೆಲ್ಲವೂ ಮನುಷ್ಯನಿಗೆ ಸಾಧ್ಯವಾದರೂ ತನ್ನ ಮನಸ್ಸಿನ ಮೇಲೆ ಹತೋಟಿಯನ್ನು ಹೊಂದುವುದು ಅಸಾಧ್ಯವೆಂದು ತನ್ನ ತೆಜೋಮಯಾನಂದ ಎಂಬ ಕೃತಿಯಲ್ಲಿ ಹೇಳಿದ್ದಾರೆ.

ಸಾಕ್ಷಾತ್ ಶ್ರೀ ಕೃಷ್ಣನು ತನ್ನ ಭಗವದ್ಗೀತೆಯ ೧೮ನೇ ಅಧ್ಯಾಯದ ೧೪ನೇ ಶ್ಲೋಕದಲ್ಲಿ ದೈವಬಲವಿಲ್ಲದೆ ಎನೂ ಸಾಧ್ಯವಿಲ್ಲವೆಂಬುದನ್ನು ಉಪದೇಶಿಸಿದ್ದಾನೆ. "ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ | ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವತ್ರ ಪಂಚಮಮ್||" ಒಂದು ಮೋಟಾರು ವಾಹನವು ಓಡಲು ಕಾರಣ ಅರಿಯುವುದಾದರೆ, ಭೂಮಿಯ ಮೇಲಿನ ಮರದ ಹಾಲಿನಿಂದ ಉಂಟಾಗುವ ರಬ್ಬರ್ ಮತ್ತು ಎಣ್ಣೆ, ಭೂಮಿಯ ಕೆಳಗಿಂದ ಸಿಗುವ ನೀರು, ಪೆಟ್ರೋಲ್ ಮತ್ತು ಲೋಹದ ವಸ್ತುಗಳು ಹಾಗೂ ಆಕಾಶದಲ್ಲಿ ಸಿಗುವ ಗಾಳಿಗಳೆಲ್ಲವುಗಳನ್ನು ಉಪಯೋಗಿಸಿಕೊಂಡು ಉಂಟಾದ ನಾನಾ ಘಟಕಗಳು(Components), ಸರಿಯಾದ ಕ್ರಮದಲ್ಲಿ ಕೈಗಾರಿಕಾ ಯಂತ್ರಶಾಲೆಯಲ್ಲಿ (Factory) ತಯಾರಿಸಿ ಮತ್ತು ಬೇಕಾದ ಉಪಕರಣಗಳಿಂದ (Tools) ಜೋಡಿಸುವ ಕಾರ್ಯ ಕಾರ್ಮಿಕರಿಂದ (Worker) ಸಾಧ್ಯವಾದರೂ ದೈವವೆಂಬ ಚಾಲಕನ ( Driver) ಅವಶ್ಯವಿದೆ. ಈ ಶ್ಲೋಕದಲ್ಲಿ ಅಧಿಷ್ಠಾನವೆಂದರೆ ಕಾರ್ಖಾನೆ, ಕರ್ತಾ ಎಂದರೆ ಕಾರ್ಮಿಕ, ಕರಣಂ ಎಂದರೆ ಉಪಕರಣಗಳು, ಪೃಥಗ್ವಿದಮ್

ಎಂದರೆ ನಾನಾವಿಧವಾದ ಘಟಕಗಳು ಅಥವಾ ಅಂಶಗಳು ಮತ್ತು ಐದನೇಯದಾಗಿ ದೈವಂ ಎಂದರೆ ಚಾಲಕರೂ ಆಗಿದ್ದಾರೆ. ಇದೇ ರೀತಿ ನಮ್ಮ ದೇಹವು ಪ್ರೀತಿ - ದ್ವೇಷಗಳು, ಸುಖಃ - ದುಖಃಗಳು ಮತ್ತು ಜ್ಞಾನಕ್ಕೆ ಕಾರ್ಖಾನೆಯಾಗಿ, ಇವುಗಳ ಕಾರಣವಾಗಿ ತೊಡಗುವ ಅಹಂಕಾರವು ಕಾರ್ಮಿಕರಾಗಿ, ಪಂಚ ಜ್ಞನೇಂದ್ರಿಯಗಳೂ ಉಪಕರಣಗಳಾಗಿ ಪಂಚ ಕರ್ಮೇಂದ್ರಿಯಗಳು ಘಟಕವಾಗಿಯೂ, ಪ್ರಾಣವೆಂಬುದು ದೈವವಾಗಿದೆ. ದೈವವೆಂಬ ಪ್ರಾಣವಿಲ್ಲದೆ ಯಾವುದೂ ಸಾಧ್ಯವಿಲ್ಲ. ಅಂತರಾತ್ಮನಾದ ದೈವವು ಆಯಾ ಪಂಚೇಂದ್ರಿಯಗಳಿಂದ ಹಲವು ವಿಧವಾಗಿ ಕೂಡಿದ ಕಾರ್ಯಗಳನ್ನು ತೊಡಗಿಸಿದಾಗ ಮಾತ್ರವೇ ಅಹಂಕಾರ ಶಮನವಾಗುವುದು. ಆದ್ದರಿಂದ ದೈವವೆಂಬ ಐದನೇಯ ಅಂಶವು ಅತ್ಯವಶ್ಯವಾಗಿದೆ.

ತಮಿಳಿನ ಕವಿಗಳಾದ ಶ್ರೀ ತಿರುವಳ್ಳುವರ್ ತನ್ನ ತಿರುಳಿನಲ್ಲಿ "ತನಕ್ಕು ಉವಮೈಯ್ ಇಲ್ಲಾದಾನ್ ತಾಳ್ ಸೆಂದಾರ್ಕು ಅಲ್ಲಾಳ್ ಮನ ಕವಲೈ ಮಾಟ್ರುಲ್ ಅರಿದು ಎಂದರೆ "ಯಾರಿಗೂ ಹೋಲಿಸಲಾಗದಂತಹ ದೇವರ ಪಾದಗಳಿಗೆ ಶರಣಾದರೆ ಮಾತ್ರ ನಮಗೆ ಚಿಂತೆಯಿರುವುದಿಲ್ಲ" ವೆಂದು ತಿಳಿಸಿಕೊಟ್ಟಿದ್ದಾರೆ.

"ಶಿಕ್ಷಣಕ್ಕೆ ಬೇಕಾದ ಮೂಲ ಕಲಿಕೆಯು ಕಹಿಯಾಗಿರುತ್ತದೆ ಆದರೆ
ಶಿಕ್ಷಣದ ನಂತರ ಸಿಗುವ ಲಾಭಗಳು ಸಿಹಿಯಾಗಿರುತ್ತದೆ."
"ಕಾಯಕವಿಲ್ಲದೆ ಜೀವಿಸುವ ಮನುಷ್ಯನು ಮನುಷ್ಯನಾಗಿರಲು
ಅನರ್ಹನು."

# ಅಧ್ಯಾಯ ೮ --- ವಿಜ್ಞಾನವೂ ಮತ್ತು ಆಧ್ಯಾತ್ಮಿಕವು.




ನಾವಿರುವ ಈ ಪ್ರಪಂಚದಲ್ಲಿ ಎಷ್ಟೋ ಪ್ರಾಣಿಸಂಕುಲಗಳಿವೆ ಆದರೆ ಮನುಷ್ಯನಿಗೆ ಮಾತ್ರ ಅಧಿಕವಾಗಿ ಆರನೆ ಇಂದ್ರಿಯವಾದ ಸತ್ಯಾಸತ್ಯತೆಗಳನ್ನು ಅರಿಯುವ ಶಕ್ತಿಯಿದ್ದು ಈ ಪ್ರಾಣಿ ಸಂಕುಲಗಳಲ್ಲಿ ಉತ್ತಮವೆನಿಸಿಕೊಂಡಿದ್ದಾನೆ. ಆದುದರಿಂದಲೇ ಮನುಷ್ಯನು ಈ ಪ್ರಪಂಚದ ಬಗ್ಗೆ, ತನ್ನ ಮತ್ತು ತನ್ನ ಪರಿಸರದ ಬಗ್ಗೆ ಬಹಳ ಸಂಶೋಧನೆಗಳನ್ನು ಮಾಡುತ್ತಿದ್ದಾನೆ. ಈ ಸಂಶೋಧನೆಗಳಲ್ಲಿ ತನ್ನ ಜನನ ಮತ್ತು ಸಾವಿನ ನಂತರದ ಬಗ್ಗೆಯಲ್ಲದೆ ಈ ಪ್ರಪಂಚದ ಉದ್ಭವಗಳ ಬಗ್ಗೆಯೂ ಧಾರ್ಮಿಕ ಚಿಂತನೆಗಳೊಂದಿಗೆ ವೈಜ್ಞಾನಿಕವಾಗಿ ಸಂಶೋಧನೆಗಳಿಗೂ ತೊಡಗಿಕೊಂಡಿದ್ದಾನೆ. ಈ

ಕಾರಣಕ್ಕಾಗಿಯೇ ತನ್ನ ಮತ್ತು ತನ್ನ ಸುತ್ತಮುತ್ತಲಿರುವುದರ ಭೌತಿಕದ ಬಗ್ಗೆ ತಿಳಿಯುವುದಕ್ಕೆ ವಿಜ್ಞಾನವೆಂದೂ, ಅದನ್ನು ಸಂಶೋದಿಸುತ್ತಿರುವವರನ್ನು ವಿಜ್ಞಾನಿಗಳೆಂದು ನಾವು ಕರೆಯುತ್ತೇವೆ. ಇದನ್ನೇ ನಮ್ಮ ಗುರು ಹಿರಿಯರು ತಮ್ಮ ಗ್ರಂಥಗಳಲ್ಲಿ ಅಪರ ಜ್ಞಾನವೆಂದು ತಿಳಿಸಿಕೊಟ್ಟಿದ್ದಾರೆ. ಅಪರ ವೆಂದರೆ ಈ ದೇಹದ ಸುತ್ತಮುತ್ತಲಿರುವುದನ್ನು ಅಂದರೆ ಭೌತಿಕವಾದದ್ದನ್ನು ಅರಿವುದಾಗಿದೆ ಮತ್ತು ಪರ ವೆಂದರೆ ಭೌತಿಕವಲ್ಲದ ಪರಮಾತ್ಮನ ಬಗ್ಗೆ ಚಿಂತಿಸುವುದು ಮತ್ತು ಅದನ್ನು ಸೇರುವುದಾಗಿದೆ. ಇದೇ ಪರಮ ಉತ್ಕೃಷ್ಟ ಮತ್ತು ಸ್ಥಿರವಾದ ಜ್ಞಾನವಾಗಿದೆ. ಈ ಪ್ರಪಂಚದ ಅನೇಕಾನೇಕ ವಸ್ತುಗಳಿಂದ, ಭೌತಿಕವಾದ ಪ್ರಪಂಚವೇ ಪರಮಾತ್ಮನೆಂಬ ಅನಿಸಿಕೆಗಳು ಮೂಡುವಂತಾಗುತ್ತದೆ, ಆದುದರಿಂದ ವಿಜ್ಞಾನವಾಗಿ ನಾವುಗಳು ಈ ಪ್ರಪಂಚದಲ್ಲಿರುವ ವಸ್ತುಗಳನ್ನು ಅನೇಕ ಕೋನಗಳಿಂದ ವಿಮರ್ಶಿಸಿದರೂ ಪರಮಾತ್ಮನನ್ನು ಅರ್ಥೈಸಿಕ್ಕೊಳ್ಳಲು ಸಾಧ್ಯವಾಗುವುದಿಲ್ಲ. ಈ ವಿಜ್ಞಾನಗಳನ್ನಲ್ಲದೆ ಪರಜ್ಞಾನವನ್ನೂ ಕೂಡಿಸಿ ಮೊತ್ತವಾಗಿ ಪರಂಜ್ಞಾನವೆಂಬ ಪರಮಾತ್ಮನನ್ನು ಅರ್ಥೈಸಿಕ್ಕೊಳ್ಳುವುದೇ ಆಧ್ಯಾತ್ಮಿಕವಾಗಿದೆ. ಆದುದರಿಂದ ಈ ಆಧ್ಯಾತ್ಮದಲ್ಲಿ ವಿಜ್ಞಾನವೆಂಬುದು ಒಂದು ಅಂಶ ಎಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. Philosophy is synthetic science and science is analytical philosophy. ತತ್ವಜ್ಞಾನವೆಂಬುದು ಕೃತಕವಿಜ್ಞಾನವಾಗಿದೆ ಮತ್ತು ವಿಜ್ಞಾನವೆಂಬುದು ವಿಶ್ಲೇಷಣಾ ತ್ಮತ್ವಜ್ಞಾನವಾಗಿದೆಂಬುದು ಸತ್ಯವಾದರೂ ಆಧ್ಯಾತ್ಮಿಕವು ಅನುಭವ ಜ್ಞಾನವಾಗಿದೆ. ಆದ್ದರಿಂದಲೇ ಆಧ್ಯಾತ್ಮಕವನ್ನು ತತ್ವಜ್ಞಾನ ಮತ್ತು ವಿಜ್ಞಾನಗಳನ್ನು ಒಳಗೊಂಡ ದೇಹ ಮತ್ತು ಮನಸ್ಸಿನ ಮೂಲಕವಷ್ಟೇ ಸಾಧಿಸಲು ಸಾಧ್ಯವಾಗುತ್ತದೆ. ತತ್ವಜ್ಞಾನ ಹಾಗೂ ವಿಜ್ಞಾನವು ನಮ್ಮನ್ನು ಆಧ್ಯಾತ್ಮದ ಬಗ್ಗೆ ಚಿಂತನೆಯನ್ನುಂಟುಮಾಡಿ ನಮ್ಮನ್ನು ಪರಮಾತ್ಮನ ಬಳಿಗೆ ಕರೆದೊಯ್ಯುವುದಾಗಿದೆ.

Newton, Einstein ರವರ ಸಂಶೋಧನೆಗಳು ಕೂಡ ಇದರ ಬಗ್ಗೆಯೇ ತಿಳಿಸುತ್ತದೆ ಹಾಗೂ ಇತ್ತೀಚಿನ Atomic Energy ಯೆಂಬ ಪರಮಾಣು ಶಕ್ತಿಯ ಸಂಶೋಧನೆಗಳೂ ಇದನ್ನು ಊರ್ಜಿತಗೊಳಿಸುತ್ತದೆ. ಈ ಪ್ರಪಂಚದ ಭೌತಿಕ ವಸ್ತುಗಳು ಒಂದು ಪ್ರಾಕೃತಿಕ ಮೂಲವಸ್ತುವಿನಿಂದಲೇ ಉತ್ಪತ್ತಿಯಾಗಿರುವುದು ಎಲ್ಲರೂ

ಅರಿತಿರುವ ಸತ್ಯವಾಗಿದೆ. ಅದೆಂದರೆ ವಸ್ತುಗಳನ್ನು ಛಿದ್ರ ಛಿದ್ರಗೊಳಿಸಿದಾಗ ಸಿಗುವುದೇ ಅಣುವೆಂದು ಕರೆಯುತ್ತಾರೆ. ಈ ಅಣುಗಳು ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್ ಗಳೆಂಬ ಪರಮಾಣುಗಳಿಂದ ಕೂಡಿವೆ. ಇವುಗಳನ್ನು ಒಡೆದು ಪ್ರತ್ಯೇಕಿಸಿದಾಗ ಉಂಟಾಗುವುದನ್ನು ಎನರ್ಜಿ ಅಥವಾ ಶಕ್ತಿಯೆಂದು ಕರೆಯುತ್ತಾರೆ. ಇದೇ ರೀತಿಯಾಗಿ ಶಕ್ತಿಗಳನ್ನು ಕೂಡಿಸಿದಾಗ ಉಂಟಾಗುವುದೇ ವಸ್ತುಗಳೆಂದು ವಿಮರ್ಶಿಸುತ್ತಾರೆ. ಒಂದು ವಸ್ತುವು ಒಡೆದು ಛಿದ್ರ ವಾದಾಗ ಉಂಟಾಗುವ ಶಕ್ತಿಯ ಬಗ್ಗೆ Einstein ಸಂಶೋಧನೆಗಳಿಂದ ಬರುವ ಸೂತ್ರವೇ E=MC2 E ಎಂದರೆ ಶಕ್ತಿಯೂ M ಎಂದರೆ ವಸ್ತುವಿನ ದ್ರವ್ಯ ರಾಶಿ (ಘನ ಬಾರ)ವೂ ಹಾಗೂ C ಎಂದರೆ ಬೆಳಕಿನ ದ್ವಿಗುಣ ವೇಗಗಳಾಗಿದೆ. ಅದೇ ರೀತಿಯಾಗಿ M ಎಂಬ ವಸ್ತುವಿನ ದ್ರವ್ಯರಾಶಿಯೂ C ಎಂಬ ದ್ವಿಗುಣಿಸಿದ ವಿಧ್ಯುನ್ಮಾನ ವೇಗವೂ ಗಣಿಸಿದಾಗ ಬರುವುದೇ E ಎಂಬ ಶಕ್ತಿಯು. ಇದಕ್ಕೆ ಆಧಾರವಾಗಿ ಇತ್ತೀಚಿನ ಸಂಶೋಧನೆಯಾದ ಯುರೇನಿಯಮ್ ವಸ್ತುವನ್ನು ಛಿದ್ರಗೊಳಿಸಿ ಶಾಖವನ್ನು ಉತ್ಪತ್ತಿಗೊಳಿಸುತ್ತಾರೆ ಹಾಗೂ ಆ ಶಾಖದಿಂದ ಹಲವು ಪದಾರ್ಥಗಳ ಉತ್ಪಾದನೆಗಳಿಗೆ ಉಪಯೋಗಿಸುತ್ತಿದ್ದಾರೆ.

ಈ ಪ್ರಪಂಚದಲ್ಲಿರುವ ಕಾಣಸಿಗುವ ಹಲವು ಬಗೆಗಳ ಬಗ್ಗೆ ಸಂಶೋಧನೆಗಳನ್ನು ಮಾಡಿ, ಸೌರ ಮಂಡಲದಲ್ಲಿನ ಹಲವು ನಕ್ಷತ್ರಗಳನ್ನು, ಗ್ರಹಗಳನ್ನು ಮತ್ತು ಉಪಗ್ರಹಗಳನ್ನು ಉದಾಹರಣೆಗೆ ಸೂರ್ಯನನ್ನು ಭೂಮಿಯು ಮತ್ತು ಭೂಮಿಯನ್ನು ಚಂದ್ರನೂ ಸುತ್ತುತ್ತಿರುವುದು ಒಂದು ಅಕ್ಷಾಂಶ ಎಂಬ ಒಂದು ಆಧ್ಯಾತ್ಮ ಶಕ್ತಿಯಿಂದ. ಆ ಶಕ್ತಿಯನ್ನು ವಿಜ್ಞಾನಿಗಳು ಗುರುತ್ವಾಕರ್ಷಣೆಯೆಂದು ಕರೆಯುತ್ತಾರೆ.

ಅದೇ ರೀತಿಯಾಗಿ ಈ ಶಕ್ತಿಗಳಿಗೆ ಒಂದುಗೂಡುವ ಅಥವಾ ವಿಭಜಿಸಿ ಕೊಳ್ಳುವುದಕ್ಕೆ ಮತ್ತು ವಿವಿಧ ವಸ್ತುಗಳಲ್ಲಿ ಸೇರುವ ಅಥವಾ ಉತ್ಪಾದಿಸುವ ಸಾಧ್ಯವಿದೆ. ಉದಾಹರಣೆಯಾಗಿ, ವಿಜ್ಞಾನಿಗಳು ವಿಧ್ಯುತ್ ಶಕ್ತಿಯನ್ನು ದೀಪಗಳಲ್ಲಿ ಬೆಳಕಿನ ಶಕ್ತಿಯಾಗಿಯೂ, ಒಲೆಗಳಲ್ಲಿ ಉಷ್ಣವಾಗಿಯೂ ಮತ್ತು ಯಂತ್ರಗಳಲ್ಲಿ ಗುರುತ್ವಾಕರ್ಷಣ ಶಕ್ತಿಯಾಗಿ ಸ್ವಯಂಚಾಲಿತ ಬೀಸಣಿಗೆಯಾಗಿ ಉತ್ಪಾದಿಸಿಕೊಂಡಿದ್ದಾರೆ. ಹಾಗೆ Dynamo ಡೈನಮೋ ಎಂಬ ಯಂತ್ರದಲ್ಲಿ ಸಂಚಲನಾ

ಶಕ್ತಿಯಿಂದ ಗುರುತ್ವಾಕರ್ಷಣ ಶಕ್ತಿ ಸಂಚರಿಸಿದಾಗ ಲೋಹದ ತಂತಿಗಳಲ್ಲಿ ವಿಧ್ಯುತ್ ಉತ್ಪಾದನೆಗೊಳ್ಳುತ್ತದೆ. ಆದುದರಿಂದ Einstein ವಿಜ್ಞಾನಿಯು ತನ್ನ ಸಂಶೋಧನೆಗಳಿಂದ ಸಂಚಲನೆ, ಗುರುತ್ವಾಕರ್ಷಣೆ ಮತ್ತು ವಿಧ್ಯುನ್ಮಾನ ಗಳೆಲ್ಲವೂ ಶಕ್ತಿಯ ಹಲವು ಬಗೆಗಳೂ ಹಾಗೂ ಶಕ್ತಿಯು ವಿವಿಧ ರೂಪವನ್ನು ಅಥವಾ ವಿವಿಧತೆಯನ್ನು ಕೂಡಿದ್ದಾಗಿದೆ ಎಂಬುದನ್ನು ಖಚಿತವಾಗಿ ಭೌತಿಕದಲ್ಲಿ ತಿಳಿಸಿಕೊಟ್ಟಿದ್ದಾರೆ. ಹಾಗೂ ಮೇಲೆ ತಿಳಿಸಿದಂತೆ ವಿಧ್ಯುತ್ ಶಕ್ತಿಯು ಬೆಳಕು, ಉಷ್ಣ ಮತ್ತು ಗಾಳಿಗಳಾಗುವುದನ್ನು ತಿಳಿದುಕೊಂಡಿದ್ದೇವೆ. ಇದನ್ನೆಲ್ಲಾ ಗಮನಿಸಿದಾಗ ಈ ಪ್ರಪಂಚದ ಎಲ್ಲಾ ಶಕ್ತಿಯು ಹಲವು ವಸ್ತುಗಳಲ್ಲಿ ಹಲವು ರೂಪವಾಗಿದ್ದರೂ ಒಂದೇ ಶಕ್ತಿಯೆಂದು ಮನಗೊಳ್ಳುತ್ತೇವೆ ಮತ್ತು ಇದನ್ನು ಭೌತಿಕವಾಗಿ ವಿಜ್ಞಾನಿಗಳು ವಿವಿಧ ಸಂಶೋಧನೆಗಳಿಂದ ತಿಳಿಸಿಕೊಟ್ಟಂತಾಗಿದೆ. ಆದರೆ ಇದನ್ನು ಆಧ್ಯತ್ಮಿಕವು ಬಹಳ ಸ್ಪಷ್ಟವಾಗಿ ಮತ್ತು ಸುಲಭವಾಗಿ ತನ್ನ ಗ್ರಂಥಗಳಲ್ಲಿ ಹೇಳುತ್ತದೆ.

ನಾವುಗಳು ನಮ್ಮ ಗ್ರಂಥಗಳನ್ನು ಗಮನಿಸಿದಾಗ ಈ ಶಕ್ತಿಯನ್ನೇ ನಿತ್ಯಾನಿತ್ಯಗಳಿಗೂ ಮೂಲವಾದವಳು ಪರಾಶಕ್ತಿಯಾಗಿದ್ದಾಳೆ ಹಾಗೂ ಈ ಪ್ರಪಂಚವು ಅವಳ ಸೃಷ್ಟಿಯಾಗಿದೆ ಎಂಬುದನ್ನು ತಿಳಿಸುತ್ತದೆ. ಪರಾಶಕ್ತಿಗೆ ಜನ್ಮ- ಮೃತ್ಯುಗಳಿಲ್ಲವೆಂಬುದನ್ನು ಅರ್ಥೈಸಿಕೊಳ್ಳಬಹುದಾಗಿದೆ. ಆದರೆ ಅವಳಿಂದ ಸೃಷ್ಟಿಸಿದ ಈ ಭೂಮಿಯು ಅಳಿಸಲ್ಪಡುವ ಅಥವಾ ಬದಲಿಸಬಹುದಾದ ವಸ್ತುವಾಗಿದೆ ಮತ್ತು ಈ ಭೂಮಿಯು ಅಳಿದಾಗ ಅವಳಲ್ಲೇ ಲೀನವಾಗುವುದಾಗಿದೆ. ನಾವುಗಳು ಇದಕ್ಕೆ ಉದಾಹರಣೆಯಾಗಿ ಅಥವಾ ಭೌತಿಕ ವಿಜ್ಞಾನವಾಗಿ ಅಣುಗಳು ವಿಭಜನೆಯಾದಾಗ ಶಕ್ತಿಯು ಹೊರಹೊಮ್ಮುವುದನ್ನು ಮತ್ತು ಶಕ್ತಿಯಿಂದ ಬೇರೆ ವಸ್ತುಗಳು ಉತ್ಪಾದನೆಯಾಗುವುದನ್ನು ಗಮನಿಸುತ್ತೇವೆ.

ಈ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳೂ ಒಂದು ಶಕ್ತಿಯಿಂದ ಉತ್ಪಾದನೆಗೊಳ್ಳುವುದು ಮತ್ತು ಅವು ಅಳಿದಾಗ ಶಕ್ತಿಯನ್ನೇ ಸೇರುವುದು. ಆದರೆ ಈ ಪದಾರ್ಥಗಳಿಂದ ಶಕ್ತಿಯನ್ನು ಉತ್ಪಾದನೆಗೊಳಿಸಲು ಅಥವಾ ಅಳಿಸಲು ಸಾಧ್ಯವಿಲ್ಲ. ಅದೇ ರೀತಿಯಾಗಿ ನಾವುಗಳು ಶಕ್ತಿಯನ್ನು ಉತ್ಪಾದಿಸಲು ಸಾಧ್ಯವಿಲ್ಲ ಅಥವಾ ಅಳಿಸಲು ಆಗುವುದಿಲ್ಲ. ಇದನ್ನು ಸರಿಯಾಗಿ

ಅರ್ಥೈಸಿಕೊಳ್ಳುವುದರಿಂದ ನಮ್ಮ ಅರಿವಿಗೆ ಪ್ರಪಂಚದ ಸೃಷ್ಟಿತತ್ವಗಳು ಅರ್ಥವಾಗುತ್ತದೆ.

ಯಾವುದೇ ದೇಶದ ಇತಿಹಾಸವನ್ನು ಗಮನಿಸಿದಾಗ ಅಲ್ಲಿಯ ಮನುಷ್ಯನು ತನ್ನ ಚಿಂತನೆಗಳನ್ನು ಸತ್ಯವನ್ನು ತಿಳಿಯುವುದಕ್ಕಾಗಿಯೇ ತೊಡಗಿಕೊಂಡಿರುವುದು ತಿಳಿಯಬರುತ್ತದೆ. ಈ ಎಲ್ಲಾ ಇತಿಹಾಸಗಳನ್ನು ಸಂಶೋಧಿಸಿದಾಗ ಮನುಷ್ಯನು

ಎಲ್ಲದರಲ್ಲಿಯೂ ತನ್ನ ಸಮಾಜವನ್ನು ಅವಲೋಕಿಸಿಬಹುದಾದ ಧಾರ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಂಡಿದ್ದಾನೆಂಬುದು ಸ್ಪಷ್ಟವಾಗುತ್ತದೆ ಹಾಗೂ ಇದನ್ನೇಲ್ಲಾ ತಮ್ಮ ತತ್ವಜ್ಞಾನದ ಸಾಹಿತ್ಯಗಳಲ್ಲಿ ಉಲ್ಲೇಕಿಸಿದ್ದಾರೆ. ಆದುದರಿಂದ ಈ ಎಲ್ಲಾ ದೇಶಗಳ ಜ್ಞಾನದ ಮೂಲವೂ ಪರಮಾತ್ಮನೆಂಬುದು ಅರಿಯಬಹುದಾಗಿದೆ. ಆದುದರಿಂದ ಪರಮಾತ್ಮನ ಸಂಪರ್ಕಕ್ಕೆ ವಿಜ್ಞಾನ ಮತ್ತು ತತ್ವಶಾಸ್ತ್ರ,




ಎರಡು ಏಣಿಗಳಾಗಿವೆಂಬುದು ಸ್ಪಷ್ಟವಾಗಿವೆ. ಹೀಗಿರುವುದರಿಂದ ವಿಜ್ಞಾನವೂ, ತತ್ವಶಾಸ್ತ್ರವೂ, ಸಾಹಿತ್ಯವೂ ಒಂದಕ್ಕೊಂದು

ಅವಲಂಬಿತವಾಗಿ ಆಧ್ಯಾತ್ಮಕ್ಕೆ ಹೊಂದಿ ಕೊಂಡಿರುವುದೆಂಬುದನ್ನು ಎಲ್ಲರೂ ತಿಳಿದುಕೊಂಡರೆ ಈ ಪ್ರಪಂಚದಲ್ಲಿರುವ ಅಜ್ಞಾನವೂ, ಅಹಂಕಾರವೂ ಮತ್ತು ದ್ವೇಷವೂ ಕಳೆದುಕೊಂಡು ಎಲ್ಲರ ಶಾಂತಿಯುತ ಸಹಭಾಳ್ವೆಗೆ ಸಾಧ್ಯವಾಗುತ್ತದೆ.

# ಅಧ್ಯಾಯ ೯ --- ಶ್ರೀ ಲಲಿತಾಸಹಸ್ರನಾಮದ ಕವನಗಳ ಅರ್ಥ




೨೦೩ನೇ ನಾಮ "ಸರ್ವಮಯ್ಯೈ" ಎಂಬುದಾಗಿದೆ ಮತ್ತು ಇದರ ಅರ್ಥವು ಎಲ್ಲಿಯೂ, ಯಾವಾಗಲೂ ಇರುವವಳೆಂಬುದಾಗಿದೆ. ಮೇಲಿನ ಅಧ್ಯಾಯದಲ್ಲಿ ಅರ್ಥೈಸಿಕೊಂಡಂತೆ ಎಲ್ಲಾ ಭೌತಿಕ ವಸ್ತುವು ಅಣುಗಳು ಮತ್ತು ಶಕ್ತಿಯಿಂದ ಉತ್ಪತ್ತಿಯಾಗಿದೆ, ಆದುದರಿಂದ ಎಲ್ಲಾ

ವಸ್ತುವಿನಲ್ಲೂ ಶಕ್ತಿಯಿದೆಯೆಂಬುದು ಸತ್ಯವಾಗಿದೆ. ಇವೆಲ್ಲವೂ ನಮಗೆ ಭೌತಿಕವಾಗಿ ಅರಿವಿಗೆ ಬರುವುದಾದರೆ ಭೌತಿಕವಲ್ಲದೆ ಇತರ

ಪ್ರಕೃತಿಯಲ್ಲೂ ಶಕ್ತಿಯಿದೆ. ಎಲ್ಲೆಲ್ಲೂ ಅಡಗಿರುವ ಆ ಪರಾಶಕ್ತಿಯನ್ನೇ ಇಲ್ಲಿ "ಸರ್ವಮಯ್ಯೆ"ಯೆಂದು ವಿಶ್ಲೇಷಿಸಿದ್ದಾರೆ.

ನೀ ಇಲ್ಲಾದ ಇಡಮೇ ಇಲ್ಲೆ, ನೀದಾನೆ ಉಲಗಿನ್ ಎಲ್ಲೆ ಅಮ್ಮಾ ಅಮ್ಮಾ ಅಮ್ಮಾ------ ಫಲ್ಲವಿ
ನಿಲಂ ವೆಳುಕ್ಕ ನೀರ್ದಾನ್ನುಂಡು, ನೀರ್ ವೆಳುಕ್ಕ ಮೀನ್ ದಾನ್ ವುಂಡು, ಮನಮ್ ವೆಳುಕ್ಕ ಎದುದಾನ್ ವುಂಡು, ತಾಯೆ ಉನ್ ನಾಮಮ್ ಉಂಡು ಅಮ್ಮಾ ಅಮ್ಮಾ ಅಮ್ಮಾ ---- ಅನುಪಲ್ಲವಿ
ಉಡಲುಕ್ಕು ಒಂಬೋದು ವಾಸಲ್, ಮನದುಕ್ಕು ಎಣ್ ಎಣ್ಬದು ವಾಸಲ್, ಎನ್ನೈ ಈಡೆಟ್ಟು ವಂದ ವಾಸಲ್ ತಾಯೆ ಉನ್ ಗೊಪುರವಾಸಲ್ ಅಮ್ಮಾ ಅಮ್ಮಾ ಅಮ್ಮಾ----- ಚರಣ

ನೀನಿಲ್ಲದ ಸ್ಥಳವೆ ಇಲ್ಲಾ ನೀನೇ ಈ ಪ್ರಪಂಚದ ಎಲ್ಲೆ ಅಮ್ಮಾ, ಅಮ್ಮಾ, ಅಮ್ಮಾ. '
ಭೂಮಿಯ ಶುದ್ಧಿಗೆ ನೀರುಂಟು, ನೀರಿನ ಶುದ್ಧಿಗೆ ಮೀನುಂಟು, ಮನಃ ಶುದ್ಧಿಯಾಗಲು ಯಾವುದೆಂದರೆ ಅದು ನಿನ್ನ ನಾಮವೇ ಅಮ್ಮಾ ಅಮ್ಮಾ ಅಮ್ಮಾ.
ದೇಹಕ್ಕೆ ಒಂಭತ್ತು ಬಾಗಿಲು, ಮನಸ್ಸಿಗೆ ಯೋಚನೆಯೆ ಬಾಗಿಲು ಆದರೆ ನಮ್ಮನ್ನು ಉದ್ಧರಿಸಲೆಂದೇ ನಿನ್ನ ಗೋಪುರದ ಬಾಗಿಲುಂಟು ಅಮ್ಮಾ ಅಮ್ಮಾ ಅಮ್ಮಾ.

"ಯಾರು ಇನ್ನೊಬ್ಬರ ಸತ್ಕಾರ್ಯಗಳನ್ನು ಗಮನಿಸಿ
ಸಂತೋಷಗೊಳ್ಳಲಾರರೋ, ಅವರಿಂದ ಯಾವುದೇ
ಸತ್ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ"

# ಅಧ್ಯಾಯ ೧೦ --- ಶ್ರೀ ಕಾಮಾಕ್ಷಿ ಆಳ್ವಿಕೆ.

SREE KANCHI KAMAKSHI AMBAL
ஸ்ரீ காஞ்சி காமாக்ஷி அம்பாள்

ಸಮಾಜದಲ್ಲಿರುವ ಸ್ತ್ರೀಯರನ್ನು  ಸ್ತ್ರೀಯರನ್ನು ಮರ್ಯಾದೆಯಾಗಿ ನಡೆಸಿಕೊಂಡು, ಅವರು ಕೊಡುವ ಅವಶ್ಯವಾದ ಅಭಿಪ್ರಾಯ ಮತ್ತು ಅವರ ಅನುಭವಗಳನ್ನು ಆದರಿಸುವ ಕುಟುಂಬಗಳು ಯಾವಾಗಲೂ ಸಮೃದ್ಧಿಯಾಗಿರುತ್ತದೆ. ಬಾಳೆಮರದ ಕೆಳಗಿರುವ ಸಸಿಯ ರೀತಿಯಿರುವ ಆ ಸಮಾಜದ ಸಂಸಾರಗಳಲ್ಲಿ ಯಾವುದೆ ಆತುರವೋ ಅಥವಾ ಅದರಿಂದ ಉಂಟಾಗುವ ಅಳುವೊ ಇರುವುದಿಲ್ಲ. ಅಲ್ಲಿ ಯಾವಾಗಲೂ ಸುಖ: ಶಾಂತಿಗಳು ನೆಲೆಸಿ ಸಮೃದ್ಧಿಯಾಗಿರುತ್ತವೆ. ಸಂಸ್ಕೃತದಲ್ಲಿ ಹೇಳಿರುವ ನಗರೇಷು ಕಾಂಚೀ ಅಂದರೆ ನಗರಗಳಲ್ಲಿ ಕಾಂಚೀಪುರವೆಂದು ಅಥವಾ ಕಾಮಾಕ್ಷಿಯ ಕೋಟೆಯೆಂಬ ಕಾಂಚೀಪುರದ ಕಾಮಾಕ್ಷಿಯಮ್ಮನವರ ಆಳ್ವಿಕೆಯಿರುತ್ತದೆ. ಇದರಿಂದಲೇ ಮಧುರೆಯಲ್ಲಿ ಮೀನಾಕ್ಷಿಯು, ಕಾಶಿಯಲ್ಲಿ ವಿಶಾಲಾಕ್ಷಿಯು ಮತ್ತು ಕಾಂಚೀಪುರದಲ್ಲಿ ಕಾಮಾಕ್ಷಿ ಆಳುತ್ತಾರೆಂದು ಹೇಳಿದ್ದಾರೆ.

ಯಾವುದೇ ಕಾರ್ಯಗಳ ಪರಿಜ್ಞಾನವಿಲ್ಲದೇ ತನ್ನತನವೆಂಬ ಆತ್ಮಾವಲೋಚನೆಯಲ್ಲಿ ಯಾವಾಗಲೂ ತೊಡಗಿರುವ ಪರಬ್ರಹ್ಮಕ್ಕೆ "ಶಿವಂ ಅಥವಾ ಶಿವನ್ "ಎಂದು ಕರೆಯುತ್ತಾರೆ. ಯಾವ ಚಲನೆಯೂ, ಗುಣಗಳೂ, ಬಣ್ಣಗಳೂ ಮತ್ತು ಆಕಾರವೂ ಇಲ್ಲದ ಈ ಪರಬ್ರಹ್ಮ ಸ್ವರೂಪದಿಂದಲೇ ಅಥವಾ ಶಿವನಿಂದಲೇ ಈ ಪ್ರಪಂಚದ ಎಲ್ಲಾ ಭೌತಿಕ ವಸ್ತುಗಳು ಉತ್ಪತ್ತಿಯಾಗಿದೆ ಎಂದರೆ ಆಶ್ಚರ್ಯವಲ್ಲವೇ?
ಯಾವುದೂ ಇಲ್ಲದ ಈ ಶಿವನೆಂಬ ಪರಬ್ರಹ್ಮ ಸ್ವರೂಪವನ್ನು ತನ್ನ ಮಾಯಾ ಶಕ್ತಿಯಿಂದ ಈ ಎಲ್ಲಾ ಪ್ರಪಂಚದ ಭೌತಿಕ ವಸ್ತುವನ್ನಾಗಿಸಿರುವುದು ಸಾಕ್ಷಾತ್ ಅಂಬಿಕೆಯೇ ಆಗಿದ್ದಾಳೆ. ಅವಳ ಶಕ್ತಿ ಅಥವಾ ಲೀಲೆಗಳನ್ನು ಅರಿಯುವವರೆಗೆ ನಮ್ಮಂತಹ ಸಾಧಾರಣ ಜೀವಿಗಳು ಈ ಪ್ರಪಂಚದ ಮಾಯಾಜಾಲಗಳಲ್ಲಿ ತೊಡಗಿಸಿಕೊಂಡಿರುತ್ತೇವೆ. ಈ ರೀತಿಯಾಗಿ ತನ್ನ ಕ್ರೀಡೆಗೋಸ್ಕರ ನಮ್ಮನ್ನು ಆಟಿಕೆಯನ್ನಾಗಿಸಿಕೊಂಡಿರುವ ಆ ಪರಾಶಕ್ತಿಯನ್ನು ಭಕ್ತಿಯೆಂಬ ಏಣಿಯಲ್ಲಿ ತಲುಪಿ, ಅವಳ ಕೃಪಾಕಟಾಕ್ಷದಿಂದ ಮಾತ್ರ ಈ ಪರಬ್ರಹ್ಮನನ್ನರಿಯುವ ಶಕ್ತಿ ದೊರೆಯುತ್ತೆಂಬುದನ್ನು ಕಾಂಚೀಪುರದ ಶ್ರೀ ಚಂದ್ರಶೇಖರ ಸರಸ್ವತಿಯವರು ನಮಗೆಲ್ಲಾ ಶ್ರೀ ಕಾಮಾಕ್ಷಿ ತಾಯಿಯ ಕೃಪಾಕಟಾಕ್ಷದ ಬಗ್ಗೆ ತಿಳಿಸುತ್ತಾ ಹೇಳಿದ್ದಾರೆ.

ನಾವು ಏನನ್ನು ಅಪೇಕ್ಷಿಸುತ್ತೇವೋ ಅದನ್ನು ಅನುಗ್ರಹಿಸುವವಳು ತಾಯಿ ಶ್ರೀ ಕಾಮಾಕ್ಷಿಯಾಗಿದ್ದಾಳೆ. ಇದರ ಒಂದು ಉದಾಹರಣೆಯಾಗಿ ಇತ್ತೀಚಿನ ಬೆಳೆವಣಿಗೆಯಾದ ವಿಚಾರವನ್ನು ತಿಳಿಸಬೇಕೆಂದರೆ, ೦೧-೦೯-೨೦೦೪ ರಂದು ಒಬ್ಬ ನಾಯಕರು ಕಾಂಚೀಪುರಕ್ಕೆ ಆಗಮಿಸಿದ್ದರು. ಅವರು ಶ್ರೀ ಕಾಮಾಕ್ಷಿ ತಾಯಿಯ ಸನ್ನಿದಿಯನ್ನು ತಲುಪುವ ಸ್ಥಿತಿಗತಿಗಳೇಗಿತ್ತೆಂದರೆ ಮುಖದಲ್ಲಿ ದುಗುಡ, ದೇಹಾಲಸ್ಯ ಮತ್ತು ಚಿಂತಾಕ್ರಾಂತರಾಗಿರುವುದು ಎಲ್ಲರೂ ಗಮನಿಸಬಹುದಾದ ವಿಷಯವಾಗಿತ್ತು, ಆದರೆ ಗಾಯತ್ರಿ ಮಂದಿರದಲ್ಲಿ ನಿಂತು ತಾಯಿ ಶ್ರೀ ಕಾಮಾಕ್ಷಿಯಮ್ಮನವರ ದರ್ಶನದ ನಂತರ ಹೊರಗೆ ಬರುವಾಗ, ಅವರ ಮುಖದಲ್ಲಿ ಪ್ರಸನ್ನತೆಯು, ನಡತೆಯಲ್ಲಿ ವೇಗವೂ ಮತ್ತು ಧೈರ್ಯವಂತರಾಗಿರುವುದು ತೋರಿತು. ಹಾಗೂ ಅವರ ದೇಹವು ಯಾವುದೊ ಬಾರದಿಂದ ವಿಮುಕ್ತಿಯಾದುದಾಗಿ ಮತ್ತು ಮನಸ್ಸು ಸಂತೃಪ್ತಿಯಾಗಿದೆಯೆಂದು ತನ್ನ ಜೊತೆಗಿದ್ದವರಿಗೆ ಹೇಳಿದ್ದಾರೆ. ಹೊರಗೆ ಬಂದ ನಾಯಕರು ದೇವಿಯ ಪ್ರಸಾದವಾಗಿ ಕೊಟ್ಟಿದ್ದ ತಾವರೆ ಹೂವನ್ನು ತನ್ನ ಎದೆಗೆ ಅಪ್ಪಿಕೊಂಡು, ಪ್ರಾಕಾರದಲ್ಲಿರುವಾಗ ತಾಯಿಯ ಸನ್ನಿಧಿ ಮತ್ತು ಗೋಪುರವನ್ನು ಮನಸಾರೆ ನಮಸ್ಕರಿಸಿದ್ದು ಎಲ್ಲರೂ ಗಮನಿಸಿದ ವಿಷಯವಾಗಿತ್ತು. ಅವರು ತಾಯಿಯ ಬಳಿ ಎನನ್ನು ಪ್ರಾರ್ಥಿಸಿದರೆಂಬುದು ಅವರಿಗೆ ಮತ್ತು ತಾಯಿಗೆ ಮಾತ್ರ ತಿಳಿದಿರಬಹುದಾದ ವಿಷಯ. ಆದರೆ ಇದಾದ ೧೦ ವರ್ಷಗಳ ೨೦೧೪ ರಲ್ಲಿ ಚುಣಾವಣಾ ಸಮಯದಲ್ಲಿ ಅವರ ನಾಮ ನಕ್ಷತ್ರಗಳ ಸಂಕಲ್ಪದೊಂದಿಗೆ ತಾಯಿ ಶ್ರೀ ಕಾಮಾಕ್ಷಿಯಮ್ಮನವರಿಗೆ ಅಭಿಷೇಕ ಮತ್ತು ಅರ್ಚನೆಗಳನ್ನು ಮಾಡಿಸಿ, ಪ್ರಸಾದವನ್ನು ಅವರು ತರಿಸಿಕೊಂಡರು. ನಂತರದಲ್ಲಿ ಅವರು ಪ್ರದಾನಿಯಾಗಿ ಚುನಾಯಿತರಾದರು. ಅವರೇ ಈಗಿನ ಪ್ರದಾನಿಗಳೂ ಆದ ಶ್ರೀ ಮೊದಿಯವರಾಗಿದ್ದಾರೆ. ಇದೇ ರೀತಿಯಾಗಿ ತಾಯಿ ಶ್ರೀ ಕಾಮಾಕ್ಷಿ ಅಮ್ಮನವರ ಕೃಪಾಕಟಾಕ್ಷದಿಂದ ಅರಸರಾಗಿರುವುದಕ್ಕೆ ಬಹಳ ಉದಾಹರಣೆಗಳನ್ನು ನಾವು ನಮ್ಮ ಇತಿಹಾಸದಲ್ಲಿ ತಿಳಿದುಕೊಳ್ಳಬಹುದಾಗಿದೆ. ಇದಕ್ಕೂ ಉದಾಹರಣೆಯಾಗಿ ಕರಿಗಲ್ ಚೋಳನೆಂಬ ರಾಜನು, ಆಗಿನ ಕಾಲದಲ್ಲಿ ಕಟ್ಚಿ ಎಂದು ಹೆಸರಿದ್ದ ಕಾಂಚೀಪುರಕ್ಕೆ ಬಂದು ಬಳೆಗಳನ್ನು ಧರಿಸಿರುವ ಶ್ರೀ ಕಾಮಾಕ್ಷಿ ಅಮ್ಮನವರನ್ನು ಪೂಜಿಸಿ ತನ್ನ ಸಮ್ರಾಜ್ಯಕ್ಕೆ ಅಧಿಪತಿಯಾದುದನ್ನು ಈ ಕೆಳಗಿನ ತಮಿಳು ಕವನವು ತಿಳಿಯಪಡಿಸುತ್ತದೆ.

"ಕಟ್ಟಿ ವಳ್ಳೆ ಕಟ್ಟಿ ಕಾಮಕೋಟಂಗಾವಲ್ ಮೆಚ್ಚಿ ಇನಿದಿರುಕ್ಕು ಮ್ಯೆ ಚಾತಾನ್ ಕೈಚ್ಚಂಡು ಕಂಬಕಳಿತ್ತು ಕರಿಗಾಲ್ ಪೆರುವಳತ್ತಾನ್ ಸೆಂಬರ್ ಕಿರಿ ತರಿತ್ತ ತ್ತೆಂಡು".

ಶ್ರೀ ಲಲಿತಾ ಉಪಾಸನಾ ಮಾರ್ಗವು ತಾಯಿ ಶ್ರೀ ಕಾಮಾಕ್ಷಿಯನ್ನು ಈ ರೀತಿಯಾಗಿ ಹೊಗಳುತ್ತದೆ. "ಲಲಿತಾ ಇವ ಕಾಮಾಕ್ಷಿ, ಕಾಂಚ್ಯಾಂ ವ್ಯಕ್ತಿಮುಪಗದಾ | ಸರಸ್ವತಿ ರಮಾ ಗೌರ್ಯಾಃ ತ್ವಾಮೇ ವಾದ್ಯ ಉಪಾಸಕೆ ||" ಇದರರ್ಥವಾಗಿ ಕಂಚಿಯಲ್ಲಿ ಲಲಿತೆಯು ಕಾಮಾಕ್ಷಿಯಾಗಿರಲು, ಸರಸ್ವತಿ, ರಮಾ ಮತ್ತು ಗೌರಿಯರು ತಾವುಗಳೇ ವಾದ್ಯವನ್ನು ನುಡಿಸಿದರೆಂಬುದಾಗಿದೆ.

ಯಾರಾದರೂ ಕೋಪದಿಂದಲೋ ಅಥವಾ ಕ್ರೌರ್ಯದಿಂದಲೋ ಮಾತನಾಡುವುದನ್ನು ಕಂಡವರು ಅವರನ್ನು ಕರುಣಾಹೀನರೆಂದು ಕರೆಯುತ್ತಾರಲ್ಲವೆ?. ಆದ್ದರಿಂದ ಈ ಪ್ರಪಂಚದಲ್ಲಿ ಕರುಣೆಯು ಮತ್ತು ಪ್ರೀತಿಯು ಅತ್ಯವಶ್ಯವಾಗಿದೆ. ಎಲ್ಲರೂ ಕರುಣಾಪೂರ್ವಕ ಪ್ರೀತಿಗಾಗಿ ತವಕಿಸಿಕೊಂಡಿರುತ್ತಾರೆ. ತಾಯಿ ಶ್ರೀ ಕಾಮಾಕ್ಷಿಯಮ್ಮನವರು ಈ ಕರುಣಾಪೂರ್ವಕ ಪ್ರೀತಿಗೆ ಒಡತಿಯಾಗಿದ್ದಾಳೆ. ಆದ್ದರಿಂದಲೇ ಕೃತಯುಗದಲ್ಲಿ ದುರ್ವಾಸರು ೨೦೦೦ ಶ್ಲೋಕಗಳಿಂದ, ತ್ರೇತಾಯುಗದಲ್ಲಿ ಪರಶುರಾಮರು ೧೫೦೦ ಶ್ಲೋಕಗಳಿಂದಲೂ, ದ್ವಾಪರಯುಗದಲ್ಲಿ ಧೌಮ್ಯ ಮುನಿಗಳು ೧೦೦೦ ಶ್ಲೋಕಗಳಿಂದಲೂ ಮತ್ತು ಕಲಿಯುಗದಲ್ಲಿ ಮೂಕಶಂಕರರು ೫೦೦ ಶ್ಲೋಕಗಳಲ್ಲಿ ತಾಯಿ ಶ್ರೀ ಕಾಮಾಕ್ಷಿಯಮ್ಮನವರನ್ನು ಸ್ತುತಿಸಿದ್ದಾರೆ.

ಲಲಿತೋಪಾಖ್ಯಾನದಲ್ಲಿನ ಉತ್ತರಕಾಂಡದ ೩೮ನೇ ಅಧ್ಯಾಯದಲ್ಲಿ೪೦ನೇ ಶ್ಲೋಕವಾದ " ಭಂಡಾಸುರ ವಧಾಯೈ ಚ ಪ್ರಾದುರ್ಭೂತ ಚಿದಗ್ನಿತಾ | ಮಹಾ ತ್ರಿಪುರ ಸುಂದರ್ಯ ಸುರರ್ತಿಸ್ತೆಜೊ ವಿಜೃಂಬಿತಾ | ಕಾಮಾಕ್ಷಿತಿ ವಿಧಾತ್ರಾ ತು ಪ್ರಸ್ತುತ ಲಲಿತೇಶ್ವರಿ ||

ಭಂಡಾಸುರನ ವಧೆಯ ಕಾರಣವಾಗಿ ಚಿದಾಗ್ನಿಯೆಂಬ ಕುಂಡದಲ್ಲಿ ತಾಯಿಯು ಉದ್ಭವಿಸಿದವಳು. ಶ್ರೀ ಮಹಾತ್ರಿಪುರ ಸುಂದರಿಯ ಮೂರ್ತಿಯೂ ಆ ಕುಂಡದ ಅಗ್ನಿಯಲ್ಲಿ ಉದ್ಭವಿಸಿದ್ದಾಗಿದೆ. ಈ ತಾಯಿಯನ್ನು ದೇವತೆಗಳು ಶ್ರೀ ಲಲಿತಾಯೈ ಎಂಬ ನಾಮದಿಂದ

ಮತ್ತು ಶ್ರೀ ಬ್ರಹ್ಮದೇವರು ಶ್ರೀ ಕಾಮಾಕ್ಷಿಯೆಂಬ ನಾಮದಿಂದ ಕರೆದಿದ್ದಾರೆ. ಈ ಪ್ರಪಂಚದಲ್ಲೆಲ್ಲರ ಜನ್ಮಕ್ಕೆ ಅಧಿಪತಿಯಾದ ಶ್ರೀ ಬ್ರಹ್ಮದೇವನೇ ಪೂಜಿಸಿದಂತಹ ತಾಯಿ ಶ್ರೀ ಕಾಮಾಕ್ಷಿಯು ಆಗಿದ್ದಾಳೆ. ಈ ತಾಯಿಯ ಬಗ್ಗೆ ಅರಿಯಲು ಇದಕ್ಕಿಂತಾ ಉತ್ತಮವಾದ ಉದಾಹರಣೆಯು ಬೇರೆ ಯಾವುದು ಬೇಕಾಗಿದೆ?

ಕಾಂಚೀಪುರದ ಆಚಾರ್ಯರಾದ ಶ್ರೀ ಚಂದ್ರಶೇಖರ ಸರಸ್ವತಿಯವರು ಹೇಳಿರುವಂತೆ ಈ ಮಾಯೆಗಳಿಗೆಲ್ಲಾ ಕಾರಣಳಾದವಳು ತಾಯಿ ಕಾಮಾಕ್ಷಿಯೇ ಮತ್ತು ಜ್ಞಾನ ಪ್ರದಾಯಿನಿಯೂ ಅವಳೆ ಆಗಿದ್ದಾಳೆ. ಎಲ್ಲದ್ದಕ್ಕೂ ತಾಯಿಯ ಕರುಣೆಯೇ ಪ್ರಧಾನವಾಗಿದೆ. ಈ ಮಾಯೆಯಿಂದಲೇ ಆವೃತವಾಗಿರುವ ನಮಗೆ ತನ್ನ ಕರುಣಾ ದೃಷ್ಟಿಯಿಂದ ಮಾಯೆಯಿಂದ ಹೊರಬರಲು ಬೇಕಾದ ಜ್ಞಾನವನ್ನು ಅನುಗ್ರಹಿಸುವವಳು ಅವಳೆ ಆಗಿದ್ದಾಳೆ. ಈ ಮೂರು ಲೋಕಗಳಲ್ಲಿ ನಾವು ಉಂಟು ಮಾಡಿಕೊಳ್ಳುವ ಎಲ್ಲಾ ಚಿಂತೆಗಳಿಗೆ ನಮ್ಮ ಮನಸ್ಸು ಮತ್ತು ಇಂದ್ರಿಯಗಳೆ ಕಾರಣವಾಗಿದೆ. ಈ ಇಂದ್ರಿಯಗಳ ಸುಖಕ್ಕಾಗಿ ನಮ್ಮ ಮನಸ್ಸನ್ನು ತೊಡಗಿಸಿಕೊಂಡು ನಮ್ಮ ಸ್ವಾಭಾವಿಕವಾದ ಆತ್ಮಸುಖವನ್ನು ನಾವುಗಳು ಮರೆತಿದ್ದೇವೆ. ಆದ್ದರಿಂದ ನಮ್ಮ ಮನಸ್ಸು ಈ ಇಂದ್ರಿಯಗಳಿಗೆ ಶರಣಾಗಿದೆ. ಹೀಗಾಗಲು ತಾಯಿಯ ಮಾಯೆಯೇ ಕಾರಣವಾಗಿದೆ. ಆದ್ದರಿಂದ ಲಲಿತೆಯೇ ಕಾಮಾಕ್ಷಿಯಾಗಿ ಈ ಮನಸನ್ನು ಇಂದ್ರಿಯಗಳಿಂದ ವಿಮುಕ್ತಗೊಳಿಸ ಬೇಕಾಗುತ್ತದೆ.

ಯಾವ ಮನುಷ್ಯರಿಗೆ ಇಕ್ಕಟ್ಟುಗಳು, ಸಂಕಟಗಳು, ಅಪಾಯಗಳು, ಹೊಡೆತಗಳು, ದುಖಃಗಳು, ಸೋಲು, ಅನಿರೀಕ್ಷಿತ ಮೋಸ, ಮನಕ್ಲೇಷಗಳ ನಿದ್ರಾಹೀನತೆಯಿಂದ ಪರಿತಪಿಸಲ್ಪಡುತ್ತಿರುವರು ಕಾಂಚೀಪುರದ ತಾಯಿ ಕಾಮಕ್ಷಿಯಮ್ಮನವರ ಬಳಿ ಹೋಗಿ ಅಥವಾ ಹತ್ತಿರದ ಶ್ರೀ ಕಾಮಕ್ಷಿಯಮ್ಮನವರ ದೇವಸ್ಥಾನಕ್ಕೆ ಹೋಗಿ, ಅವಳು ಒಂದು ಮಗುವನ್ನು ಹೇಗೆ ತಾಯಿ ತನ್ನ ಎದೆಯಲ್ಲಿ ಅಪ್ಪಿಡಿದುಕೊಂಡು ಹಾರೈಸುವಳೊ ಹಾಗೆ ನಿಮ್ಮ ಎಲ್ಲಾ ತೊಂದರೆಗಳಿಂದ ಮುಕ್ತಿ ಕೊಡಿಸುವಳು. ಹಾಗು ತಾಯಿಯ ಪರಾಮರ್ಷೆಯಲ್ಲಿ ಮಗುವಿನ ಹಾಗೆ ನೀವು ಸುಖವಾಗಿರುವಿರಿ. ತಾಯಿ ಶ್ರೀ ಕಾಮಾಕ್ಷಿಯು ಕೇವಲ ತನ್ನ ಕಣ್ಣಿನ ಒಂದಂಚಿನಲ್ಲಿ ನಮ್ಮನ್ನು ನೋಡಿದರೆ ಅಥವಾ ಗಮನಿಸಿದರೆ, ನಮ್ಮೆಲ್ಲಾ ಕಷ್ಟಗಳು ಮತ್ತು ಚಿಂತೆಗಳು ದೂರವಾಗುತ್ತದೆ.

ಹೇಳಿರುವುದೆಲ್ಲಾ ಹಳೆಯ ಪುರಾಣ ಕತೆಗಳಾಗಿದ್ದು ಈ ಕಾಲಕ್ಕೆ ಅನ್ವಹಿಸುವುದಿಲ್ಲವೆಂದು ಹೇಳುವವರು ಬಹಳಷ್ಟು ಜನರಿರಬಹುದು. ಅವರಿಗೆಲ್ಲಾ ಶ್ರೀ ಆದಿಶಂಕರರ ಬೃಹದಾರಣ್ಯ ಉಪನಿಷತ್ತಿನ ಭಾಷ್ಯದಲ್ಲಿ ಹೇಳಿರುವ ೧ : ೪ : ೧೦ ವಾಕ್ಯದಲ್ಲೇ ಉತ್ತರ ಅಡಗಿದೆಯೆಂದು ತಮಿಳಿನ ಪುಸ್ತಕವಾದ ಶ್ರೀ ರಾಮಕೃಷ್ಣಚಂದ್ರಿಕ ಎಂಬುದರಲ್ಲಿ ಕೆಳಕಂಡಂತೆ ಶ್ರೀ ಅಣ್ಣ ರವರು ೦೪-೦೭-೧೯೫೫ ರಲ್ಲಿ ಬರೆದಿದ್ದಾರೆ :

ತೇಯಂ ಬ್ರಹ್ಮವಿಧ್ಯಾ ಸರ್ವಭಾವಾ ಭಕ್ತಿ: ರಾಸೀಂ ಮಹತಾಂ ದೇವದೀನಾಂ ದೇವ್ಯದಿಶಯಃ ಏತಾನಿ ಮೈಸಂ ಯುಹಿನನಾಮ್ ವಿಷೇಶತು ಮಾನುಷ್ಯಾಣಾನಾಮ್ ಅಲ್ಪ ವೀರ್ಯ ಭಾದಿತಿ ಯಾ ಕಸ್ಯಸಿದ್ ಬುದ್ಧಿಸ್ಯ ವೈಸ್ತಾವನಾಯ ಆವಃ | ನಹೀ ಮಾವಾ ವೀರ್ಯೇಷು ವಾಮದೇವಾ ದಿಶುಹೀನ ವೀರ್ಯೇಷು ಬಾವಾವರ್ತ ಮಾನಿಕೇಶು ಮನುಶ್ಯೇಷು ಬ್ರಹ್ಮಣೊ ವಿಶೇಷ ತತ್ ವಿಜ್ಞಾನಸ್ಯ ವಾ ಅಸ್ತಿ.

ಬೃಹದಾರಣ್ಯ ಉಪನಿಷತ್ - ೧ : ೪ : ೧೦ ಬ್ರಹ್ಮ ವಾ ಇದಮಗ್ರ ಆಸೀತ್ ತದಾತ್ಮಾನಮೇತ್ ,ಅಹಮ್ ಬ್ರಹ್ಮಾಸ್ಮೀತಿ | ತಸ್ಮಾತ್ ತತ್ಸರ್ವಮಬವತು, ತದ್ಯೊ ಯೊನಾಮ್ ಪ್ರತ್ಯಬುಭ್ಯತ ಸ ಎವ ತತಾಭವತ್, ತತಾರ್ಶೀರ್ಣಾಮ್, ತಥಾ ಮಾಣಾಮ್, ತದ್ವೈತತ್ಪರ್ಯಾನ್ ಋರ್ಷಿ ವಾಮದೇವಃ, ಪ್ರತಿಪೆದೆ ಅಹಮ್ ಮುಖಂ ಸೂರ್ಯಷ್ಚೇತಿ | ತದಿದಮಪ್ಯೆತರ್ಹಿ ಯ ಏವಂ ವೇದ, ಅಹಮ್ ಬ್ರಹ್ಮಾಸ್ತೇ, ಸ ಇದಂ ಸರ್ವಂ ಭವತಿ, ತಸ್ಯ ಹ ನ ದೇವಾಸ್ಚನಾಭೂತ್ಯಾ ಹಿಶ್ಆತ್ಮಾ ಹೋಷಾಂ ಸ ಭವತಿಃ ಅಥ ಯೋನ್ಯಾಂ ದೇವತಾಮುಪಾಸ್ತೆ, ಅನ್ಯೋನ್ ಸಾವನ್ಯೋನ್ ಹಮಸ್ಮಿತೀ, ನ ಸ ವೇದ, ಯಥಾ ಪಶುರೇವಮ್ ಸ ದೇವಾನಾಂ | ಯಥಾ ಹ ವೈ ಬಹವಃ ಪಶಾವೊ ಮನುಷ್ಯಾಂ ಭುಂಜ್ಯುಃ ಎವಮೇಕೈಕ ಪುರುಷೌ ದೇವಾನ್ ಭುನಕ್ತಿಃ| ಎಕಸ್ಮಿನ್ನೇವ ಪಷಾವಾದಿಯಮಾನೇಽಪ್ರಿಯಮ್ ಭವತಿ, ಕಿಮು ಬಹುಷು? ತಸ್ಮಾದೇಷಾಂ ತನ್ನ ಪ್ರಿಯಮ್ ಯದೆತನ್ ಮನುಷ್ಯಾ ವಿದ್ಯುಃ ||

ಈ ಸತ್ಯಗಳನ್ನು ಈಗಿನ ಕಾಲದಲ್ಲಿ ತಮ್ಮ ನಡತೆಯಿಂದ ತೋರಿಸಿಕೊಟ್ಟವರು ಶ್ರೀ ಪರಮಹಂಸರು. ಗುರುವಿನ ದೀಕ್ಷೆ,

ದೀಕ್ಷೆಯಿಂದ ಮಂತ್ರ ಮತ್ತು ಮಂತ್ರದಿಂದ ಸಿದ್ಧಿ ಎಂಬುದು ಆಗಿನ ಕಾಲದಿಂದ ಈಗಿನ ಕಾಲದವರೆಗೂ ಸತ್ಯವಾಗಿದೆ.

ಶ್ರೀ ಲಲಿತ ಸಹಸ್ರನಾಮ ಪಾರಾಯಣವು ಯವುದನ್ನೂ ಹೋಲಿಸಲಾಗದ ಉತ್ತಮ ಮಾರ್ಗವಾಗಿ ಅಂದಿನಿಂದ ಇಂದಿನವರೆಗೂ ದಾರಿದೀಪವಾಗಿದೆ.

ಓಂ ಶಕ್ತಿ .... ಓಂ ಶಕ್ತಿ ....ಓಂ ಶಕ್ತಿ

ವಿಶೇಷ ಸೂಚನೆ: ಶ್ರೀ ಆದಿಶಂಕರರು ತೋರಿಸಿಕೊಟ್ಟ ಮಾರ್ಗದರ್ಶನದಲ್ಲಿ ಶ್ರೀ ಭಾಸುರಾನಂದ ನಾಥ ಎಂಬ ಭಾಸ್ಕರ ರಾಯರ್ರವರು ಬರೆದಿರುವ ಭಾಷ್ಯಯು ಪ್ರಮುಖವಾಗಿದೆ. ಭಗವದ್ಗೀತೆ, ಸೌಂದರ್ಯ ಲಹರಿ, ಈಶವಾಕ್ಯ, ಕೇನ, ಕಥ, ಪ್ರಶ್ನ, ಮುಂದಕ, ಮಾಂಡೂಕ, ತೈತ್ತರೀಯ, ಚಂಡೂಕ್ಯ, ಬೃಹದಾರಣ್ಯ ಉಪನಿಷತ್ತುಗಳಲ್ಲಿ "ಎಲ್ಲಾ ರೀತಿಯ ದೇವಿ ಉಪಾಸನೆಗಳು ಒಳಗೊಂಡಿವೆ. ಅವಳೇ "ಸರ್ವ ದೇವ ದೇವಿ ಸ್ವರೂಪಿಣಿ" ಎಂದು ತಿಳಿಸಲ್ಪಟ್ಟಿದೆ.

## ವಾಗದೀಶ್ವರ್ಯೈ - ಮಾತಿಗೆಲ್ಲಾ ಈಶ್ವರಿಯು

ವಾಗದೀಶ್ವರಿ ಶಾರದೆ ವರದಾಯಿನಿ |
ಚತುರ್ವೇದ ರೂಪಿಣಿ ವಾಣ್ಮಯಿ ಅಮೃತೇಶ್ವರಿ | --- ಪಲ್ಲವಿ
ದೇವ ದೇವ ಮನೋಹರಿ ತನು ಶಾಂತಕಿ |
ಶತ ಕೋಟಿ ಬಾಲ ದಿವಾಕರೊ ಜ್ವಲ ರೂಪಿಣಿ|| (ಪಲ್ಲವಿ)
ನಾಮ ಕೀರ್ತನ ಲೋಲುಪೆ ಸುರ ಪೂಜಿತೆ |
ಶುಕ ನಾರದಾದಿ ಪ್ರಾರ್ಚಿತೈ ನತ ಪಾಲಿಕೆ || (ಪಲ್ಲವಿ)
ಚಂಡ ಮುಂಡಾ ನಿಷೂದಿನಿ ರಣ ಚಂಡಿಕೆ |
ಜಯ ಶಂಕರಾಂಗ ನಿವಾಸಿನಿ ಅಮೃತಾಂಭಿಕೆ | (ಪಲ್ಲವಿ)
ಶುಂಬ ದೈತ್ಯ ವಿನಾಶಿನಿ ಶಿವರಂಜಿನಿ |
ಭವಬೀತಿ ಭಂಜಿನಿ ದೇಹಿಮೆ ಕರುಣಾಮೃತಂ || (ಪಲ್ಲವಿ)
ಮಂಗಳಂ ತವ ಚಿಂತನಂ ಜಗದಾಂಭಿಕೆ |
ಮಮ ವಂದನಂ ಪದ ಪಂಕಜೆ ಅಮೃತೇಶ್ವರಿ (ಪಲ್ಲವಿ)

# ಸಾರಾಂಶ

ಶ್ರೀ ವೇದವ್ಯಾಸರ ಉಪನಿಷತ್ತಿನ ಸಾರಾಂಶವಾದ ಶ್ರೀಮದ್ ಭಾಗವತಂನ ಮಹಾ ಭಾರತದಲ್ಲಿ ಹೇಗೆ ನ್ಯಾಯಯುತವಾದ ಭಗವದ್ಗೀತೆಯನ್ನು ಅಳವಡಿಸಿದ್ದಾರೋ ಹಾಗೆಯೆ ಬ್ರಹ್ಮಾಂಡ ಪುರಾಣದಲ್ಲಿ ಶ್ರೀ ಲಲಿತಾಸಹಸ್ರನಾಮವನ್ನು ಅಳವಡಿಸಿದ್ದಾಗಿದೆ. ವೇದಾಂತಿಗಳಿಗೆ ಹೇಗೆ ಭಗವದ್ಗೀತೆಯಲ್ಲಿ ಬಹಳ ಒಪ್ಪವಾಗಿ ಮತ್ತು ಸಂಕ್ಷಿಪ್ತವಾಗಿ ಪುಪಂಚದಲ್ಲಿರಿಸಿದ್ದಾರೋ ಹಾಗೆ ಮಾಂತ್ರಿಕದಲ್ಲಿ ಶ್ರೀ ಲಲಿತಾಸಹಸ್ರನಾಮವು ಪುಸಿದ್ದಿಯಾಗಿದೆ. ಬ್ರಹ್ಮಾಂಡ ಪುರಾಣದ ಲಲಿತೋಪಾಖ್ಯಾನದಲ್ಲಿ ಸ್ತೋತ್ರ ಕಾಂಡದ ಅಮೂಲ್ಯ ರತ್ನಗಳ ಬೊಕ್ಕಸವಾದ ಶ್ರೀ ಲಲಿತಾಸಹಸ್ರನಾಮವನ್ನು ಹೊಂದಿಸಲಾಗಿದೆ. ಶ್ರೀ ಲಲಿತಾಸಹಸ್ರನಾಮದ ಭಾಷ್ಯಗಳಲ್ಲಿ ಅತೀ ಉತ್ತಮವಾಗಿ ವಿಮರ್ಷಿಸಿರುವುದು ಶ್ರೀ ಭಾಸುರಾನಂದ ನಾಥರೆಂಬ ಬಾಸ್ಕರ ರಾಯರ್ ರವರದ್ದಾಗಿದೆ. ಶ್ರೀ ಭಾಸುರಾನಂದ ನಾಥರ್ ರವರು ಕಲಿಯುಗದ ೪೭೯೦ ಯಿಂದ ೪೮೪೫ ರವರೆಗೆ (ಕ್ರಿಸ್ತ ಶಕ ೧೬೯೦ - ೧೭೪೫) ವಿರಾಜಿತರಾದವರು. ಹಾಗು ಹಲವು ಗ್ರಂಥಗಳನ್ನು ಬರೆದವರಾಗಿದ್ದಾರೆ. ಅವರ ಕೃತಿಗಳಲ್ಲಿ "ಸೌಭಾಗ್ಯ ಬಾಸ್ಕರಂ" ಎಂಬ ಕೃತಿಯು ಶ್ರೀ ಲಲಿತಾಸಹಸ್ರನಾಮದ ಭಾಷ್ಯವಾಗಿದೆ. ಬ್ರಹ್ಮವಿದ್ಯೆಯು ಮತ್ತು ಶ್ರೀ ವಿಧ್ಯೆಯು ಒಂದೆ ಆಗಿದೆ. ಬ್ರಹ್ಮವಿದ್ಯೆಯ ಮಂತ್ರವಿಧ್ಯೆಗಳನ್ನು ಅತ್ಯಂತ ಸರಳವಾಗಿಸಿರುವುದು ಶ್ರೀ ವಿಧ್ಯೆಯಾಗಿದೆ. ಮಂತ್ರವು, ಯಂತ್ರವು ಮತ್ತು ತಂತ್ರವು ಶ್ರೀ

ವಿಧ್ಯೆಯಲ್ಲಿ ಅಡಕವಾಗಿದೆ. ಇದನ್ನು ೨೦೪, ೨೦೫ ಮತ್ತು ೨೦೬ ನೇ ನಾಮಾವಳಿಗಳಾದ "ಸರ್ವ ಮಂತ್ರಾತ್ಮಿಕಾ, ಸರ್ವ ಯಂತ್ರಾತ್ಮಿಕಾ, ಸರ್ವ ತಂತ್ರಾತ್ಮಿಕಾ ಎಂದು ಶ್ರೀ ಲಲಿತಾಸಹಸ್ರನಾಮದಲ್ಲಿ ಸೇರ್ಪಡಿಸಲಾಗಿದೆ.

ಮಂತ್ರಗಳ ಅರ್ಥವನ್ನು ಸಂಕ್ಷಿಪ್ತವಾಗಿ ಯಂತ್ರಗಳಲ್ಲಿ ಅಳವಡಿಸಲಾಗಿದೆ. ಆ ಯಂತ್ರಗಳಲ್ಲಿ ನಮ್ಮ ಮನಸ್ಸನ್ನು ಕ್ರೋಡಿಕರಿಸಿ ಶಕ್ತಿಯನ್ನು ಊರ್ಜಿತಗೊಳಿಸಲು ಬೇಕಾಗಿರುವ ಬಾಹ್ಯ ಮತ್ತು ಮಾನಸಿಕ ಪೂಜೆಗಳನ್ನು, ಅಷ್ಟಾಂಗ ಯೋಗ ಮತ್ತು ಸಾಧನೆಗಳನ್ನುತಂತ್ರಗಳಲ್ಲಿ ಅಡಗಿಸಿದ್ದಾರೆ. ಶ್ರೀವಿಧ್ಯಾ ಉಪಾಸನೆಯಲ್ಲಿ ಪ್ರಮುಖವಾದ ಮಂತ್ರವು ಪಂಚದಶಾಕ್ಷರಿ, ಯಂತ್ರವು ಶ್ರೀಚಕ್ರವು ಹಾಗು ಐಕ್ಯಾನುಸಂಧಾನವು ತಂತ್ರಗಳಾಗಿವೆ. ಯಾವುದೆ ಮಂತ್ರ ಸಿದ್ಧಿಗೆ ಯಂತ್ರವು ಮತ್ತು ತಂತ್ರವು ಸಹಭಾಗಿತ್ವ ಹೊಂದಿದೆ. ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ದೇಹವನ್ನು ಅತ್ಯುತ್ತಮ ಯಂತ್ರವನ್ನಾಗಿಸಿಕೊಂಡವರು. ಅವರು ಪರಾಶಕ್ತಿಯಲ್ಲಿ "ಅಮಿ ಯಂತ್ರಂ, ತುಮಿ ಯಂತಿರಿ" ಅಂದರೆ ನಾನು ಯಂತ್ರವು ಮತ್ತು ನೀನೇ ಯಂತ್ರ ಶಾಸ್ತ್ರಜ್ಞೆ ಯಾಗಿರುವೆ ಎಂದರ್ಥ.

ಹಿಮಾಲಯದಲ್ಲಿ ಹುಟ್ಟಿ ಎಲ್ಲಾ ದಿಶೆಗೂ ಹರಡುವ ಎಲ್ಲಾ ನದಿಗಳ ಸಂಗಮ ಸ್ಥಳ ಸಮುದ್ರವಾಗಿದೆ. ಶ್ರೀ ವಿಧ್ಯೆಯು ಹುಟ್ಟಿದವರಿಗೆಲ್ಲಾ ಸಂಗಮವಾಗಿದೆ. ಗಣಪತ್ಯಾಗಮ, ಸೌರಾಗಮ, ವೈಷ್ಣವಾಗಮ, ಶೈವಾಗಮಗಳೆಂಬ ಎಲ್ಲಾ ಉಪಾಸನೆಗಳೂ ಇದರಲ್ಲಿ ಸಮರಸವಾಗಿ ಸೇರಿಸಲಾಗಿದೆ. "ಅಂತಃ ಶಕ್ತೌ ಮಹಿಃ ಶೈವಸ್ಯ ವ್ಯವಹಾರೆಶು ವೈಷ್ಣವ" ಒಳಗೆ ಶಕ್ತನು, ಹೊರಗೆ ಶೈವನು ವ್ಯವಹಾರ ಕಾಲದಲ್ಲಿ ವೈಷ್ಣವನು ಅನ್ನುವಂತೆ, ಒಬ್ಬ ಸಾದಕನು ಕೂಡ ಕ್ರಮೇಣವಾಗಿ ಎಲ್ಲಾ ಮಾರ್ಗಗಳ ಸಮರಸವನ್ನು ಸಾದಿಸಬಹುದು. ಗಾಯತ್ರಿ ಉಪಾಸನೆಯಲ್ಲಿ ಈ ಎಲ್ಲಾ ಸಮರಸಗಳಿರುವುದನ್ನು ಕ್ರಮವಾಗಿ ಸಂಧ್ಯಾವಂದನೆ ಮಾಡುವವರಿಗೆ ಗಮನಿಸಬಹುದಾದ ವಿಚಾರವಾಗಿದೆ. ಗಾಯತ್ರಿ ಜಪವೂ ಪಂಚದಶಾಕ್ಷರಿಯೂ ಒಂದೆ ಆಗಿದೆ ಎಂಬುದನ್ನು ಪರಿವಶ್ಯ ರಹಸ್ಯ ಎಂಬ ಗ್ರಂಥದಲ್ಲಿ ಶ್ರೀ ಭಾಸುರಾನಂದ ನಾಥರೆಂಬ ಬಾಸ್ಕರ ರಾಯರ್ ವಿವರಿಸಿದ್ದಾರೆ.

ಮಹಾಭಾರತದ ಯುದ್ಧ ಆರಂಭಕ್ಕೆ ಮುನ್ನ ಶ್ರೀ ಕೃಷ್ಣಪರಮಾತ್ಮನು ಅರ್ಜುನನನ್ನು ಕುರಿತು ತಾಯಿ ದುರ್ಗೆಯನ್ನು ಪ್ರಾರ್ಥಿಸುವಂತೆ ತಿಳಿಸಿದನು. ಅರ್ಜುನನು ಈ ಕೆಳಕಂಡಂತೆ ಪ್ರಾರ್ಥಿಸಿದನು: (ಅರ್ಜುನಕೃತ ದುರ್ಗಾ ಸ್ತೋತ್ರಂ ಸೂಕ್ಷ್ಮವಾಗಿ ಕೊಟ್ಟಿದೆ)
ವೇದ ಶ್ರುತಿ ಮಹಾ ಪುಣ್ಯೈ ಬ್ರಹ್ಮಣ್ಯೈ ಜಾತವೇದಸಿ | ತ್ವಾಂ ಬ್ರಹ್ಮವಿದ್ಯಾ ವಿದ್ಯಾನಾಂ ಮಹಾ ನಿದ್ರಾಚ ದೇಹಿಮಾಂ |
ಸಾವಿತ್ರಿ ವೇಧಮಾತಾ ಚ ತತಾ ವೇಧಾಂತ ಉಚ್ಯತೆ | ಸ್ತುತಾಸಿ ತ್ವಂ ಮಹಾದೇವಿ ವಿಶುದ್ಧೆ ಅಂತರಾತ್ಮನಃ |
ಜಯಾ ಭವತು ಮೇ ನಿತ್ಯಂ ತ್ವತ್ ಪ್ರಸಾದಾತ್ ರಣಾಜಿರೆ ||

ಆದಿ ಶಂಕರರು ತೋರಿಸಿಕೊಟ್ಟ ಸಾಧನಾ ಮಾರ್ಗದಲ್ಲಿ ಪಂಚಾಯತನ ಪೂಜೆಯನ್ನು ಅವರು ಸ್ಥಾಪಿಸಿದ ಶೃಂಗೇರಿಯಿಂದ ಕಾಂಚೀಮಠದ ವರೆಗೂ ದೇವಿ ಉಪಾಸನೆಯನ್ನು ಹಾಗು ಅವರ ಕೃತಿಗಳಾದ ಪ್ರಪಂಚ ಸಾರ, ಸೌಂದರ್ಯ ಲಹರಿ, ತ್ರಿಶಕ್ತಿ, ಭಾಷ್ಯಗಳು ಮುಂತಾದ ಗ್ರಂಥಗಳನ್ನು, ದೇವಿ ಭುಜಂಗಳಂತಹ ಸ್ತೋತ್ರಗಳ ಸಮರಸವನ್ನು ನೆಲೆಗೊಳಿಸಿವೆ.

ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಜೀವನ ಶೈಲಿಯಿಂದ ಮತ್ತು ಉಪದೇಶಗಳಿಂದ ಎಲ್ಲಾ ಮತಗಳೂ ಒಂದೆ, ಎಲ್ಲಾ ಮತಗಳು ತಾಯಿಗೆ ಸಮವೆ ಎಂಬುದನ್ನು ಲೋಕಕ್ಕೆ ತಿಳಿಸಿಕೊಟ್ಟಿದ್ದಾರೆ/ ತಾಯಿ ಪರಾಶಕ್ತಿಯ ಅನುಗ್ರಹವಾಗುವ ತನಕ ಎಲ್ಲಾ ವೇದಾಂತಗಳು ಕೇವಲ ಪ್ರಶ್ನೆಯಾಗಿಯೆ ಉಳಿದಿರುತ್ತದೆ. ತಾಯಿಯ ಉಪಾಸನಾ ಮಾರ್ಗವನ್ನು ಅನುಸರಿಸಿದಾಗ ಅವಳೆ ಎಲ್ಲಾ ದೇವತೆಗಳನ್ನು ತೋರಿಸಿಕೊಟ್ಟು ಅರ್ಥೈಸಿಸುವಳು. ಆದ್ದರಿಂದ ಅವಳೆ ಸರ್ವ ದೇವ ದೇವಿ ಸ್ವರೂಪಿಣಿ ಎಂಬುದರಲ್ಲಿ ಸಂಶಯವಿಲ್ಲವಾಗಿದೆ.

ಶ್ರೀ ಲಲಿತಾಸಹಸ್ರನಾಮವನ್ನು ಸರಿಯಾದ ಸಮರಸ ಭಾವನೆಯಿಂದ ಪರಿಸಿ ಅನುಸಂಧಾನ ಮಾಡುವವರಿಗೆ ನಿರ್ಗುಣವೂ, ಸದ್ಗುಣವೂ, ಕರ್ಮವೂ, ಭಕ್ತಿಯೂ, ಯೋಗವೂ, ಜ್ಞಾನವೂ, ವಾಮಚಾರಗಳೂ, ದಕ್ಷಿಣಾಚಾರಗಳೂ, ಘೋರವೂ, ಶಾಂತವೂ, ಆತುರವೂ ಮತ್ತು ತವಕವೂ ಎಲ್ಲವೂ ತಾಯಿಯಲ್ಲಿ ಅಡಗಿರುವುದು ಮತ್ತು ಅದಕ್ಕೂ ಮಿಗಿಲಾಗಿ ಅವಳಲ್ಲೆ ಲೀನವಾಗುವ ಮಾರ್ಗವೂ ತೋರುತ್ತವೆ. ಅವಳೆ

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ರೂಪವಾಗಿದ್ದಾಳೆ (೬೩ - ೬೪ ಶ್ಲೋಕಗಳು).
ಸೃಷ್ಟಿಕರ್ತಿ ಬ್ರಹ್ಮರೂಪ ಗೋಪ್ತ್ರೀ ಗೋವಿಂದರೂಪಿಣಿ | ಸಂಹಾರಿಣಿ ರುದ್ರರೂಪಾ ತಿರೋಧಾನಕರೀಶ್ವರೀ | ಸದಾಶಿವಾನುಗ್ರಹದಾ ಪಂಚಕೃತ್ಯ ಪರಾಯಣ. ||

ದೇವಿಯನ್ನು ಉಪಾಸಿಸಲು ಎಲ್ಲಾ ವರ್ಣದವರಿಗೂ ಮತ್ತು ಲಿಂಗದವರಿಗೂ ಸರಿಸಮಾನವಾದ ಹಕ್ಕಿದೆ. "ಸರ್ವ ವರ್ಣಾಧಿಕಾರ ಚರಾರಿಣಾಂ ಯೋಗ್ಯ ಏವಚ" ಶ್ರೀವಿದ್ಯೆಯು ಎಲ್ಲಾ ವಿದ್ಯೆಗಳಿಗೆ ಅಧಿಪತಿಯಾಗಿದೆ, ರಹಸ್ಯಗಳಲ್ಲಿ ರಹಸ್ಯವಾದದ್ದು, ಉತ್ತಮಗಳಲ್ಲಿ ಪರಿಶುದ್ಧವಾದದ್ದು, ನೇರವಾಗಿ ಅನುಭವಿಸಬಹುದಾಗಿದೆ. ತನ್ನ ಜೀವನ ಕರ್ಮಗಳಿಂದ ಹೊರತಾಗಬೇಕಾಗಿದ್ದಿಲ್ಲ. ಅನುಷ್ಟಾನಕ್ಕೆ ಬಹಳ ಸುಲಭವಾಗಿದ್ದಾಗಿದೆ. ಎಂದೂ ಅಳಿಸಲ್ಪಡದಾಗದು ಎಂದು ಭಗವದ್ಗೀತೆಯಲ್ಲಿ (ಅಧ್ಯಾಯ ೯:೨) ಹೇಳಿರುವುದು ಶ್ರೀವಿಧ್ಯಾ ಉಪಾಸನೆಗೆ ಅನ್ವಹಿಸುವುದು.
"ರಾಜವಿಧ್ಯಾಂ ರಾಜಗುಹ್ಯಾಂ ಪವಿತ್ರಂ ಇದಮುತ್ತಮಂ | ಪ್ರತ್ಯಕ್ಷಾವಗಮಮ್ ಧರ್ಮ್ಯಮ್ ಸುಸುಖಂ ಕರ್ತ್ರಂ ಅವ್ಯಯಾಂ ||

ಮನುಷ್ಯರು ನಿದ್ದೆಯಲ್ಲಿರುವಾಗ ಕನಸ್ಸು ಕಾಣುತ್ತಾರೆ, ಕನಸು ಕಾಣುತ್ತಿರುವಾಗ ಅದರ ಕಲ್ಪನೆಯಿಂದ ನಿವೃತ್ತಿಯಾಗಿರುವುದಿಲ್ಲ. ಆದರೆ ಎಚ್ಚರವೆಂಬ ಜ್ಞಾನವುಂಟಾದಾಗ ಅವರಿಗೆ ತನ್ನ ಕನಸಿನಲ್ಲಿ ಕಂಡಂತಹ ತಾತ್ಕಾಲಿಕ ಅನುಭವಗಳಿಂದ ಹೊರಬರುತ್ತಾರೆ. ಅದೇ ತರಹ ಬ್ರಹ್ಮಜ್ಞಾನವೆಂಬ ಎಚ್ಚರವಾದಾಗ ಮನುಷ್ಯನಿಗೆ ಹುಟ್ಟು ಸಾವಿನ ಸಾಗರದಲ್ಲಿ ಉಂಟಾಗುವ ಚಿಂತೆಗಳೆಲ್ಲವೂ ಅಳಿಸಲ್ಪಡುತ್ತದೆ. ಯಾವ ಮನುಷ್ಯನು ಜ್ಞಾನಮಾರ್ಗದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೊ ಅವನ ಜೀವನವೂ ಧಾರ್ಮಿಕವಾಗಿ ಧರ್ಮದ ಹಾದಿಯಲ್ಲಿರುತ್ತದೆ. ಹೇಗೆ ನೀರಿನಿಂದ ಹೊರಬಂದ ಮೀನಿಗೆ ಮತ್ತೆ ನೀರಿನಲ್ಲಿ ಲೀನವಾದಾಗ ಸಂತೃಪ್ತಿಯ ಜೀವನವೋ ಹಾಗೆ ಧರ್ಮದ ಕಟ್ಟುಪಾಡಿನಲ್ಲಿದ್ದು ಜ್ಞಾನ ಸಂಪಾದಿಸಿದವನಿಗೆ ಮಾತ್ರ ತನ್ನ ಸಾಕಾರವು ಸಿದ್ಧಿಸುತ್ತದೆ.

ಭಗವದ್ಗೀತೆಗೂ ಲಲಿತಾಸಹಸ್ರನಾಮಕ್ಕೂ ಹೇಗೆ ಒಂದಕ್ಕೊಂದು ಸಂಬಂಧಗಳಿವೆಯೋ ಹಾಗೆ ಶ್ರೀ ಕೃಷ್ಣನೂ ತಾಯಿ ಲಲಿತೆಯೂ

ಒಂದೆ ಎಂಬುದು ಉಪಾಸಕರಿಗೆ ಮನದಟ್ಟಾಗದೆ ಇರುವುದಿಲ್ಲ. ಗೋಪಿಕೆಯರೊಂದಿಗೆ ವೇಣುಗಾನದಿಂದ ತುಳಸಿಹಾರ ಧರಿಸಿರುವ ತುಂಟನಾಗಿ ಆಟವಾಡುವ ಶ್ರೀ ಕೃಷ್ಣನು ರಣರಂಗದಲ್ಲಿ ಅರ್ಜುನನಿಗೆ ವಿಶ್ವರೂಪ ದರ್ಶನದಲ್ಲಿ ಪೂರ್ತಿ ವಿಶ್ವ ಆಕಾರವನ್ನೆ ತೋರಿಸಿಕೊಟ್ಟಿರುವುದನ್ನು ಒಂದೇ ಶ್ಲೋಕದಲ್ಲಿ ವಿವರಿಸಲಾಗಿದೆ. (ಗೀತೆ ಅಧ್ಯಾಯ ೧೧:೩೨)
"ಕಾಲೋಸ್ಮಿ ಲೋಕಕ್ಷಯ ಕೃತ್ ಪ್ರವೃದ್ಧೋ ಲೋಕಾನ್ ಸಮಾಹರ್ತುಮ್ ಇಹ ಪ್ರವೃತ್ತಃ | ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ ಯೋಽವಸ್ಥಿತಾಃ ಪ್ರತ್ಯಾನೀಕೇಷು ಯೋಧಾಃ ||"

ಘೋರವನ್ನೂ ಮತ್ತು ಶಾಂತತೆ ಎಂಬ ಎರಡು ರೂಪಗಳನ್ನು ಸಮವಾಗಿ ನೋಡದವರಿಗೆ ಭಯವೆಂಬ ಪರದೆಯನ್ನು ತೆರೆಯಲಾಗದು ಹಾಗು ಪೂರ್ಣಜ್ಞಾನದ ಅರಿವಾಗುವುದಿಲ್ಲ. "ನಾನು ನನ್ನಲ್ಲಿ ಶರಣಾದವರಿಗೆ ಕಷ್ಟಗಳನ್ನು ತೊಡೆದುಹಾಕುತ್ತೇನೆ" ಎಂದು ಭಗವಾನ್ ಶ್ರೀ ಕೃಷ್ಣನು ಹೇಳಿಲ್ಲ. ಆದರೆ " ಕಷ್ಟಗಳನ್ನು ಕೊಟ್ಟು ಅದನ್ನು ಎದುರಿಸುವ ಅಥವಾ ಸಹಿಸುವ ಶಕ್ತಿಯನ್ನು ದಯಪಾಲಿಸಿ ಅವರನ್ನು ವೀರರನ್ನಾಗಿ ಮಾಡುತ್ತೇನೆ" ಎಂದಿದ್ದಾನೆ. ಆದ್ದರಿಂದಲೇ ಕುಂತಿದೇವಿಯು "ನಿನ್ನ ಕೃಪೆಯನ್ನು ದಯಪಾಲಿಸಲೆಂದೇ ಈ ಕಷ್ಟಗಳು ಬರುತ್ತಿರಲಿ" ಎಂದು ಪ್ರಾರ್ಥಿಸುತ್ತಾಳೆ.
ಶ್ರೀ ಕೃಷ್ಣನ ಕೃಪಾಕಟಾಕ್ಷದಲ್ಲಿರುವವರು ಸದಾ ಶೋಧನೆಗಳಲ್ಲಿ ಸಾಗಬೇಕಾಗುತ್ತದೆ. ಹಾಗೆ ಅಮ್ಮನವರ ಕೃಪಾಕಟಾಕ್ಷದಲ್ಲಿರುವವರಿಗೂ ತನ್ನ ಲೀಲೆಗಳನ್ನು ತೋರಿಸುತ್ತಾಳೆ. ಶ್ರೀ ಲಲಿತೆಯು ಹೇಗೆ ಸೌಂದರ್ಯ, ಪ್ರೀತಿ ಹಾಗೂ ಕರುಣಾಮೂರ್ತಿಯೋ ಹಾಗೆ ಮೃಗಗಳಂತಿರುವ ಮನುಷ್ಯರಿಗೆ ಭಯಂಕರವಾದವಳು. ಜ್ಞಾನ ವೀರರಿಗೆ ಬಹಳ ಪ್ರಿಯವಾದವಳಾಗಿದ್ದಾಳೆ. ದುಷ್ಟರನ್ನು ಸಂಹರಿಸುತ್ತಾಳೆ. (ಶಿಷ್ಟ ರಕ್ಷಣೆ, ದುಷ್ಟ ಶಿಕ್ಷಣೆ) ಡಂಭಾಚಾರಕ್ಕಾಗಿ ಮಾಡುವ ಯಾಗಗಳನ್ನು ನಾಶಗೊಳಿಸುತ್ತಾಳೆ. ಅವಳ ಕೋಪವು ದುಷ್ಟರಿಗೆ ತೀಕ್ಷ್ಣವಾಗಿದ್ದರೂ ಅವಳಿಗೆ ಶರಣಾದವರಿಗೆ ಅಭಯ ನೀಡುವ ತಂಪಾಗಿರುತ್ತದೆ. ಹಾಗೂ ಅವಳು ಕೊಡುವ ಕಷ್ಟಗಳು ಅವರ ಮನಸ್ಸಿನಲ್ಲಿರುವ ದೈವಿ ಶಕ್ತಿಯನ್ನು ದೃಡಪಡಿಸುತ್ತದೆ. ತಪ್ಪುಗಳನ್ನು ಮಾಡದಂತೆ ಪಾಪಗಳು ಸೇರದಂತೆ ಮಾಡುವುದಾಗಿದೆ. ಸಾವಿರ ವರ್ಷಗಳ ನಿರಂತರ ಬೆಂಕಿಯಂತಿರುವ ಅವಳ ಕೋಪವು ಒಂದೇ ಕ್ಷಣದಲ್ಲಿ ಭಕ್ತಿಗೆ ಮಾಯವಾಗಿ ಚಂದ್ರನಂತೆ ತಂಪಾಗುತ್ತದೆ.

# ಮಕ್ಕಳು ಪ್ರಿಯವಾಗಿ ತಿನ್ನುವಂತಹ ನಿನ್ನ ಪ್ರಸಾದ

ದೈವದ ಮೇಲಿನ ಭಕ್ತಿಗಿಂತಾ ದೈವ ಪ್ರೀತಿಯೇ ಅಧಿಕ ಶಕ್ತಿಶಾಲಿಯಾಗಿದೆ. ಬೇಡರ ಕಣ್ಣಪ್ಪನು ಪ್ರೀತಿಯಿಂದ ಮಾಂಸವನ್ನು ದೇವರಿಗರ್ಪಿಸಿದ. ರಾಮನ ಮೇಲಿನ ಭಕ್ತಿಯಿಂದಲೇ ಗುಹನು ಮೀನನ್ನು ನೈವೇದ್ಯವಾಗಿ ಕೊಟ್ಟನು. ಮುಗ್ಧ ಜನರು ಮಗುವಂತಿರುವ ಬಾಲಾ ತ್ರಿಪುರ ಸುಂದರಿಗೆ ತಮ್ಮಲಿರುವ ಚಾಕಲೇಟನ್ನು ಅರ್ಪಿಸಿ ತಮ್ಮ ಪ್ರೀತಿಯನ್ನು ತೋರ್ಪಡಿಸುತ್ತಾರೆ. ಈ ರೀತಿಯಾದ ಜನತೆಗೆ ಪ್ರಿಯವಾದ ಬಾಲಾ ತ್ರಿಪುರ ಸುಂದರಿಯ ದೇವಸ್ಥಾನವು ತಮಿಳು ನಾಡಿನ ಅರಕ್ಕೋಣಮ್ ಬಳಿಯಿರುವ ನೆಮಿಲಿ ಎಂಬಲ್ಲಿದೆ. ನೆಮಿಲಿಯಲ್ಲಿರುವ ಬ್ರಾಹ್ಮಣ ಕುಟುಂಬದವರು ಕಳೆದ ೩೦೦ ವರ್ಷಗಳಿಂದ ತಮ್ಮ ಇಷ್ಟದೇವತೆಯಾದ ರಾಜ ರಾಜೇಶ್ವರಿಯನ್ನು ಆರಾಧಿಸಿಕೊಂಡು ಬಂದಿದ್ದಾರೆ. ಆ ಕುಟುಂಬದ ಹಿರಿಯರ ಕನಸಿನಲ್ಲಿ "ಹಸಿರು ಬಣ್ಣದ ಲಂಗವನ್ನು ತೊಟ್ಟಿರುವ ಒಂಬತ್ತು ವರ್ಷಗಳ ಬಾಲೆಯಂತಿರುವ ನಾನು ಚಿಕ್ಕ ವಿಗ್ರಹವಾಗಿ ನಿಮ್ಮ ಮನೆಯ ಬಳಿಯಿರುವ ಕುಚಸ್ಥಲೈ ಎಂಬ ನದಿಯಲ್ಲಿರುವೆ. ನನ್ನನ್ನು ಅಲ್ಲಿಂದ ಹೊರ ತೆಗೆದು ನಿಮ್ಮ ಮನೆಯಲ್ಲಿ ಪೂಜಿಸಿರಿ" ಎಂದು ತಾಯಿಯು ಹೇಳಿದಂತಾಯಿತು.

೨೦೦೦ ಸಾವಿರ ವರ್ಷಗಳ ಮೊದಲೆ ಕರುವೂಲ್ ಸಿದ್ಧರು "ನದಿಯ ಸಮೀಪವಿರುವ ಮನೆ, ಅದರಲ್ಲಿರುವ ಕೊಡದಲ್ಲಿ ತಾಯಿ

ಪರಾಶಕ್ತಿಯು ಮಗುವಿನ ರೂಪದಲ್ಲಿ ಅನುಗ್ರಹಿಸಲು ಬರುತ್ತಾಳೆ" ಎಂದು ಬರೆದಿಟ್ಟಿದ್ದಾರೆ. ಅವರು ಬರೆದಿರುವುದು ಮತ್ತು ಹಿರಿಯರ ಕನಸಿನ ಮಾತುಗಳು ಎಷ್ಟು ಸಾಮ್ಯತೆಗಳನ್ನು ಹೊಂದಿದೆ ಅಲ್ಲವೆ? ಮಾರನೆ ದಿನ ಆ ಕುಟುಂಬದವರು ಕುಚಸ್ಥಲೈವೆಂಬ ನದಿಗೆ ಹೋಗಿ, ನೀರಿನಲ್ಲಿ ಮಿಂದು ಹುಡುಕಿದಾಗ ಅವರಿಗೆ ಒಂದಡಿಗಿಂತಲೂ ಚಿಕ್ಕಾದಾದ ವಿಗ್ರಹವು ದೊರೆಯಿತು. ಆ ವಿಗ್ರಹವು ತಮ್ಮ ಕನಸಿನಲ್ಲಿ ಹೇಳಿದಂತಹ ಆಕೃತಿಯನ್ನು ಹೊಂದಿರುವುದನ್ನು ಕಂಡು ಅವರಿಗೆ ಅತ್ಯಂತ ಆನಂದವಾಯಿತು. ತಮ್ಮ ಆರಾಧ್ಯ ದೇವತೆಯೇ ತಮ್ಮ ಮನೆಗೆ ಮಗುವಾಗಿ ಬಂದಿದ್ದಾಳೆಂದು ಅರ್ಥೈಸಿಕೊಂಡು ಅವರು ಆ ವಿಗ್ರಹಕ್ಕೆ "ಬಾಲಾ" ಎಂಬ ಹೆಸರಿನಲ್ಲಿ ಪೂಜಿಸತೊಡಗಿದರು. ಆ ಹಿರಿಯರ ಜೀವನಾವಧಿಯ ನಂತರವೂ ಆ ಕುಟುಂಬದವರು ವಿಗ್ರಹದ ಪೂಜೆಯನ್ನು ನಿರಂತರವಾಗಿ ಮಾಡಿಕೊಂಡೆ ಬಂದಿದ್ದಾರೆ. ೧೯೪೪ರಲ್ಲಿ ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರಿಗೆ ಈ ವಿಚಾರವು ತಿಳಿದಾಗ, ಅವರು ಕೂಡಲೇ ನೆಮಿಲಿಗೆ ಪಯಣಿಸಿ, ಆ ವಿಗ್ರಹವನ್ನು ಕಂಡು ಅತ್ಯಂತ ಭಕ್ತಿಭಾವನೆಗಳೊಂದಿಗೆ ಅದನ್ನು ನಮಸ್ಕರಿಸಿ ತಮ್ಮ ಎದೆಗೆ ಅಪ್ಪಿಕೊಂಡರು. ಹಾಗು ಅಲ್ಲಿಯೇ ಸ್ಥಿರವಾಗಿ ಒಂಬತ್ತು ದಿನಗಳವರೆಗೂ ತಂಗಿದ್ದು, ಆ ವಿಗ್ರಹಕ್ಕೆ ಪೂಜೆ ಸಲ್ಲಿಸಿದರು. ಹೀಗೆ ಈ ವಿಗ್ರಹದ ಪೂಜೆಯನ್ನು ಶ್ರೀ ಕೃಪಾನಂದ ವಾರಿಯಾರ್ ರವರೂ ನೆರೆವೇರಿಸಿದ್ದಾರೆ. ಆ ಕುಟುಂಬದ ವಂಶದಲ್ಲಿ ಬಂದಿರುವ ಮತ್ತು ಅಲ್ಲಿನ ದೇವಸ್ಥಾನದ ಧರ್ಮದರ್ಶಿಗಳು ಮತ್ತು ಕವಿಗಳೂ ಆದ ಎಯಳ್ಳಣಿಯವರು " ಊರಿಗೆಲ್ಲಾ ಅವಳೆ ಉಪಕಾರಿ, ತಿರುವೇರ್ಕಾಡು ಎಂಬಲ್ಲಿ ವಾಸಿಸುವ ಕರುಮಾರಿ" ಎಂಬ ಕವನವನ್ನು ಮತ್ತು ನಾನಾ ಹಾಡುಗಳನ್ನು ಬರೆದಿದ್ದಾರೆ. ಈ ಗೀತೆಗಳ ಜೊತೆಯಾಗಿ ಬಹಳಷ್ಟು "ಬಾಲಾ ತ್ರಿಪುರ ಸುಂದರಿ" ಗೀತೆಗಳನ್ನು ತಮಿಳಿನ ಪ್ರಸಿದ್ಧ ಹಾಡುಗಾರರಾದ ಶ್ರೀ ಶೀರ್ಗಾಯಿ ಗೊವಿಂದರಾಜನ್ ರವರು ತಮಿಳಲ್ಲಿ ಹಾಡಿದ್ದಾರೆ. ಆ ಕಾರಣವಾಗಿ ಈ ಅಂಬಿಕೆಯು ಮತ್ತು ಸ್ಥಳದ ಮಹಿಮೆಯು ಹೊರಗಿನ ಜಗತ್ತಿಗೆ ಪ್ರಸಿದ್ಧಿಯಾಯಿತು.

ಅಂಬಿಕೆಯು ಬಾಲಕಿಯಾಗಿರುವುದು ಮತ್ತು ನವೀನ ಕಾಲಕ್ಕೆ ಅನುಗುಣವಾಗಿ ಈ ದೇವಸ್ಥಾನದಲ್ಲಿ ಚಾಕಲೇಟ್ ಪ್ರಧಾನ ನೈವೇಧ್ಯ ಮತ್ತು ಪ್ರಸಾದವಾಗಿದೆ. ಇಲ್ಲಿಗೆ ಬಹಳಷ್ಟು ಭಕ್ತಾದಿಗಳು ಬಂದು ಚಾಕಲೇಟ್ ಮತ್ತು ಮಕ್ಕಳಿಗೆ ಲೇಖನಿಗಳನ್ನು (PEN) ಪ್ರಸಾದವಾಗಿ

ನೈವೇಧ್ಯ ಮಾಡಿ ನಂತರ ಅದನ್ನು ವಿತರಿಸುವುದರಿಂದ ಅವರು ಅತಿ ಉತ್ತಮ ಫಲಗಳು ಮತ್ತು ವಿದ್ಯೆ ಹೊಂದಿದ್ದಾರೆಂಬುದು ಪ್ರತೀತಿಯಾಗಿ ಅನುಭವ ಸತ್ಯವಾಗಿದೆ. ಮಕ್ಕಳಿಲ್ಲದ ದಂಪತಿಗಳು ಇಲ್ಲಿ ಪೂಜಿಸಿರುವದರಿಂದ ಮಕ್ಕಳನ್ನು ಪಡೆದಿರುವುದಕ್ಕೆ ಎಷ್ಟೋ ಉದಾಹರಣೆಗಳಿವೆ.




ಈ ಪವಿತ್ರ ಕ್ಷೇತ್ರದಲ್ಲಿ ನವರಾತ್ರಿಯಲ್ಲಿನ ಆಚರಣೆಯು ವಿಶಿಷ್ಟವಾಗಿದೆ. ಆ ಸಮಯದಲ್ಲಿ ಮಹನ್ಯಾಸ ಪೂರ್ವಕ ರುದ್ರಾಭಿಷೇಕ, ದೇವಿ ಭಾಗವತ ಪಾರಾಯಣ ಮತ್ತು ಸಹಸ್ರನಾಮದ ಪೂಜೆಯಲ್ಲಿ ತೆಂಗಿನ ಕಾಯಿಗೆ ತಾಯಿಯ ಮುಖದ ಅಲಂಕಾರವನ್ನು ಮಾಡುತ್ತಾರೆ. ನಂತರ ಆ ತೆಂಗಿನಕಾಯಿಯನ್ನು ಒಂದು ವರ್ಷಗಳ ತನಕ ಜೋಪಾನ ಮಾಡಿರುತ್ತಾರೆ. ನಂತರದ ನವರಾತ್ರಿಯ ಮೊದಲ ದಿನ, ಆ ತೆಂಗಿನಕಾಯಿಯನ್ನು ಒಡೆದು ಅದರಿಂದ ಮಾಡಿದ ಸಿಹಿ ತಿನಿಸನ್ನು ಭಕ್ತಾದಿಗಳಿಗೆ ಪ್ರಸಾದವಾಗಿ ಹಂಚುತ್ತಾರೆ. ಆಶ್ಚರ್ಯವೆಂದರೆ ಆ ತೆಂಗಿನಕಾಯಿಯು ಒಂದು ವರ್ಷದವರೆಗಿದ್ದರೂ ಕೆಟ್ಟಿರುವುದಿಲ್ಲ. ಇದರಿಂದ ಆ ತಾಯಿಯ ಮತ್ತು ಕ್ಷೇತ್ರದ ಮಹಿಮೆಗಳು ನಮಗರ್ಥವಾಗುವುದಲ್ಲವೇ.

# ಮಹಿಮೆ (ಅರ್ಪಣೆ)



ಈ ರೀತಿಯಾಗಿ ಲಲಿತಾಸಹಸ್ರನಾಮದಲ್ಲಿ ಬರುವ ನಾಮಗಳು ಎಷ್ಟು ಮಹತ್ವವಾದವುಗಳು ಮತ್ತು ಮಹಿಮೆಗಳಾಗಿವೆಯೆಂದು ಕಾಂಚೀಪುರದ ಗುರುಗಳಾದ ಶ್ರೀ ಚಂದ್ರಶೇಖರ ಸರಸ್ವತಿಯವರು ೧೯೮೫ರಲ್ಲಿ ಆಂಧ್ರದಲ್ಲಿರುವ ಚಿತ್ತೂರಿಗೆ ಆಗಮಿಸಿದ್ದಾಗ ಹೇಳಿದ ಮಾತುಗಳಾದ " ಶ್ರೀ ಲಲಿತಾಸಹಸ್ರ ನಾಮವನ್ನು ಶ್ರದ್ಧೆಯಿಂದ ಪಾರಾಯಣ ಮಾಡುವುದು ವೇದವನ್ನು ಪಾರಾಯಣ ಮಾಡುವುದಕ್ಕೆ ಸಮ" ಎಂದದ್ದನ್ನು ನನ್ನ ಶಕ್ತ್ಯಾನುಸಾರ ಮತ್ತು ಜ್ಞಾನಾನುಸಾರವಾಗಿ ಎಲ್ಲರಿಗೂ ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡಿದ್ದೇನೆ.

ಶ್ರೀ ವ್ಯಾಸ ಮಹರ್ಷಿಗಳು ತಿಳಿಯ ಪಡಿಸಿರುವ ೧೮ ಪುರಾಣಗಳಲ್ಲಿ ಬ್ರಹ್ಮಾಂಡ ಪುರಾಣವೂ ಒಂದು. ಅದರಲ್ಲಿ ಪ್ರಕ್ರಿಯ ಪಾದ, ಅನುಷಕ್ ಪಾದ, ಉಪೋದ್ಘಾತ ಪಾದ ಮತ್ತು ಉಪಸಂಹಾರ ಪಾದಗಳೆಂಬ ನಾಲ್ಕು ಪಾದಗಳಿವೆ. ಕೊನೆಯ ಪಾದವಾದ ಉಪಸಂಹಾರ ಪಾದದ ಕೊನೆಯಲ್ಲಿ ಬರುವುದೆ ಶ್ರೀ ಲಲಿತೋಪಾಖ್ಯಾನವು ಉಳ್ಳದ್ದಾಗಿದೆ. ಅದರಲ್ಲಿ ಮಂತ್ರ ಕಾಂಡ, ನ್ಯಾಸ ಕಾಂಡ, ಪೂಜಾ ಕಾಂಡ, ಪ್ರಸರಣ ಕಾಂಡ, ಹೋಮ ಕಾಂಡ, ರಹಸ್ಯ ಕಾಂಡ, ಸ್ತೋತ್ರ ಕಾಂಡವೆಂಬ ಏಳು

ಕಾಂಡಗಳಿವೆ. ಸ್ತೋತ್ರ ಕಾಂಡದ ಕೊನೆಗೊಳ್ಳುವ ಕಿರೀಟವಾಗಿ ಶ್ರೀ ಲಲಿತಾ ಸಹಸ್ರನಾಮವು ಪ್ರಜ್ವಲಿಸುತ್ತಿದೆ.




ನನ್ನ ಅಲ್ಪಜ್ಞಾನಕ್ಕೆ ತಿಳಿದಿರುವಂತೆ ಎಪ್ಪತ್ತೆರಡು ಗ್ರಂಥಗಳಲ್ಲಿ ಶ್ರೀ ಲಲಿತಾ ಸಹಸ್ರನಾಮದಲ್ಲಿರುವ ನಾಮಾವಳಿಗಳ ಅರ್ಥವನ್ನು ಗಮನಿಸಬಹುದಾಗಿದೆ. ಋಗ್, ಯಜುರ್, ಸಾಮ ಮತ್ತು ಅಥರ್ವ

ವೇದಗಳು, ಈಶಾವಾಕ್ಯೋಪನಿಷತ್, ಕೇನೋಪನಿಷತ್, ಪ್ರಶ್ನ ಉಪನಿಷತ್, ಮುಂಡಕ ಉಪನಿಷತ್, ತೈತ್ತರೀಯ ಉಪನಿಷತ್, ಐತರೇಯ ಉಪನಿಷತ್, ಚಂಡೂಕ ಉಪನಿಷತ್, ಬೃಹದಾರಣ್ಯ ಉಪನಿಷತ್, ಭಾವನೋಪನಿಶತ್, ನಾರಾಯಣ ಉಪನಿಷತ್, ಶ್ವೇಪಾಪನೋಪನಿಶತ್, ರುದ್ರಮ್, ಭಗವದ್ಗೀತೆ, ಸೌಂದರ್ಯ ಲಹರಿ, ನಾರಾಯಣ ಸೂಕ್ತ, ಅರುಣ ಪ್ರಶ್ನ, ಶ್ರೀ ಸೂಕ್ತ, ಶಿವಾನಂದ ಲಹರಿ, ತಿರುಪ್ಪಾವೈ, ತಿರುವೆಂಭಾವೈ, ತಿರುಕುರಳ್, ಮನೋನ್ಮಣಿ, ತಿರುವಾಚಕಮ್, ತ್ರಿಪುರ ರಹಸ್ಯ, ಭವಿಷ್ಯತ್ ಪುರಾಣ, ದೇವಿಭಾಗವತ, ಕಾಳಿಕಾ ಪುರಾಣ, ನವರತ್ನ ಮಾಲಿಕೆ, ದೇವಿ ಮಹಾತ್ಮೆ, ಲಿಂಗ ಪುರಾಣ, ಮಾರ್ಕಾಂಡೇಯ ಪುರಾಣ, ಲಲಿತೊಪಾಖ್ಯಾನ, ತಿರುಮಂತ್ರಂ,. ಆಪಸ್ಥಂಬ, ತಾಯ್ ಮಾನವರ್, ವ್ಯಾಸರ್, ದೇವಿ ಪುರಾಣ, ರಘುವಂಶ, ಅಭಿರಾಮಿ ಅಂದಾದಿ, ಬ್ರಹ್ಮಾಂಡ ಪುರಾಣ, ವಿಷ್ಣು ಪುರಾಣ, ಪತಾಂಜಲಿ ಯೋಗ ಸೂತ್ರಂ, ತ್ರಿಪುರ ಸಾರಂ, ಬೃಹತ್ ಪರಾಶರ ಸ್ಮೃತಿ, ಸಂಧ್ಯಾವಂದನಂ, ಅನ್ನಪೂರ್ಣಾ ಸ್ತೋತ್ರಮ್, ತ್ರಿಶತಿ, ವಿಷ್ಣು ಸಹಸ್ರನಾಮ, ಕೂರ್ಮ ಪುರಾಣ, ವರಾಹ ಪುರಾಣ, ವಾಮನ ಪುರಾಣ, ಮನುಸ್ಮೃತಿ, ಬ್ರಹ್ಮಸೂತ್ರಂ, ಬ್ರಹ್ಮಗೀತೆ, ವಾಯವ ಸಂಹಿತೆ, ಜ್ಞಾನಾರಣವ ತಂತ್ರಂ ಎಂಬ ಎಲ್ಲಾ ಗ್ರಂಥಗಳಲ್ಲೂ ಒಳಗೊಂಡ ಶ್ರೀ ಲಲಿತಾಸಹಸ್ರನಾಮದ ಪಾರಾಯಣದಿಂದ, ನಾವು ನ್ಯಾಯಯುತವಾಗಿ ಏನನ್ನು ಬಯಸುತ್ತೇವೋ ಅವುಗಳು ತಾನಾಗೆ ಬಂದು ಸೇರುವುದರಲ್ಲಿ ಯಾವುದೇ ಸಂಶಯವಿಲ್ಲ, ಸಂಶಯವಿಲ್ಲ, ಸಂಶಯವಿಲ್ಲ.

ಇದು ಸತ್ಯ, ಇದು ಸತ್ಯ, ಇದು ಸತ್ಯ.

# || ಶ್ರೀ ಕೃಷ್ಣಾರ್ಪಣಮಸ್ತು ||

NEMILI SRI BALA
எல்லோரும் ஒரு சேரக் கைவிட்டு விட்டாலும்
இல்லை எனச் சொல்லி கைகழுவி விட்டாலும்
என் பிஞ்சுக் கைகள் உன் கைப்பற்றும்
கடைசி வரை உன்னைக் காப்பாற்றும்.
— ஸ்ரீமான் வாக்கு


ஸ்ரீ பாலாதிரிபுர சுந்தரி
ஸ்ரீ சக்கரம்